# ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882

Excel Refrigeration Service

Refrigeration & Bakery Equipment
Bommasandra, Bangalore

ರೋಟ್ರಿ ರ್‍ಯಾಕ್ ಓವೆನ್‌ಗಳು
ಸ್ಪಿರಲ್ ಮಿಕ್ಸರ್ಸ್
ಪ್ಲಾನೆಟರಿ ಮಿಕ್ಸರ್ಸ್
ಇಂಪೋರ್ಟೆಡ್ ಓವೆನ್‌ಗಳು.
ಕಿಚನ್ ಫ್ರೀಜರ್‌ಗಳು
ಜ್ಯೂಸ್ ಮೆಷಿನ್‌ಗಳು
ವರ್ಟಿಕಲ್ ಕೇಕ್ ಡಿಸ್‌ಪ್ಲೇ.

Mob : 9902030007/9900021097

## ಚಿನ್ನ, ಬೆಳ್ಳಿಗೆ ಗುರಿಯಿಟ್ಟ ನೀರೂ ಬಾಕ್ಸರ್‌ನಲ್ಲಿ ಪರ್ವೀನ್ ಅಂಕುಶ್ ಫೈನಲ್‌ಗೆ

**ಏಷ್ಯನ್ ಗೇಮ್ಸ್**

**ನಗೋಯಾ, ಸೆ.29-** ಟ್ರ್ಯಾಪ್ ಶೂಟರ್ ಗಳು ಇಂದು ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದ ಪರಿಣಾಮ ಭಾರತ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಪದಕ ಬೇಟೆಯನ್ನು ಮುಂದುವರಿಸಿದೆ. ಜತೆಗೆ ಪದಕ ಪಟ್ಟಿಯಲ್ಲಿ ಅಗ್ರ ಹತ್ತರೊಳಗೆ ಸೇರುವ ಹಾದಿಯಲ್ಲಿದೆ.

ಇಂದು ನಡೆದ ಮಹಿಳೆಯರ ಟ್ರ್ಯಾಪ್ ವೈಯಕ್ತಿಕ ಫೈನಲ್ ಸ್ಪರ್ಧೆಯಲ್ಲಿ ನೀರೂ ಧಂಡ ಅವರು 6 ಸಿರೀಸ್ ನಲ್ಲಿ ಒಟ್ಟು 28 ಅಂಕಗಳನ್ನು ಗಳಿಸಿ ಮೊದಲ ಸ್ಥಾನದೊಂದಿಗೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಇದು ಹಾಲಿ ಕೂಟದ ಶೂಟಿಂಗ್ ವಿಭಾಗದಲ್ಲಿ ಭಾರತ ಒಲಿದ ಎರಡನೇ ಹಾಗೂ ವೈಯಕ್ತಿಕ ವಿಭಾಗದಲ್ಲಿ ಮೊದಲ ಚಿನ್ನ ಹಾಗೂ ಒಟ್ಟಾರೆ ಐದನೇ ಸ್ವರ್ಣ ಪದಕವಾಗಿದೆ.

ಐಚಿಯಲ್ಲಿನ ಪ್ರತಿ-ಕೂಲ ವಾತಾವರಣದ ನಡುವೆಯೂ ನಿಖರ ಗುರಿಕಾಯ್ದುಕೊಂಡ ನೀರೂ ಪ್ರತಿಸ್ಪರ್ಧಿಗಳಿಗೆ ದಿಟ್ಟ ಪ್ರತಿರೋಧ ನೀಡುತ್ತಾ ಗು-ರಿಯತ್ತ ಮುನ್ನಡೆದರು. ಈ ವರ್ಷದ ಐಎಸ್ ಎಸ್ ಎಫ್ ವಿಶ್ವ ಕಪ್ ನ ಟ್ರ್ಯಾಪ್ ಶೂಟಿಂಗ್ ನಲ್ಲಿ ಸ್ವರ್ಣ ಪದಕ ಗೆದ್ದ ಮೊದಲ ಭಾರತೀಯ ಶೂಟರ್ ಎಂಬ ಹಿರಿಮೆ ಹೊಂದಿದ್ದ ನೀರೂ ಫೈನಲ್ ಪ್ರವೇಶಿಸಿ ಬಂಗಾರದ ಭರವಸೆ ಹೆಚ್ಚಿಸಿದ್ದರು.

ಇದಕ್ಕೂ ಮುನ್ನ ಭಾರತದ ಮಹಿಳಾ ಶೂಟರ್ ಗಳು ಟ್ರ್ಯಾಪ್ ತಂಡ ವಿಭಾಗದಲ್ಲಿ ಎರಡನೇ ಸ್ಥಾನಕ್ಕೆ ಕುಸಿದು ಬೆಳ್ಳಿಯೊಂದಿಗೆ ಸ್ಪರ್ಧೆ ಮುಗಿಸಿತು. ಆದರೆ ಪುರುಷರ ಟ್ರ್ಯಾಪ್ ತಂಡ ಆರನೇ ಸ್ಥಾನಕ್ಕೆ ತೃಪ್ತಿಪಟ್ಟಿತು.

ವೈಯಕ್ತಿಕ ವಿಭಾಗದಲ್ಲಿ ನೀರೂ ಚಿನ್ನ ಗೆಲ್ಲುವ ಮೊದಲು ತಂಡ ವಿಭಾಗದಲ್ಲಿ ಅಶಿಮಾ ಅಹ್ಲಾವತ್ ಮತ್ತು ಮನಿಷಾ ಕೀರ್ ಅವರೊಂದಿಗೆ ನೀರೂ ದೇಶಕ್ಕೆ ಬೆಳ್ಳಿ ತಂದುಕೊಟ್ಟರು. ಭಾರತ 328 ಅಂಕಗಳೊಂದಿಗೆ ಎರಡನೇ ಸ್ಥಾನ ಗಳಿಸಿದರೆ, ಚೀನಾ 346 ಅಂಕಗಳೊಂದಿಗೆ ಮೊದಲ ಸ್ಥಾನ ಗೆದ್ದುಕೊಂಡಿತು. 325 ಅಂಕಗಳನ್ನು ಕಲೆಹಾಕಿದ ಕುವೈತ್ ಮೂರನೇ ಸ್ಥಾನಕ್ಕೆ ಸವಾಧಾನಪಟ್ಟುಕೊಂಡಿತು.



ಸದ್ಯ ಭಾರತ 5 ಚಿನ್ನ, 21 ಬೆಳ್ಳಿ ಮತ್ತು 22 ಕಂಚು ಸೇರಿ ಒಟ್ಟು 48 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ 11ನೇ ಸ್ಥಾನದಲ್ಲಿದೆ.

**ಕ್ರಿಕೆಟ್: ಭಾರತ – ಶ್ರೀಲಂಕಾ ಸೆಮಿಫೈನಲ್ ಫೈಟ್**

ನೇಪಾಳ ಮತ್ತು ಶ್ರೀಲಂಕಾ ನಡುವಿನ ಏಷ್ಯನ್ ಗೇಮ್ಸ್ ಕ್ರಿಕೆಟ್ ಟೂರ್ನಿಯ 2ನೇ ಕ್ವಾರ್ಟರ್ ಫೈನಲ್ ಪಂದ್ಯ ಮಳೆಯಿಂದಾಗಿ ರದ್ದಾದ ಕಾರಣ ಶ್ರೇಯಾಂಕ ಆಧಾರದ ಮೇರೆಗೆ ಶ್ರೀಲಂಕಾ ನಾಲ್ಕರ ಘಟ್ಟ ತಲುಪಿದ್ದು, ಇದೇ 30ರಂದು ಭಾರತ

ಪುಟ 2

## ನೈಸ್ ಯೋಜನೆ ಲೂಟಿ ಬಹಿರಂಗ ಚರ್ಚೆಗೆ ಬನ್ನಿ



**ಎಚ್‌ಡಿಕೆ ಸವಾಲು**

**ಬೆಂಗಳೂರು,ಸೆ.29-** ನೈಸ್ ಯೋಜನೆಯಲ್ಲಿ ನಡೆದಿರುವ ಲೂಟಿಗೆ ಸಂಬಂಧಿಸಿದಂತೆ ಬಹಿರಂಗ ಚರ್ಚೆಗೆ ಆಗ್ರಹಿಸಿರುವ ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಚರ್ಚೆ ನಡೆಯಲಿ ಎಂದು ಸವಾಲು ಹಾಕಿದ್ದಾರೆ.

ನೈಸ್ ಯೋಜನೆಯಲ್ಲಿ ನಡೆದಿರುವ ಲೂಟಿ ಕುರಿತು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿಂದು ಸುದೀರ್ಘ ಪತ್ರಿಕಾಗೋಷ್ಠಿ ನಡೆಸಿ, ದಾಖಲೆಗಳ ಸಮೇತ ನೈಸ್ ಲೂಟಿಯನ್ನು ಬಿಚ್ಚಿಟ್ಟ ಹೆಚ್.ಡಿ. ಕುಮಾರಸ್ವಾಮಿ ಅವರು,

ಪುಟ 2

# ಮೋದಿ ರಾಜೀನಾಮೆಗೆ 'ಕೈ' ಪಟ್ಟು

## ಮುಖ್ಯ ಚುನಾವಣಾ ಆಯುಕ್ತರ ಹುದ್ದೆಯಿಂದ ಜ್ಞಾನೇಶ್ ವಜಾಕ್ಕೆ ಸಿಡಬ್ಲ್ಯೂಸಿ ಸಭೆಯಲ್ಲಿ ಖರ್ಗೆ ಒತ್ತಾಯ

The Best Jewellery
•GOLD •SILVER •DIAMOND
BIS 916 HALLMARKED GOLD JEWELLERY
ಚಿನ್ನ ಮತ್ತು ಬೆಳ್ಳಿ ಖರೀದಿಸಲು ಪ್ರತಿಷ್ಠಿತ ಆಭರಣ ಶೋರೂಮ್.
T & C Apply
ನಿಮ್ಮ ಹಳೆಯ ಚಿನ್ನವನ್ನು ನಾವು ಆನ್‌ಲೈನ್ ದರದಲ್ಲಿ ಖರೀದಿಸುತ್ತೇವೆ.
Making Charges Starting from 3%
Benefits
*Pay flexible amounts for 10 months and purchase on 11th month. *50% off on making charges on all gold ornaments. *This offer will be valid only on the total amount accumulated for 10 months.
#6, 1/1, 11th Main Road Gokula 1st Stage, Bombay Dyeing Road, Opp Comfort Inn Hotel, Yeshwanthpur, Bengaluru- 560 054. Call: 080-41146916 / +91-9686062916

**ನವದೆಹಲಿ.ಸೆ.29-** ಮತದಾರರ ಪಟ್ಟಿ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿನ ಅಕ್ರಮ ಆರೋಪಗಳಿಗೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್‌ರನ್ನು ತಕ್ಷಣವೇ ಹುದ್ದೆಯಿಂದ ವಜಾ ಮಾಡಬೇಕು. ಚುನಾವಣಾ ಆಯೋಗದ ಮುಖ್ಯಸ್ಥರ ಮೇಲೆ ಒತ್ತಡ ಹೇರಿದ ಆರೋಪದ ಮೇಲೆ ಪ್ರಧಾನಿ ನರೇಂದ್ರ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.

ದೆಹಲಿಯಲ್ಲಿ ಪಕ್ಷದ ಕಚೇರಿಯಲ್ಲಿ ಇಂದು ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿನ ಅಕ್ರಮ ಆರೋಪಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲಾಗುವುದು.ಈ ಬಗ್ಗೆ ಕಾಂಗ್ರೆಸ್ ಬೀದಿಗಿಳಿದು ಹೋರಾಟ ನಡೆಸಲಿದೆ ಎಂದು ತಿಳಿಸಿದ್ದಾರೆ.

ಸಿಡಬ್ಲ್ಯೂಸಿ ಸಭೆಯಲ್ಲಿ ಖರ್ಗೆ ಐದು ಪ್ರಮುಖ ಬೇಡಿಕೆಗಳನ್ನು ಮಂಡಿಸಿದ್ದಾರೆ. ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಾರ್ವಜನಿಕಗೊಳಿಸಬೇಕು, ಹೆಸರುಗಳನ್ನು ಕೈಬಿಡಲಾದ ಮತದಾರರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕು ಮತ್ತು ಎಲ್ಲಾ ರಾಜಕೀಯ ಪಕ್ಷಗಳಿಗೆ ಸರಳ ಸ್ವರೂಪದ ಮತದಾರರ ಪಟ್ಟಿಯನ್ನು ಸಮಯಕ್ಕೆ ಸರಿಯಾಗಿ ಒದಗಿಸಬೇಕು ಎಂದು ಹೇಳಿದರು.

ಗಂಭೀರ ಲೋಪದೋಷಗಳು ಕಂಡುಬಂದ ಕಡೆಗಳಲ್ಲಿ ಸ್ವತಂತ್ರ ಹಾಗೂ ನಿರ್ದಿಷ್ಟ ಕಾಲಮಿತಿಯ ತನಿಖೆ ನಡೆಸಬೇಕು ಮತ್ತು ಮಾಹಿತಿಯನ್ನು ಮುಚ್ಚಿಡಲಾಗುತ್ತಿದೆ ಎಂಬ ಭಾವನೆ ಬಾರದಂತೆ ಚುನಾವಣಾ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಬೇಕು ಎಂದು ಆಗ್ರಹಿಸಿದರು

ಇಬ್ಬರು ಚುನಾವಣಾ ಆಯುಕ್ತರೇ ಸಿಇಸಿ ಅವರ ಕ್ರಮಗಳನ್ನು ಸ್ವೇಚ್ಛಾಚಾರದ ಮತ್ತು ಅಸಮಂಜಸ ನಿರ್ಧಾರ ಎಂದು ಕರೆದಿದ್ದಾರೆ. ಅವರು ಆಡಳಿತಾರೂಢ ಪಕ್ಷಕ್ಕೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬುದು ಈಗ ಇಡೀ ದೇಶಕ್ಕೆ ತಿಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ಆ ಹುದ್ದೆಯಲ್ಲಿ ಮುಂದುವರಿಯುವ ಹಕ್ಕು ಅವರಿಗಿಲ್ಲ ಮತ್ತು ಅವರನ್ನು ತಕ್ಷಣವೇ ತೆಗೆದುಹಾಕಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಮುಖ್ಯ ಚುನಾವಣಾ ಆಯುಕ್ತರ ಮೇಲೆ ಒತ್ತಡ ಹೇರಿದ ಕಾರಣಕ್ಕಾಗಿ ಪ್ರಧಾನ ಮಂತ್ರಿ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಹೇಳಿದರು.

ಮತದಾರರ ಪಟ್ಟಿಯಲ್ಲಿ ಪಾರದರ್ಶಕತೆ ಇರಬೇಕು ಮತ್ತು ಚುನಾವಣಾ ಪ್ರಕ್ರಿಯೆಯು ನಿಷ್ಪಕ್ಷಪಾತವಾಗಿರಬೇಕು ಎಂದು ನಾವು ಸಿಡಬ್ಲ್ಯೂಸಿ ಸಭೆಯಲ್ಲಿ ಪ್ರತಿಜ್ಞೆ ಮಾಡಬೇಕು. ಸಂಸ್ಥೆಗಳು ಸ್ವತಂತ್ರವಾಗಿರಬೇಕು ಮತ್ತು ಪ್ರತಿಯೊಬ್ಬ ಭಾರತೀಯನ ಮತವನ್ನು ರಕ್ಷಿಸಬೇಕು ಎಂದರು.

ಇದು ನಮ್ಮ ಸಂವಿಧಾನದ ಮೂಲ ಮಂತ್ರವಾಗಿದೆ ಮತ್ತು ನಮ್ಮ ಪ್ರಜಾಪ್ರಭುತ್ವದ ಆತ್ಮವಾಗಿದೆ.ಈ ಜವಾಬ್ದಾರಿಯನ್ನು ಪೂರೈಸುವಲ್ಲಿ ಕಾಂಗ್ರೆಸ್ ಪಕ್ಷವು ಹಿಂದೆ ಸರಿಯುವುದಿಲ್ಲ ಎಂದು ತಿಳಿಸಿದರು.

ಈ ಎಲ್ಲಾ ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲಾಗುವುದು ಹಾಗೂ ದೇಶಾದ್ಯಂತ ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದು ಘೋಷಿಸಿದರು.



### ಸಿಇಸಿ ವಿರುದ್ಧ ವಿಚಾರಣೆಗೆ ಸುಪ್ರೀಂ ಅಸ್ತು

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಚುನಾವಣಾ ಆಯೋಗದ ಕೆಲವು ನಿರ್ಧಾರಗಳ ಬಗ್ಗೆ ಪ್ರಶ್ನೆ ಎತ್ತಿರುವ ಅರ್ಜಿಯನ್ನು ಮುಂದಿನ ವಾರ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿ. ಮೋಹನಾ ಅವರನ್ನೊಳಗೊಂಡ ಪೀಠದ ಮುಂದೆ ಹಿರಿಯ ವಕೀಲ ವಿಕಾಸ್ ಸಿಂಗ್ ಅವರು ಅರ್ಜಿಯ ತ್ವರಿತ ವಿಚಾರಣೆಗೆ ಮನವಿ ಮಾಡಿದರು.

ಬಹುಸದಸ್ಯರನ್ನೊಳಗೊಂಡ ಚುನಾವಣಾ ಆಯೋಗದ ನಿರ್ಧಾರಗಳು ಕಾನೂನುಬದ್ಧ ವ್ಯವಸ್ಥೆಯ ಪ್ರಕಾರ ಸರ್ವಾನುಮತದಿಂದ ಅಥವಾ ಬಹುಮತದ ಆಧಾರದ ಮೇಲೆ ಕೈಗೊಳ್ಳಬೇಕಾಗುತ್ತದೆ ಎಂದು ವಿಕಾಸ್ ಸಿಂಗ್ ನ್ಯಾಯಪೀಠದ ಗಮನಕ್ಕೆ ತಂದರು. ಪ್ರಸ್ತುತ ಆಯೋಗದ ಕಾರ್ಯವೈಖರಿಯಲ್ಲಿ ಕೆಲವು ನಿರ್ಧಾರಗಳು ಸರ್ವಾನುಮತದಿಂದ ಕೈಗೊಳ್ಳಲಾಗಿದೆಯೇ ಎಂಬ

ಪುಟ 2

## ಪವಿತ್ರಾ ನನ್ನ ಹೆಂಡತಿ ರೇಣುಕಾಸ್ವಾಮಿ ಎದುರೇ ಹೇಳಿದ್ದ ನಟ ದರ್ಶನ್

**ಬೆಂಗಳೂರು,ಸೆ.29-** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಿರುವ ಪ್ರದೋಷ್ ಅವರು ಮೊದಲ ದಿನದ ವಿಚಾರಣೆಯಲ್ಲಿ ಸುಮಾರು ಮೂರು ಗಂಟೆಗಳ ಕಾಲ ಅಂದಿನ ಘಟನೆಗಳ ಕುರಿತು ವಿವರವಾದ ಹೇಳಿಕೆ ನೀಡಿದ್ದಾರೆ.

ರೇಣುಕಾಸ್ವಾಮಿಯನ್ನು ಪಟ್ಟಣಗೆರೆ ಶೆಡ್‌ಗೆ ಕರೆತಂದವರು ಯಾರು, ಅಲ್ಲಿ ನಡೆದ ಘಟನೆಗಳು ಹಾಗೂ ಯಾರು ಹಲ್ಲೆ ನಡೆಸಿದರು ಎಂಬುದರ ಕುರಿತು ಪ್ರದೋಷ್ ಮಾಹಿತಿ ನೀಡಿದ್ದಾರೆ.

ಪವಿತ್ರಾ ಗೌಡ ಅವರಿಗೆ ಅಶ್ಲೀಲ ಸಂದೇಶ ಕಳುಹಿಸಿದ್ದ ಆರೋಪದ ಹಿನ್ನೆಲೆಯಲ್ಲಿ ರೇಣುಕಾಸ್ವಾಮಿಯನ್ನು ಪಟ್ಟಣಗೆರೆ ಶೆಡ್‌ಗೆ ಕರೆತರಲಾಗಿತ್ತು. ಬಳಿಕ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿದ್ದು, ನಟ ದರ್ಶನ್ ಕೂಡ ಶೆಡ್‌ಗೆ ತೆರಳಿದ್ದರು ಎಂದು ಪ್ರದೋಷ್ ತಮ್ಮ ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಪುಟ 2

## ಮನೆ ಮುಂದೆ ಪಾರ್ಕಿಂಗ್ ಶುಲ್ಕಕ್ಕೆ ಬ್ರೇಕ್

### ಸಾರ್ವಜನಿಕರ ವಿರೋಧದ ಬೆನ್ನಲ್ಲೇ ಕಾನೂನು ಸಲಹೆ

**ಬೆಂಗಳೂರು,ಸೆ.29-** ಮನೆ ಮುಂದೆ ವಾಹನ ನಿಲ್ಲಿಸುವುದಕ್ಕೂ ಶುಲ್ಕ ವಿಧಿಸುವ ಸರ್ಕಾರದ ಪ್ರಸ್ತಾವನೆಗೆ ಸಿಲಿಕಾನ್ ಸಿಟಿಯಲ್ಲಿ ವಿರೋಧದ ಸುರಿಮಳೆಯೇ ವ್ಯಕ್ತವಾಗಿದೆ. ಪಾರ್ಕಿಂಗ್ ಶುಲ್ಕದ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಈಗಾಗಲೇ 5 ಸಾವಿರಕ್ಕೂ ಅಧಿಕ ಆಕ್ಷೇಪಣೆಗಳು ಹಾಗೂ ಸಲಹೆಗಳು ಸಲ್ಲಿಕೆಯಾಗಿದ್ದು, ಸಾರ್ವಜನಿಕರ ವಿರೋಧವನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ ಇದೀಗ ಕಾನೂನು ಸಲಹೆಗೆ ಮುಂದಾಗಿದೆ.

ನಗರದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವುದು ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಆದಾಯ ಸಂಗ್ರಹಿಸುವ ಉದ್ದೇಶದಿಂದ ಸಾರ್ವಜನಿಕ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ಶುಲ್ಕ ವಿಧಿಸುವ ಕುರಿತು ಸರ್ಕಾರ ಪ್ರಸ್ತಾವನೆ ರೂಪಿಸಿತ್ತು. ಈ ಸಂಬಂಧ ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆಗಳನ್ನು ಆಹ್ವಾನಿಸಿ ಸೆಪ್ಟೆಂಬರ್ 10ರವರೆಗೆ ಕಾಲಾವಕಾಶ ನೀಡಲಾಗಿತ್ತು.

ಆದರೆ, ಮನೆಗಳ ಮುಂದೆ ವಾಹನ ನಿಲ್ಲಿಸುವುದಕ್ಕೂ ಶುಲ್ಕ ವಿಧಿಸುವ ಪ್ರಸ್ತಾವನೆ ಸಾರ್ವಜನಿಕ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಮನೆ ಮುಂದೆ ಪಾರ್ಕಿಂಗ್‌ಗೆ ಶುಲ್ಕ ವಿಧಿಸುವುದು ಅವೈಜ್ಞಾನಿಕವಾಗಿದ್ದು, ಇದರಿಂದ ಈಗಾಗಲೇ ಸಮಸ್ಯೆ ಎದುರಿಸುತ್ತಿರುವ ವಾಹನ ಸವಾರರು ಹಾಗೂ ನಿವಾಸಿಗಳ ಮೇಲಿನ ಹೊರೆ ಮತ್ತಷ್ಟು ಹೆಚ್ಚಲಿದೆ ಎಂದು ಸಾರ್ವಜನಿಕರು ಆಕ್ಷೇಪಿಸಿದ್ದಾರೆ.

**ಸಚಿವರ ಹೇಳಿಕೆಗೆ ಆಕ್ರೋಶ:**

ಮನೆಗಳ ಮುಂಭಾಗದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುವುದರಿಂದ ಸಂಚಾರ ಸಮಸ್ಯೆ ಉಂಟಾಗುತ್ತಿದೆ. ಸಾರ್ವಜನಿಕ ರಸ್ತೆಯಲ್ಲಿ ಯಾರೂ ವಾಹನ ನಿಲ್ಲಿಸಬಾರದು ಎಂಬ ಅಭಿಪ್ರಾಯವನ್ನು ಬೆಂಗಳೂರು ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ವ್ಯಕ್ತಪಡಿಸಿದ್ದರು. ಈ ಹೇಳಿಕೆಯ ಬೆನ್ನಲ್ಲೇ

ಪುಟ 2

## 38 ಸಾವಿರ ಕೋಟಿ ಬಾಕಿ ಬಿಲ್ ಪಾವತಿಗೆ ಗುತ್ತಿಗೆದಾರರ ಆಗ್ರಹ

**ಬೆಂಗಳೂರು: ಸೆ,29-** ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಬಾಕಿ ಇರುವ ಸುಮಾರು 38 ಸಾವಿರ ಕೋಟಿ ಮೊತ್ತವನ್ನು ತುರ್ತಾಗಿ ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಸಂಬಂಧ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಂಘದ ವತಿಯಿಂದ ಪತ್ರ ಬರೆಯಲಾಗಿದ್ದು, ದಸರಾ ಹಬ್ಬದ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ಬಾಕಿ ಹಣ ಬಿಡುಗಡೆ ಮಾಡಬೇಕು ಹಾಗೂ ಗುತ್ತಿಗೆ ಕಾಮಗಾರಿಗಳಿಗೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ತುರ್ತಾಗಿ ಬಗೆಹರಿಸಬೇಕು ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ಮನವಿ ಮಾಡಿದ್ದಾರೆ.

2026ರ ಮಾರ್ಚ್ 6ರಂದು ಫ್ರೀಡಂ ಪಾರ್ಕ್‌ನಲ್ಲಿ ಸಂಘದ ವತಿಯಿಂದ ನಡೆದ ರಾಜ್ಯಮಟ್ಟದ ಬೃಹತ್ ಪ್ರತಿಭಟನೆ ಸಂದರ್ಭದಲ್ಲಿ ಸರ್ಕಾರದ ಪ್ರತಿನಿಧಿಗಳು ಸ್ಥಳಕ್ಕೆ ಭೇಟಿ ನೀಡಿ ಗುತ್ತಿಗೆದಾರರ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದ್ದರು. ಬಳಿಕ ಜೂನ್ 30ರಂದು ಮುಖ್ಯಮಂತ್ರಿಗಳು ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ, ಎರಡು ತಿಂಗಳೊಳಗೆ ಬಾಕಿ ಹಣ ಪಾವತಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ ಇದುವರೆಗೆ ನಿರೀಕ್ಷಿತ ಪ್ರಮಾಣದಲ್ಲಿ ಹಣ ಬಿಡುಗಡೆಯಾಗಿಲ್ಲ ಎಂದು ಸಂಘ ಆರೋಪಿಸಿದೆ.

**2021–22ರಿಂದ ವಿವಿಧ ಇಲಾಖೆಗಳ ಬಾಕಿ**

ರಾಜ್ಯದ ಅಭಿವೃದ್ಧಿ ಇಲಾಖೆಗಳ ವ್ಯಾಪ್ತಿಯಲ್ಲಿ 2021–22ರಿಂದ ಇಲ್ಲಿಯವರೆಗೆ ಗುತ್ತಿಗೆ

ಪುಟ 2

## ಬೆಂಗಳೂರಿನಲ್ಲಿ ವರುಣನ ಅಬ್ಬರ: ರಸ್ತೆಗಳು ಜಲಾವೃತ ಮರ ಬಿದ್ದು ಎರಡು ಕಾರು ಜಖಂ



ನಗರದ ಡಬ್ಬಲ್ ರಸ್ತೆಯಲ್ಲಿ ಮಳೆಯಿಂದಾಗಿ ರಸ್ತೆಯಲ್ಲಿ ನೀರು ನಿಂತಿದ್ದು, ಸಂಚಾರ ಪೊಲೀಸರು ನೀರನ್ನು ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿರುವುದು.

**ಬೆಂಗಳೂರು,ಸೆ.29-** ಸಿಲಿಕಾನ್ ಸಿಟಿಯಲ್ಲಿ ವರುಣನ ಆರ್ಭಟ ಮುಂದುವರಿದಿದ್ದು, ತಡರಾತ್ರಿ ಆರಂಭವಾದ ಮಳೆ ಮುಂಜಾನೆಯವರೆಗೂ ಸುರಿದಿದೆ. ನಗರದ ಹಲವೆಡೆ ರಸ್ತೆಗಳು ಜಲಾವೃತಗೊಂಡಿದ್ದು, ವಾಹನ ಸವಾರರು ಪರದಾಡುವಂತಾಗಿದೆ.

ರಾತ್ರಿ ಸುಮಾರು 3.30ರ ವೇಳೆಯಿಂದ ನಗರದ ಹಲವು ಭಾಗಗಳಲ್ಲಿ ಮಳೆ ಆರಂಭವಾಗಿದ್ದು, ವೈಟ್‌ಫೀಲ್ಡ್, ಮಾರತ್‌ಹಳ್ಳಿ, ಔಟರ್ ರಿಂಗ್ ರಸ್ತೆ, ಬಳಗೆರೆ, ಬೆಳ್ಳಂದೂರು ಸೇರಿದಂತೆ ಪೂರ್ವ ಬೆಂಗಳೂರಿನ ಹಲವು ಪ್ರದೇಶಗಳಲ್ಲಿ ಜೋರು ಮಳೆಯಾಗಿದೆ. ಮಳೆಯ ನೀರು ರಸ್ತೆಗಳಲ್ಲಿ ನಿಂತ ಪರಿಣಾಮ ಕೆಲವೆಡೆ ಕೆರೆಯಂತಾಗಿತ್ತು. ತಗ್ಗು ಪ್ರದೇಶಗಳಲ್ಲಿ ನೀರು ಸಂಗ್ರಹಗೊಂಡಿದ್ದರಿಂದ ವಾಹನಗಳ ಸಂಚಾರಕ್ಕೂ ಅಡ್ಡಿಯಾಯಿತು.

ವಿಶೇಷವಾಗಿ ವೈಟ್‌ಫೀಲ್ಡ್ ಸುತ್ತಮುತ್ತ ಮಳೆಯಿಂದಾಗಿ ಕೆಲವೆಡೆ ಸಂಚಾರ ದಟ್ಟಣೆ ಉಂಟಾಯಿತು. ಸುರಿಯುತ್ತಿದ್ದ ಮಳೆಯ ನಡುವೆಯೇ ಸಂಚಾರ ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಕಾಡುಬೀಸನಹಳ್ಳಿ ರಸ್ತೆಯೂ ರಾತ್ರಿ ಸುರಿದ ಮಳೆಗೆ ಜಲಾವೃತಗೊಂಡಿತ್ತು.

ಕೆಆರ್ ಸರ್ಕಲ್, ವಸಂತನಗರ, ವಿಧಾನಸೌಧ, ಶಿವಾಜಿನಗರ, ರಾಜಾಜಿನಗರ, ಎಸ್‌ಆರ್ ನಗರ, ಯಶವಂತಪುರ, ಮೆಜೆಸ್ಟಿಕ್, ಕಾರ್ಪೊರೇಷನ್, ಕೆಆರ್ ಮಾರ್ಕೆಟ್, ಬಸವನಗುಡಿ, ಜಯನಗರ, ಶಾಂತಿನಗರ, ಜೆ.ಪಿ.ನಗರ ಹಾಗೂ ಲಾಲ್‌ಬಾಗ್ ಸೇರಿದಂತೆ ನಗರದ ಹಲವು ಭಾಗಗಳಲ್ಲೂ ಮಳೆಯಾಗಿದೆ.

**ಮಲ್ಲೇಶ್ವರಂನಲ್ಲಿ ಮರ ಬಿದ್ದು ಎರಡು ಕಾರು ಜಖಂ:**

ಮಳೆಯ ನಡುವೆ ಮಲ್ಲೇಶ್ವರಂ ಸ್ಮಾರ್ಟ್ ಬಜಾರ್ ಮುಂಭಾಗದಲ್ಲಿ

ಪುಟ 2

## 10.96 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ: 6 ಮಂದಿ ಸೆರೆ

**ಬೆಂಗಳೂರು,ಸೆ.29-** ಗಿರಿನಗರ, ಹೆಬ್ಬಾಳ ಹಾಗೂ ವಿದ್ಯಾರಣ್ಯಪುರ ಪೊಲೀಸರು ಕಾರ್ಯಾಚರಣೆ ಕೈಗೊಂಡು ವಿದೇಶಿ, ಹೊರರಾಜ್ಯ ಹಾಗೂ ಸ್ಥಳೀಯ ಸೇರಿದಂತೆ 6 ಮಂದಿಯನ್ನು ಬಂಧಿಸಿ 10.96 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತ ವಿದೇಶಿ, ಹೊರರಾಜ್ಯ ಹಾಗೂ ಸ್ಥಳೀಯ ಸೇರಿ 6 ಮಂದಿ ಆರೋಪಿಗಳಿಂದ 10.96 ಕೋಟಿ ಮೌಲ್ಯದ 5 ಕೆಜಿ 480 ಗ್ರಾಂ ಎಂಡಿಎಂಎ ವಶಪಡಿಸಿಕೊಂಡು ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬಂಧಿತರಲ್ಲಿ ಓರ್ವ ಮಹಿಳೆ ಸೇರಿದ್ದು ಎಲ್ಲಾ ಆರೋಪಿಗಳು ವಿದೇಶ, ಹೊರರಾಜ್ಯ ಹಾಗೂ ರಾಜ್ಯದ ಅಪರಿಚಿತ ವ್ಯಕ್ತಿಗಳಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ, ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಹೇಳಿದರು.

ಗಿರಿನಗರ ಪೊಲೀಸರು ಕೇರಳದ ಕಾಸರಗೋಡು ಮೂಲದ ಮುತ್ತನಲ್ಲೂರಿನ ಜಾಫರ್(35) ದೇವರಚಿಕ್ಕನಹಳ್ಳಿಯ ಆಶಿಕ್(32) ನೈಜೀರಿಯಾದ ಜೋಸಿಯ್ಯಾ ಅಬೆಲ್(26)ನನ್ನು ಬಂಧಿಸಿ 4.32 ಕೋಟಿ

ಪುಟ 2

ಸಂಜೆವಾಣಿ

ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com

(ಒಂದನೇ ಪುಟದಿಂದ)




**ನಗರದ ಗಿರಿನಗರ ಪೊಲೀಸ್ ಠಾಣೆ ಪೊಲೀಸರು ವಶಪಡಿಸಿಕೊಂಡಿರುವ 10.96 ಕೋಟಿ ರೂ. ಬೆಲೆಯ ಮೆಥಾಂಪೆಟಮೈನ್ ವ್ಯಸನಕಾರಿ ಮಾದಕವನ್ನು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್‌ಸಿಂಗ್ ಪೊಲೀಸ್ ಅಧಿಕಾರಿಗಳು ಇದ್ದಾರೆ.**

# 10.96 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

4.32 ಕೋಟಿ ಮೌಲ್ಯದ 4 ಕೆಜಿ 320 ಗ್ರಾಂ ಎಂಡಿಎಂಎ ವಶಪಡಿಸಿಕೊಂಡರೆ,ಹೆಬ್ಬಾಳ ಪೊಲೀಸರು ಒಡಿಶಾ ಮೂಲದ ತಾವರೆಕೆರೆಯ ಬನಿತಾ ಕರಣ್(35)ಳನ್ನು ಬಂಧಿಸಿ 2 ಕೋಟಿ ಮೌಲ್ಯದ 1 ಕೆಜಿ 54 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ.

ವಿದ್ಯಾರಣ್ಯಪುರ ಪೊಲೀಸರು 10.60 ಲಕ್ಷ ಮೌಲ್ಯದ 106 ಗ್ರಾಂ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ,ಬಂಧಿತ ಆರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ. ಪ್ರಕರಣದಲ್ಲಿ ಮಾದಕ ವಸ್ತು ಪೂರೈಕೆ ಮಾಡುತ್ತಿದ್ದ ಅಪರಿಚಿತ ವ್ಯಕ್ತಿಗಳ ಪತ್ತೆ ಕಾರ್ಯ ಮುಂದುವರಿದಿದ್ದು, ತನಿಖೆ ಪ್ರಗತಿಯಲ್ಲಿದೆ.

ಈ ಕಾರ್ಯಾಚರಣೆಯನ್ನು ಹಿರಿಯ ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಗಿರಿನಗರ, ಹೆಬ್ಬಾಳ ಹಾಗೂ ವಿದ್ಯಾರಣ್ಯಪುರ ಠಾಣೆಗಳ ಪೊಲೀಸರು ನಡೆಸಿದ್ದಾರೆ ಎಂದು ತಿಳಿಸಿದರು.

# ಮನೆ ಮುಂದೆ ಪಾರ್ಕಿಂಗ್ ಶುಲ್ಕಕ್ಕೆ ಬ್ರೇಕ್

ಪಾರ್ಕಿಂಗ್ ಶುಲ್ಕದ ವಿಚಾರ ಮತ್ತಷ್ಟು ಮುನ್ನೆಲೆಗೆ ಬಂದಿತ್ತು.

ಸರ್ಕಾರ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿದ ಬಳಿಕ ಇ-ಮೇಲ್ ಹಾಗೂ ಪತ್ರಗಳ ಮೂಲಕ ಸಾವಿರಾರು ಮಂದಿ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಬಹುತೇಕ ಆಕ್ಷೇಪಣೆಗಳಲ್ಲಿ ಮನೆ ಮುಂದೆ ಪಾರ್ಕಿಂಗ್ ಶುಲ್ಕ ವಿಧಿಸುವ ಯೋಜನೆಯನ್ನೇ ಕೈಬಿಡಬೇಕು ಎಂದು ಆಗ್ರಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಆಕ್ಷೇಪಣೆ ಬೆನ್ನಲ್ಲೇ ಕಾನೂನು ಸಲಹೆ :**

ಸಾರ್ವಜನಿಕರಿಂದ ಬಂದಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿರುವ ಸರ್ಕಾರ ಇದೀಗ ಈ ಯೋಜನೆಯ ಕಾನೂನು ಸಾಧ್ಯತೆಗಳ ಕುರಿತು ಸಲಹೆ ಪಡೆಯಲು ಮುಂದಾಗಿದೆ. ಯೋಜನೆಯನ್ನು ಮುಂದುವರಿಸುವುದರಿಂದ ಎದುರಾಗಬಹುದಾದ ಕಾನೂನು ಹಾಗೂ ಆಡಳಿತಾತ್ಮಕ ಅಂಶಗಳ ಬಗ್ಗೆಯೂ ಪರಿಶೀಲನೆ ನಡೆಯುತ್ತಿದೆ ಎನ್ನಲಾಗಿದೆ.

ಇದರ ನಡುವೆ ಮುಂಬರುವ ನಗರಪಾಲಿಕೆ ಚುನಾವಣೆ ಹಿನ್ನೆಲೆಯಲ್ಲಿ ಮನೆ ಮುಂದೆ ಪಾರ್ಕಿಂಗ್ ಶುಲ್ಕ ವಿಧಿಸುವ ನಿರ್ಧಾರಕ್ಕೆ ಕೆಲವು ಸಚಿವರು ಹಾಗೂ ಶಾಸಕರಿಂದಲೂ ವಿರೋಧ ವ್ಯಕ್ತವಾಗಿದೆ ಎನ್ನಲಾಗಿದೆ. ಸಾರ್ವಜನಿಕರ ಆಕ್ಷೇಪಣೆಗಳ ಪ್ರಮಾಣ, ರಾಜಕೀಯವಾಗಿ ವ್ಯಕ್ತವಾಗಿರುವ ವಿರೋಧ ಹಾಗೂ ಕಾನೂನು ಸಲಹೆಯನ್ನು ಪರಿಗಣಿಸಿ ಯೋಜನೆಯನ್ನು ಕೈಬಿಡುವ ಸಾಧ್ಯತೆಯೂ ಇದೆ ಎಂದು ಅಧಿಕಾರಿಗಳ ಮೂಲಗಳು ತಿಳಿಸಿವೆ.

**ಸಚಿವರ ನಿರ್ಧಾರವೇ ಅಂತಿಮ**

ಹೀಗಾಗಿ ಮನೆ ಮುಂದೆ ಪಾರ್ಕಿಂಗ್ ಶುಲ್ಕದ ಪ್ರಸ್ತಾವನೆಗೆ ಸರ್ಕಾರ ಬ್ರೇಕ್ ಹಾಕುತ್ತಾ ಅಥವಾ ಪರಿಷ್ಕೃತ ರೂಪದಲ್ಲಿ ಜಾರಿಗೆ ತರುತ್ತಾ ಎಂಬ ಕುತೂಹಲ ಮೂಡಿದೆ. ಸಾರ್ವಜನಿಕರ ಆಕ್ಷೇಪಣೆ, ಅಧಿಕಾರಿಗಳ ವರದಿ ಹಾಗೂ ಕಾನೂನು ಸಲಹೆ ಬಳಿಕ ಸಚಿವರು ಅಂತಿಮ ತೀರ್ಮಾನ ಕೈಗೊಳ್ಳಬೇಕಿದೆ.ಅದರೆ ಸಾಧ್ಯ ಎಂ,ಎಲ್,ಸಿ ಚುನಾವಣೆ ಇರುವ ಹಿನ್ನೆಲೆ ನೀತಿ ಸಂಹಿತೆ ಜಾರಿಯಲ್ಲಿದ್ದು ಚುನಾವಣೆ ಮುಗಿದ ನಂತರ ಸರ್ಕಾರ ಈ ಯೋಜನೆ ಕೈಬಿಡುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರೆ.

- **ಪಾರ್ಕಿಂಗ್ ಶುಲ್ಕಕ್ಕೆ 5 ಸಾವಿರಕ್ಕೂ ಅಧಿಕ ಆಕ್ಷೇಪಣೆ**
- **ಸೆ.10ರವರೆಗೆ ಸಲಹೆ, ಆಕ್ಷೇಪಣೆ ಸಲ್ಲಿಕೆಗೆ ಅವಕಾಶ**
- **ಯೋಜನೆ ಕೈಬಿಡುವಂತೆ ಸಾರ್ವಜನಿಕರ ಆಗ್ರಹ**
- **ಆಕ್ಷೇಪಣೆ ಪರಿಶೀಲಿಸಿ ಕಾನೂನು ಸಲಹೆಗೆ ಸರ್ಕಾರ**
- **ಸಚಿವರು ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ,**

# 38 ಸಾವಿರ ಕೋಟಿ ಬಾಕಿ ಬಿಲ್

ದಾರರಿಗೆ ಸುಮಾರು 38,000 ಕೋಟಿ ಬಾಕಿ ಉಳಿದಿದೆ ಎಂದು ಸಂಘ ತಿಳಿಸಿದೆ. ರಾಜ್ಯದಲ್ಲಿ ಸುಮಾರು 1.50 ಲಕ್ಷ ಗುತ್ತಿಗೆದಾರರು ಹಾಗೂ ಅವರ ಮೇಲೆ ಅವಲಂಬಿತರಿದ್ದು, ಬಾಕಿ ಹಣ ಪಾವತಿಯಾಗದಿರುವುದರಿಂದ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

**ಸಂಘದ ಪ್ರಮುಖ ಬೇಡಿಕೆಗಳು:**

ಬಾಕಿ ಇರುವ 38 ಸಾವಿರ ಕೋಟಿ ಹಣವನ್ನು ತುರ್ತಾಗಿ ಬಿಡುಗಡೆ ಮಾಡಬೇಕು. ಅಭಿವೃದ್ಧಿ ಇಲಾಖೆಯಲ್ಲಿ ಜೇಷ್ಠತೆ ಆಧಾರದಲ್ಲಿ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಜಾರಿಗೊಳಿಸಬೇಕು.

ಖಠಿಜಖಿಬಿಚಿಟ ಐಔಅ ನೀಡುವ ಕ್ರಮವನ್ನು ತಡೆಹಿಡಿಯಬೇಕು.

2017-18 ಮತ್ತು 2018-19ರ ವ್ಯಾಟ್‌ನಿಂದ ಜಿಎಸ್‌ಟಿಗೆ ಉಂಟಾದ 8% ವ್ಯತ್ಯಾಸದ ಮೊತ್ತವನ್ನು ತುರ್ತಾಗಿ ಬಿಡುಗಡೆ ಮಾಡಬೇಕು.

ಇ-ಸಂಗ್ರಹಣೆಯ Contract Management Moduleನಲ್ಲಿ ಕಾಮಗಾರಿಗಳ ಮಾಹಿತಿ ಅಪ್‌ಲೋಡ್ ಮಾಡಿದ ನಂತರವೇ ಹಣ ಬಿಡುಗಡೆ ಮಾಡುವ ಆದೇಶವನ್ನು ರದ್ದುಪಡಿಸಬೇಕು.

ಜಿಲ್ಲೆ ಮತ್ತು ತಾಲೂಕು ಮಟ್ಟದ ಟೆಂಡರ್‌ಗಳಲ್ಲಿ ಸ್ಥಳೀಯ ಗುತ್ತಿಗೆದಾರರಿಗೆ ಆದ್ಯತೆ ನೀಡಬೇಕು.

ಹೊರ ಜಿಲ್ಲೆ ಹಾಗೂ ಹೊರ ರಾಜ್ಯದ ಗುತ್ತಿಗೆದಾರರಿಗೆ ಅನಗತ್ಯ ಪ್ರೋತ್ಸಾಹ ನೀಡಬಾರದು.

ಕೋವಿಡ್ ನಂತರ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಎದುರಾಗಿರುವ ಸಮಸ್ಯೆಗಳನ್ನು ಪರಿಗಣಿಸಿ, ಲೈಸೆನ್ಸ್ ನವೀಕರಣ ಹಾಗೂ ಕಾಮಗಾರಿಗಳ ಅರ್ಹತೆಗೆ ಸಂಬಂಧಿಸಿದ WorkDoneಮತ್ತು Turnover ಅವಧಿಯನ್ನು 10 ವರ್ಷಕ್ಕೆ ವಿಸ್ತರಿಸಬೇಕು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿರ್ಮಿತಿ ಕೇಂದ್ರ, KRIDL ಸೇರಿದಂತೆ ವಿವಿಧ ಸಂಸ್ಥೆಗಳಿಗೆ ಕಾಮಗಾರಿಗಳನ್ನು ನೀಡುವ ಕುರಿತು ಸ್ಥಳೀಯ ಗುತ್ತಿಗೆದಾರರ ಸಮಸ್ಯೆಗಳನ್ನು ಪರಿಶೀಲಿಸಬೇಕು.

ಏಪಿಖಲಃ ವ್ಯಾಪ್ತಿಯ ಕಲ್ಯಾಣ ಪಥ ಕಾಮಗಾರಿಗಳಲ್ಲಿನ ತಾಂತ್ರಿಕ ದೋಷಗಳ ಕುರಿತು ಅಧಿಕೃತ ಸಭೆ ನಡೆಸಬೇಕು.

ಸಿಎಂ ನೇತೃತ್ವದಲ್ಲಿ ಸಭೆಗೆ ಒತ್ತಾಯ

ತಮ್ಮ ಬೇಡಿಕೆಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ನೇತೃತ್ವದಲ್ಲಿ ಸಂಬಂಧಪಟ್ಟ ಇಲಾಖೆಗಳ ಸಚಿವರು, ಸರ್ಕಾರದ ಕಾರ್ಯದರ್ಶಿಗಳು, ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಬೇಕು ಎಂದು ಸಂಘ ಮನವಿ ಮಾಡಿದೆ.

ದಸರಾ ಹಬ್ಬದ ಸಂದರ್ಭದಲ್ಲಿ ಬಾಕಿ ಹಣ ಬಿಡುಗಡೆಯಾದರೆ ಸಾವಿರಾರು ಗುತ್ತಿಗೆದಾರರಿಗೆ ಆರ್ಥಿಕವಾಗಿ ನೆರವಾಗಲಿದೆ ಎಂದು ಸಂಘ ಹೇಳಿದೆ.

ಮನವಿಯನ್ನು ಸರ್ಕಾರ ಪರಿಗಣಿಸದೆ ಬಾಕಿ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳದಿದ್ದರೆ, ಮುಂದಿನ ಹಂತದಲ್ಲಿ ರಾಜ್ಯಾದ್ಯಂತ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

# ಚಿನ್ನ, ಬೆಳ್ಳಿಗೆ ಗುರಿಯಿಟ್ಟ ನೀರೂ

ವಿರುದ್ಧದ ಸೆಮಿಫೈನಲ್ ಪಂದ್ಯಕ್ಕೆ ವೇದಿಕೆ ಮಾಡಿಕೊಂಡಿತು. ಭಾನುವಾರ ನಡೆಯಬೇಕಿದ್ದ ಭಾರತ ಮತ್ತು ಆಫ್ಘನ್ ನಡುವಿನ ಮೊದಲ ಕ್ವಾರ್ಟರ್ ಫೈನಲ್ ಪಂದ್ಯ ಪ್ರತಿಕೂಲ ಹವಾಮಾನ ದಿಂದಾಗಿ ರದ್ದುಗೊಂಡಿತು. ಹೀಗಾಗಿ ಭಾರತ ಯಾವುದೇ ಪಂದ್ಯ ಆಡದೇ ಸೆಮಿಫೈನಲ್ ಪ್ರವೇಶಿಸಿದೆ.

**ಬಾಕ್ಸರ್ ನರೇಂದ್ರ ಕಂಚಿನ ಪಂಚ್**

ಬಾಕ್ಸರ್ ನರೇಂದರ್ ಪುರುಷರ +90 ಕೆ.ಜಿ. ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಕಜಕಸ್ತಾನದ ಐಬೇಕ್ ಒರಾಲ್ಬೇ ವಿರುದ್ಧ ಪರಾಭವಗೊಂಡು ಕಂಚಿನ ಪದಕಕ್ಕೆ ತೃಪ್ತಿಪಟ್ಟರು. ಹಾಲಿ ಕೂಟದ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಭಾರತಕ್ಕೆ ಒಲಿದ ಮೊದಲ ಪದಕ ಇದಾಗಿದೆ. ಈ ಮಧ್ಯೆ, ಮಹಿಳೆಯರ 65 ಕೆ.ಜಿ ವಿಭಾಗದ ಫೈನಲ್ ಪಂದ್ಯದಲ್ಲಿ ಚೀನಾದ ಲಿ ಶು ವಿರುದ್ಧ ಜಯಗಳಿಸಿದ ಪರ್ವಿನ್ ಫೈನಲ್ ಪ್ರವೇಶಿಸಿದ್ದು, ಕನಿಷ್ಠ ಬೆಳ್ಳಿ ಪದಕವನ್ನು ಖಾತರಿಪಡಿಸಿದ್ದಾರೆ.

ಅಂತೆಯೇ ಅಂಕುಶ್ ಫಂಘಾಲ್ ಸಹ ಪುರುಷರ 80 ಕೆ.ಜಿ ವಿಭಾಗದ ಸೆಮಿಫೈನಲ್ ನಲ್ಲಿ ಉಜ್ಬೇಕಿಸ್ತಾನದ ಫಜಿಲ್ದಿನ್ ವಿರುದ್ಧ ಗೆದ್ದು ಅಂತಿಮ ಸುತ್ತಿಗೆ ತೇರ್ಗಡೆ ಹೊಂದಿದ್ದು, ಭಾರತಕ್ಕೆ ಕನಿಷ್ಠಪಕ್ಷ ಬೆಳ್ಳಿಯನ್ನು ಖಾತರಿಗೊಳಿಸಿದ್ದಾರೆ. ಇಂದು ಸಂಜೆ ಅಥ್ಲೆಟಿಕ್ಸ್ ಸ್ಪರ್ಧೆಗಳು ನಡೆಯಲಿದ್ದು ಭಾರತ ಇನ್ನಷ್ಟು ಪದಕಗಳನ್ನು ಬಾಚುವ ನಿರೀಕ್ಷೆಯಿದೆ.

# ಬೆಂಗಳೂರಿನಲ್ಲಿ ವರುಣನ ಅಬ್ಬರ

ಬೃಹತ್ ಮರವೊಂದು ಧರೆ ಗುರುಳಿದೆ. ರಸ್ತೆಗಡ್ಡಲಾಗಿ ಮರ ಬಿದ್ದ ಪರಿಣಾಮ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ಮರದ ಕೆಳಗೆ ನಿಂತಿದ್ದ ಎರಡು ಕಾರುಗಳು ಸಂಪೂರ್ಣ ಜಖಂಗೊಂಡಿವೆ.

ಮರ ಬಿದ್ದಿರುವ ಮಾಹಿತಿ ತಿಳಿಯುತ್ತಿದ್ದಂತೆ ನಗರಪಾಲಿಕೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮರ ತೆರವು ಕಾರ್ಯಾಚರಣೆ ನಡೆಸಿದರು. ಇದರಿಂದ ಕೆಲಕಾಲ ಸಂಚಾರಕ್ಕೆ ಸಮಸ್ಯೆ ಉಂಟಾಯಿತು. ಮಲ್ಲೇಶ್ವರಂ ಮಾತ್ರವಲ್ಲದೆ ಕೋರಮಂಗಲದಲ್ಲೂ ಮಳೆಯಿಂದಾಗಿ ಮರ ಉರುಳಿರುವ ಘಟನೆ ವರದಿಯಾಗಿದೆ. ಎರಡು ಕಡೆ ಮರಗಳು ಧರೆಗುರುಳಿದ್ದರಿಂದ ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸುವಂತಾಗಿದೆ.

ರಾತ್ರಿಯಿಡೀ ಹಗುರದಿಂದ ಸಾಧಾರಣವಾಗಿ ಮಳೆ ಸುರಿದಿದ್ದು, ಮುಂಜಾನೆಯಲ್ಲೂ ಜಿಟಿಜಿಟಿ ಮಳೆ ಮುಂದುವರಿದಿದೆ. ಬೆಳಗ್ಗೆ ಕೆಲಸ, ಶಾಲೆ-ಕಾಲೇಜು ಹಾಗೂ ಇತರ ಕೆಲಸಗಳಿಗೆ ಹೊರಟ ಜನರಿಗೆ ಮಳೆ ಅಡ್ಡಿಯಾಗಿದೆ. ಮಳೆಯ ನಡುವೆಯೇ ವಾಹನ ಸಂಚಾರ ಆರಂಭವಾಗಿದ್ದು, ಜಲಾವೃತ ರಸ್ತೆಗಳ ನಡುವೆ ಸವಾರರು ನಿಧಾನವಾಗಿ ಸಾಗುವಂತಾಗಿದೆ.

**ಹಲವು ಜಿಲ್ಲೆಗಳಿಗೆ ಮಳೆ ಮುನ್ಸೂಚನೆ;**

ಇದೇ ವೇಳೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಕೆಲವು ಗಂಟೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ರಾಮನಗರ, ಚಿತ್ರದುರ್ಗ, ಚಾಮರಾಜನಗರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮಳೆಯ ಸಾಧ್ಯತೆ ಇದೆ.

ಮುಂದಿನ ಮೂರು ಗಂಟೆಗಳ ಅವಧಿಯಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆಯಿದ್ದು, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಿಗೆ ಮಳೆ ಮುನ್ಸೂಚನೆ ನೀಡಲಾಗಿದೆ.

**ಆರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್;**

ಇಂದು ತುಮಕೂರು, ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಇದರ ನಡುವೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಮಳೆ ಮುಂದುವರಿಯುವ ಸಾಧ್ಯತೆಯಿರುವುದರಿಂದ ಜನರು ಹಾಗೂ ವಾಹನ ಸವಾರರು ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

**ಐಟಿ ಕಾರಿಡಾರ್ ಜಲಾವೃತ**

ರಾಜಧಾನಿ ಬೆಂಗಳೂರಿನಲ್ಲಿ ಮಳೆಯ ಅಬ್ಬರ ಮುಂದುವರಿದಿದ್ದು, ಮಂಗಳವಾರ ಬೆಳಗ್ಗೆಯೂ ಸುರಿದ ಮಳೆಯಿಂದ ನಗರದ ಹಲವು ಭಾಗಗಳಲ್ಲಿ ಜಲಾವೃತ ಉಂಟಾಯಿತು. ವಿಶೇಷವಾಗಿ ನಗರದ ಐಟಿ ಕಾರಿಡಾರ್‌ನ ಹಲವು ರಸ್ತೆಗಳು ನೀರಿನಿಂದ ತುಂಬಿಕೊಂಡ ಪರಿಣಾಮ ಬೆಳಗಿನ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ಸೋಮವಾರ ರಾತ್ರಿ ನಿರಂತರವಾಗಿ ಸುರಿದ ಮಳೆಯ ಬಳಿಕ ಇಂದು ಬೆಳಗ್ಗೆ ಮತ್ತೆ ಮಳೆ ಆರಂಭವಾಯಿತು. ಭಾರತೀಯ ಹವಾಮಾನ ಇಲಾಖೆ



(ಐಎಂಡಿ) ಮುನ್ಸೂಚನೆಯಂತೆ ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದ್ದು, ಸೆ.29ರಿಂದ ಅ.1ರವರೆಗೆ ಸಾಕಷ್ಟು ವ್ಯಾಪಕ ಮಳೆಯಾಗುವ ನಿರೀಕ್ಷೆಯಿದೆ. ಕರಾವಳಿ ಕರ್ನಾಟಕದಲ್ಲೂ ದಿನವಿಡೀ ಅಲ್ಲಲ್ಲಿ ಮಳೆ ಬೀಳುವ ಸಾಧ್ಯತೆ ಇದೆ.

ಇಂದು ಬೆಳಗ್ಗೆ ಬೆಂಗಳೂರಿನಲ್ಲಿ 23 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಅನುಭವಕ್ಕೆ 25 ಡಿಗ್ರಿಯಷ್ಟಿತ್ತು. ಆಕಾಶ ಬಹುತೇಕ ಮೋಡ ಕವಿದಿತ್ತು. ನೈಋತ್ಯ ದಿಕ್ಕಿನಿಂದ ಗಂಟೆಗೆ 11 ಕಿ.ಮೀ. ವೇಗದಲ್ಲಿ ಗಾಳಿ ಬೀಸಿದ್ದು, ಗಾಳಿಯ ವೇಗ ಕೆಲ ಸಂದರ್ಭಗಳಲ್ಲಿ 20 ಕಿ.ಮೀ. ವರೆಗೆ ತಲುಪಿತ್ತು.

ಮಧ್ಯಾಹ್ನದ ವೇಳೆಗೆ ತಾಪಮಾನ ಸುಮಾರು 29 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗುವ ನಿರೀಕ್ಷೆಯಿದ್ದು, ಸಂಜೆ ವೇಳೆಗೆ ಮತ್ತೆ ಇಳಿಕೆಯಾಗಲಿದೆ. ಬೆಳಗ್ಗೆ ಮಳೆಯ ಸಾಧ್ಯತೆ ಕಡಿಮೆ ಇದ್ದರೂ, ದಿನ ಕಳೆದಂತೆ ಮಳೆಯ ಸಾಧ್ಯತೆ ಹೆಚ್ಚಲಿದ್ದು, ಸಂಜೆ ಶೇ.50ಕ್ಕಿಂತ ಅಧಿಕವಾಗುವ ಸಾಧ್ಯತೆ ಇದೆ. ಕೆಲವೆಡೆ ಮಧ್ಯಾಹ್ನ ಅಥವಾ ಸಂಜೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯನ್ನೂ ಹವಾಮಾನ ಇಲಾಖೆ ಸೂಚಿಸಿದೆ.

ಐಎಂಡಿ ಮುನ್ಸೂಚನೆಯ ಪ್ರಕಾರ ಬೆಂಗಳೂರಿನಲ್ಲಿ ಅ.2ರವರೆಗೆ ಸಾಮಾನ್ಯವಾಗಿ ಮೋಡ ಕವಿದ ವಾತಾವರಣದೊಂದಿಗೆ ಹಗುರ ಮಳೆಯಾಗುವ ಸಾಧ್ಯತೆ ಇದೆ. ಅ.3ರಿಂದ ಭಾಗಶಃ ಮೋಡ ಕವಿದ ವಾತಾವರಣ ಮುಂದುವರಿಯಲಿದೆ.

# ಸಿಇಸಿ ವಿರುದ್ಧ ವಿಚಾರಣೆಗೆ ಸುಪ್ರೀಂ ಅಸ್ತು

ಗ್ಗೆ ಗಂಭೀರ ಅನುಮಾನವಿದೆ ಎಂದು ಅವರು ವಾದಿಸಿದರು.

ಈ ಅರ್ಜಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಸೇರಿದಂತೆ ಚುನಾವಣಾ ಆಯೋಗದ ಇತ್ತೀಚಿನ ಕಾರ್ಯವೈಖರಿ ಕುರಿತು ಎದ್ದಿರುವ ಚರ್ಚೆಯ ನಡುವೆಯೇ ಬಂದಿದೆ.

'ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಪ್ರಕಾರ, ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದ ನಿರ್ಧಾರಗಳು ಹಾಗೂ ಆದೇಶಗಳ ಕುರಿತು ಕನಿಷ್ಠ 14 ಬಾರಿ ಆಕ್ಷೇಪ ದಾಖಲಿಸಿದ್ದರು. ಕೆಲವು ನಿರ್ಧಾರಗಳು ತಮ್ಮ ತಿಳಿವಳಿಕೆ ಅಥವಾ ಶಿಫಾರಸು ಇಲ್ಲದೆ ಹೊರಬಂದಿವೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ವರದಿ ತಿಳಿಸಿದೆ.

ಆದರೆ ಚುನಾವಣಾ ಆಯೋಗವು ಈ ಕುರಿತು ಸ್ಪಷ್ಟನೆ ನೀಡಿದ್ದು, ಸಂಧು ಮತ್ತು ಜೋಶಿ ಅವರು ಕ್ಯಾಬಿನೆಟ್ ಕಾರ್ಯದರ್ಶಿಗೆ ಕಳುಹಿಸಿದ್ದ ಪತ್ರಗಳು ನಿಯೋಜಿತ ಅಧಿಕಾರಿಯ ವಿಷಯಕ್ಕೆ ಸಂಬಂಧಿಸಿದ್ದವು. ಅವು ನೀತಿ ನಿರ್ಧಾರಗಳು ಅಥವಾ ಐಟಿ ವಿಭಾಗದ ವಿಚಾರಗಳಿಗೆ ಸಂಬಂಧಿಸಿಲ್ಲ ಎಂದು ತಿಳಿಸಿದೆ.

ಅರ್ಜಿಯ ಮುಂದಿನ ವಿಚಾರಣೆಯಲ್ಲಿ ಚುನಾವಣಾ ಆಯೋಗದ ಬಹುಸದಸ್ಯ ವ್ಯವಸ್ಥೆ, ನಿರ್ಧಾರ ಕೈಗೊಳ್ಳುವ ವಿಧಾನ ಹಾಗೂ ಇತ್ತೀಚಿನ ವಿವಾದಗಳಿಗೆ ಸಂಬಂಧಿಸಿದ ಅಂಶಗಳು ನ್ಯಾಯಾಲಯದ ಮುಂದೆ ಚರ್ಚೆಗೆ ಬರುವ ಸಾಧ್ಯತೆಯಿದೆ.

# ಪವಿತ್ರಾ ನನ್ನ ಹೆಂಡತಿ

ಪ್ರದೋಷ್ ನೀಡಿರುವ ಹೇಳಿಕೆಯ ಪ್ರಕಾರ, ರೇಣುಕಾಸ್ವಾಮಿಯ ವಿಚಾರ ತಿಳಿದು ದರ್ಶನ್ ಕೋಪಗೊಂಡಿದ್ದರು. ಶೆಡ್‌ಗೆ ಕರೆತಂದಿದ್ದ ರೇಣುಕಾಸ್ವಾಮಿಗೆ ದರ್ಶನ್ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ವೇಳೆ ರೇಣುಕಾಸ್ವಾಮಿ ಕೈಮುಗಿದು ಕ್ಷಮೆ ಕೇಳಿದ್ದರು ಎಂದು ಹೇಳಲಾಗಿದೆ.

ಇದೇ ಸಂದರ್ಭದಲ್ಲಿ ದರ್ಶನ್ ಅವರು ಪವಿತ್ರಾಗೌಡ ಅವರೊಂದಿಗೆ ತಮ್ಮ ಸಂಬಂಧದ ಕುರಿತು ಮಾತನಾಡಿದ್ದರು ಎನ್ನಲಾಗಿದೆ. ಪವಿತ್ರಾ ಗೌಡ ಅವರ ಭುಜದ ಮೇಲೆ ಕೈ ಹಾಕಿ, ಅವರನ್ನು ತಮ್ಮ ಪತ್ನಿ ಎಂದು ದರ್ಶನ್ ಪರಿಚಯಿಸಿದ್ದರು ಎಂದು ಪ್ರದೋಷ್ ಹೇಳಿಕೆ ನೀಡಿದ್ದಾರೆ. ಬಳಿಕ ರೇಣುಕಾಸ್ವಾಮಿಗೆ ಮತ್ತಷ್ಟು ಹಲ್ಲೆ ನಡೆಸಿದ ಬಗ್ಗೆ ಕೂಡ ಪ್ರದೋಷ್ ವಿಚಾರಣೆಯಲ್ಲಿ ವಿವರಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರದೋಷ್ ಅವರ ಹೇಳಿಕೆ ಮುಂದಿನ ವಿಚಾರಣೆಯಲ್ಲೂ ಪ್ರಮುಖವಾಗಿದ್ದು, ಅವರು ನೀಡಿರುವ ವಿವರಗಳನ್ನು ನ್ಯಾಯಾಲಯದ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಲಾಗುತ್ತಿದೆ.

**ಪ್ರಕರಣದ ಹಿನ್ನೆಲೆ:**

ರೇಣುಕಾಸ್ವಾಮಿ ಅವರು 2024ರ ಜೂನ್ 8ರಂದು ಬೆಂಗಳೂರಿನಲ್ಲಿ ಮೃತಪಟ್ಟಿದ್ದರು. ಚಿತ್ರದುರ್ಗ ಮೂಲದ 33 ವರ್ಷದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ತೂಗುದೀಪ, ಪವಿತ್ರಾ ಗೌಡ ಸೇರಿದಂತೆ ಹಲವು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

# "ಸಸ್ಸಿ ಸರಹ್" ಚಿನ್ನಪ್ಪ ಮೆಮೋರಿಯಲ್ ಟ್ರೋಫಿ ಗೆಲ್ಲುವ ನಿರೀಕ್ಷೆ

ಮೈಸೂರು,ಸೆ.29- ಸುಲೈಮಾನ್ ಅತ್ತಾಲ್ಲಾಹಿ ರವರಿಂದ ತರಬೇತಿ ಪಡೆದು ನುರಿತ ಜಾಕಿ ಪಟೇಲ್ ಟ್ರೇವರ್ ಸವಾರಿ ಮಾಡಲಿರುವ 'ಸಸ್ಸಿ ಸರಹ್' ಕುದುರೆಯು ನಾಳೆ ಬುಧವಾರ ನಡೆಯಲಿರುವ ಪ್ರಧಾನ ರೇಸ್ ಚಿನ್ನಪ್ಪ ಮೆಮೋರಿಯಲ್ ಟ್ರೋಫಿ ಗೆಲ್ಲುವ ನಿರೀಕ್ಷೆ ಇದೆ .

ನಾಳೆ ಏಳು ಓಟಗಳನ್ನು ಏರ್ಪಡಿಸಿದ್ದು ಮೊದಲನೇ ಓಟವು ಮಧ್ಯಾಹ್ನ 2.00 ಗಂಟೆಗೆ ಪ್ರಾರಂಭವಾಗಲಿದೆ.

**1. ಶ್ರೀರಂಗಪಟ್ಟಣ ಪ್ಲೇಟ್ (ಡಿ -2)**
**1200 ಮೀ**
**ಬ್ರೋಕ್ಸ್ಟನ್ 1 ಸಮರ್ಥ 2 ಸೇಡಕ್ಟಿವ್ 3 (2-3-7)**

**2. ಮೀರತ್ ಪ್ಲೇಟ್**
**1400 ಮೀ**
**ಆಕ್ಟ್ ಆಫ್ ಕೈಂಡ್ನೆಸ್ 1 ಎಮಿನೆಂಟ್ ಗೋಲ್ಡ್ 2 ವಿಸ್ಟ್ ಲಿಂಗ್ ಗ್ಲೋರಿ 3 (1-5-10)**

**3. ಶ್ರೀರಂಗಪಟ್ಟಣ ಪ್ಲೇಟ್ (ಡಿ -1) 1200 ಮೀ**
**ವಿ ಕೆವಿಯರ್ 1 ಫ್ಯಾಶನ್ ಈಸ್ಟ್ 2 ಪರ್ಫೆಕ್ಟ್ ಹಾರ್ಟ್ 3 (10-5-7)**

**4. ಸಿವಿಲ್ ಸರ್ವೀಸ್ ಟ್ರೋಫಿ**
**1200 ಮೀ**
**(ಚಾವಟಿ ಇಲ್ಲದ ರೇಸ್)**
**ವೈಬ್ರೆಂಟ ಕ್ವೀನ್ 1 ಗ್ಲೋರಿಯಸ್ ನೆಸ್ 2 ಐಡಿ ಮಿನಾಲ್ (2-5-8)**

**5. ಚಿನ್ನಪ್ಪ ಮೆಮೋರಿಯಲ್ ಟ್ರೋಫಿ 1400 ಮೀ**
**ಸಸ್ಸಿ ಸರಹ್ 1 ರೇಡ್ ಫಾಲ್ಕನ್ 2 ಐರಿಷ್ ಕಾಫಿ (8-3-4)**

**6. ಸನ್ ಆಫ್ ದಿ ಲೈಟ್ ಪ್ಲೇಟ್ 1600 ಮೀ**
**ಫೈನಲ್ ಕಟ್ 1ಮಿಷ್ಟಿ ಬ್ರೌನ್ 2 ದಿ ಲೀಡರ್ 3 (7-8-5)**

**7. ಪೇನಂಬುರ್ ಪ್ಲೇಟ್**
**1100 ಮೀ**
**ದಿ ಗ್ರೇ ಗೆರಾನಿಯಮ್ 1 ವುಡ್ ಆರ್ಟ್ 2**
**ಒ ಮಂಚಲಿ (2-5-10)**

**ದಿನದ ಅತ್ಯುತ್ತಮ ಬೆಟ್: ಫೈನಲ್ ಕಟ್**

**ಜಾಕ್ಪಾಟ್ ರೇಸ್‌ಗಳು: 3 4 5 6 ಮತ್ತು 7**

**ಮಿನಿ ಜಾಕ್ಪಾಟ್ : 4 5 6 ಮತ್ತು 7**

**1ನೇ ಟ್ರಿಬಲ್: 2 3 ಮತ್ತು 4**

**2ನೇ ಟ್ರಿಬಲ್: 5 6 ಮತ್ತು 7**

# ಡ್ರೋನ್ ಪ್ರತಾಪ್ ವಿರುದ್ಧದ ಪ್ರಕರಣ ಹೈಕೋರ್ಟ್ ರದ್ದು

ಬೆಂಗಳೂರು,ಸೆ. 29- ಕೃಷಿ ಹೊಂಡದಲ್ಲಿ 100 ಗ್ರಾಂ ಸೋಡಿಯಂ ಬಳಸಿ ವಿಜ್ಞಾನ ಪ್ರಯೋಗ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಯೂಟ್ಯೂಬರ್ 'ಡ್ರೋನ್ ಪ್ರತಾಪ್' ಅಲಿಯಾಸ್ ಎನ್.ಎಂ. ಪ್ರತಾಪ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ತಮ್ಮ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸುವಂತೆ ಪ್ರತಾಪ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಪ್ರತಾಪ್ ನಡೆಸಿದ ಪ್ರಯೋಗವು 10ನೇ ತರಗತಿಯ ಎನ್‌ಸಿಇಆರ್‌ಟಿ ಪಠ್ಯಕ್ರಮದಲ್ಲಿರುವ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ್ದಾಗಿದೆ. ಪ್ರಯೋಗದ ಉದ್ದೇಶ ಶೈಕ್ಷಣಿಕವಾಗಿದ್ದು, ಯಾವುದೇ ದುರುದ್ದೇಶ ಕಂಡುಬಂದಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಪ್ರತಾಪ್ ಅವರು ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸಿ ವಿಡಿಯೋ ಮಾಡುವ ಯೂಟ್ಯೂಬರ್ ಆಗಿದ್ದು, ಎಲೆಕ್ಟ್ರಾನಿಕ್ ತ್ಯಾಜ್ಯದಿಂದ ಸುಮಾರು 600 ಡ್ರೋನ್‌ಗಳನ್ನು ನಿರ್ಮಿಸಿರುವುದಾಗಿ ನ್ಯಾಯಾಲಯದ ಮುಂದೆ ಉಲ್ಲೇಖಿಸಲಾಗಿದೆ. ರಾಸಾಯನಿಕ ಕ್ರಿಯೆಯನ್ನು ಸಾರ್ವಜನಿಕರಿಗೆ ಶೈಕ್ಷಣಿಕವಾಗಿ ವಿವರಿಸುವ ಉದ್ದೇಶದಿಂದಲೇ ವಿಡಿಯೋ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಆದರೆ, ಪ್ರಯೋಗ ನಡೆಸಿದ ವಿಧಾನವನ್ನು ನ್ಯಾಯಾಲಯ ಸಮರ್ಥಿಸುವುದಿಲ್ಲ ಅಥವಾ ಶ್ಲಾಘಿಸುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿದೆ. ಪ್ರಕರಣವನ್ನು ಮುಂದುವರಿಸಲು ಅಗತ್ಯವಿರುವ ದುರುದ್ದೇಶ ಸಾಬೀತಾಗಿಲ್ಲದ ಹಿನ್ನೆಲೆಯಲ್ಲಿ ಪ್ರತಾಪ್ ಅವರನ್ನು ತನಿಖೆ ಹಾಗೂ ಕ್ರಿಮಿನಲ್ ವಿಚಾರಣೆಗೆ ಒಳಪಡಿಸುವ ಅಗತ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ.

# ನೈಸ್ ಯೋಜನೆ ಲೂಟಿ

ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ನೈಸ್ ಯೋಜನೆಗೆ ಸಹಿ ಹಾಕಿದ್ದು ನಿಜ. ಆದರೆ, ಆ ಯೋಜನೆಯಲ್ಲಿ ಸಂಪೂರ್ಣವಾಗಿ ಕಂಪನಿಯವರು ಸ್ವಂತ ಹಣದಲ್ಲಿ ರಸ್ತೆ ಮಾಡಬೇಕು. ಕೆರೆಗಳ ಒತ್ತುವರಿಯಾಗಬಾರದು ಎಂದು ಸ್ಪಷ್ಟ ನಿಯಮ ಇಟ್ಟವು. 2003 ರಲ್ಲಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿ ಇಡೀ ಮೂಲ ಒಪ್ಪಂದವನ್ನು ಬದಲಾಯಿಸಲಾಯಿತು ಎಂದು ಆರೋಪಿಸಿದರು.

ಮೂಲ ಒಪ್ಪಂದದ ಪ್ರಕಾರ ರಸ್ತೆಗೆ 6999 ಎಕರೆ ಜಮೀನು ನಿಗದಿಯಾಗಿತ್ತು. ಆದರೆ, ಡಿ.ಕೆ. ಶಿವಕುಮಾರ್ ಅವರು ಇದನ್ನು 9468 ಎಕರೆಗೆ ಏರಿಸಿದ್ದಾರೆ ಇದಕ್ಕೆ ಉತ್ತರ ನೀಡಬೇಕು ಎಂದರು.

ಎಕೆ-ಡಿಕೆ( ಅಶೋಕ್ ಖೇಣಿ,ಡಿ.ಕೆ. ಶಿವಕುಮಾರ್) ಸೇರಿ ಮೂಲ ಒಪ್ಪಂದವನ್ನು ಹೇಗೆ ಬದಲಾಯಿಸಿದ್ದಾರೆ ಎಂಬುದನ್ನು ಕುಮಾರಸ್ವಾಮಿ ದಾಖಲೆಗಳ ಸಮೇತ ವಿವರಿಸಿ , 1995 ರಿಂದ ನೈಸ್ ಯೋಜನೆಯ ಇತಿಹಾಸವನ್ನು ವಿವರಿಸಿದರು.

1995 ರಲ್ಲಿ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಸಚಿವ ಸಂಪುಟದಲ್ಲಿ ನೈಸ್ ಯೋಜನೆಗೆ ಅನುಮತಿ ನೀಡಲಾಗಿತ್ತು. ಆಗ ಬಿಹೆಚ್‌ಬಿ ಕಲ್ಯಾಣಿ ಗ್ರೂಪ್, ಎಸ್‌ಎಪಿ ಇಂಜಿನಿಯರಿಂಗ್ ಕಂಪನಿಗಳ ಜತೆಗೆ ಎಂಓಯೂ ಆಗಿದ್ದು 1999 ರಲ್ಲಿ ಭಾರತ್ ಬೋರ್ಡ್ ಲಿ. ಹೊರಗೆ ಹೋದ ಬಳಿಕ ನೈಸ್ ಕಂಪನಿ ಪ್ರವೇಶ ಪಡೆಯಿತು. 2002 ರಲ್ಲಿ ಯೋಜನೆಯನ್ನು ಬದಲಾವಣೆ ಮಾಡಿ ನಂದಿ ಏಕಾನಮಿಕ್ ಕಾರಿಡಾರ್ ಎಂಟರ್ ಪ್ರೈಸಸ್ ಜತೆ ಮತ್ತೊಂದು ಒಪ್ಪಂದ ಮಾಡಲಾಯಿತು. ಆಗ ಎಸ್ ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದರು. ಡಿ.ಕೆ. ಶಿವಿಕುಮಾರ್ ನಗರಾಭಿವೃದ್ಧಿ ಸಚಿವರಾಗಿದ್ದರು ಎಂದು ಕುಮಾರಸ್ವಾಮಿ ಹೇಳಿದರು.

ನಗರಾಭಿವೃದ್ಧಿ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲೇ ಬಿಎಂಐಸಿಪಿಎ ಸಮಿತಿ ರಚನೆಯಾಗಿ ಹೊಸ ಅಲೈನ್‌ಮೆಂಟ್ ಮಾಡಲಾಯಿತು. ಈ ಹೊಸ ಯೋಜನೆಯಲ್ಲಿ 10-12 ಕೆರೆಗಳು ನಾಶವಾಗಿವೆ ಎಂದು ಆರೋಪಿಸಿದರು.

ಟೌನ್‌ಶಿಪ್‌ಗಳ ಅಳತೆಯನ್ನು ಬಿಎಂಐಸಿಪಿಎ ಸಮಿತಿ ಸಭೆಯಲ್ಲೇ ಮಾಡಿದರು. ಮೂಲ ಒಪ್ಪಂದದಲ್ಲಿ ಡಿಪಿಆರ್ ಆದಾಗ ಕೃಷಿಗೆ ಫಲವತ್ತಾದ ಭೂಮಿಯನ್ನು ಯೋಜನೆಗೆ ಗುರುತಿಸಿರಲಿಲ್ಲ. ಒಣ ಭೂಮಿ ಪಡೆಯಲು ತೀರ್ಮಾನ ಮಾಡಲಾಗಿತ್ತು ಎಂದು ಹೇಳಿದರು.

ಟೌನ್‌ಶಿಪ್ ನಿಗದಿ ಮಾಡಿದ್ದ ಭೂಮಿ ಅಳತೆ ಬದಲಾವಣೆ ಮಾಡಿಕೊಳ್ಳಲು ಎಕೆ,ಡಿಕೆ ಸೇರಿ ಮಾಡಿದ ಪ್ಲಾನ್. ರಾಜ್ಯಾಂಗ, ಕಾರ್ಯಾಂಗ ಎಲ್ಲವನ್ನೂ ದುರುಪಯೋಗ ಮಾಡಿಕೊಂಡಿದ್ದಾರೆ. ಈ ವ್ಯಕ್ತಿ ರಾಜ್ಯವನ್ನು ಹಾಳು ಮಾಡುವುದಕ್ಕೆ ಪ್ರಯತ್ನಪಟ್ಟರು ಎಂದು ಡಿ.ಕೆ. ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು. ಕಾರ್ಯಾಂಗದಲ್ಲಿ ತಮಗೆ ಬೇಕಾದ ಹಾಗೆ ತಿರುಚಿದರು. ನ್ಯಾಯಾಂಗದಲ್ಲಿ ರಿಪಿಟೇಷನ್ ಹಾಕಿ ಅಧಿಕಾರಿಗಳನ್ನು ದಾರಿ ತಪ್ಪಿಸಿ ಇಷ್ಟೆಲ್ಲಾ ಅನಾಹುತ ಮಾಡಿದವರು ಡಿ.ಕೆ. ಶಿವಕುಮಾರ್ ಎಂದ ದೂರಿದರು.

ಈ ಯೋಜನೆ ಕಳೆದ ಏಪ್ರಿಲ್‌ಗೆ 30 ವರ್ಷ ಪೂರೈಸಿದೆ. ಇನ್ನೂ ಈ ಯೋಜನೆ ಪೂರ್ಣಗೊಂಡಿಲ್ಲ. ದೇವೇಗೌಡರು, ಜೆ.ಹೆಚ್. ಪಟೇಲ್ ಅವರಿಂದ ದುರುಪಯೋಗ ಆಗಿಲ್ಲ. ಆಗಿರುವುದು ಡಿ.ಕೆ. ಶಿವಕುಮಾರ್ ಅವರಿಂದ ಎಂದು ದೂರಿದರು.

ಡಿ.ಕೆ. ಸುರೇಶ್ ಮತ್ತು ಗೌರಮ್ಮ ಹೆಸರಿನಲ್ಲಿದ್ದ ಜಾಗಕ್ಕೆ ನೈಸ್ ನವರು ಎನ್‌ಓಸಿ ಕೊಟ್ಟರು. ಇದನ್ನೆಲ್ಲಾ ದೇವೇಗೌಡರು ಹೇಳಿದ್ದರಾ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ನೈಸ್ ಸಂಸ್ಥೆ ಸಿಕ್ಕ ಸಿಕ್ಕವರಿಗೆಲ್ಲಾ ಎನ್‌ಓಸಿ ಕೊಟ್ಟಿದೆ. ಸುಮಾರು 420 ಜನಕ್ಕೆ ಎನ್‌ಓಸಿ ಕೊಟ್ಟಿದ್ದಾರೆ. ಅಶೋಕ್ ಖೇಣಿ ಮನೆಯಲ್ಲಿ ಅಡುಗೆ ಮಾಡುವವರಿಗೂ ಎನ್‌ಓಸಿ ಕೊಟ್ಟಿದ್ದಾರೆ. ಅವನಿಗೆ ಎಲ್ಲಿಂದ ಜಮೀನು ಬಂತೋ ಗೊತ್ತಿಲ್ಲ. ತನಿಖೆಯಾದರೆ ದೊಡ್ಡ ಹಗರಣವೇ ಆಗುತ್ತದೆ ಎಂದರು.

ನೈಸ್ ಯೋಜನೆಯ ಅವ್ಯವಹಾರ, ನೈಸ್ ಯೋಜನೆಗೆ ಸಂಬಂಧಿಸಿದ ಲೂಟಿಯನ್ನು ಎಳೆಎಳೆಯಾಗಿ ಬಿಡಿಸಿಟ್ಟ ಕುಮಾರಸ್ವಾಮಿ ಅವರು, ಡಿ.ಕೆ. ಶಿವಕುಮಾರ್ ಅವರು ಈ ಯೋಜನೆ ಹೆಸರಿನಲ್ಲಿ ಏನೆಲ್ಲಾ ಮಾಡಿದ್ದಾರೆ ಎಲ್ಲವನ್ನು ವಿವರಿಸಿದರು.

ಭೂಮಿಯನ್ನು ಉಳಿಸಿಕೊಳ್ಳುವುದಕ್ಕೆ ಕುಮಾರಸ್ವಾಮಿ, ದೇವೇಗೌಡರು ಬ್ಲಾಕ್ ಮೇಲ್ ಮಾಡುತ್ತಿದ್ದಾರೆ ಎಂದು ಡಿಕೆಶಿ ಮಹೇಳಿದ್ರಾನಾನಲ್ಲ. ಬ್ಲಾಕ್‌ಮೆಲ್ ಮಾಡುತ್ತಿರುವುದು ಡಿ.ಕೆ. ಶಿವಕುಮಾರ್ ಎಂದು ವಾಗ್ದಾಳಿ ನಡೆಸಿದರು. ಈ ಯೋಜನೆ ಹೆಸರಿನಲ್ಲಿ ರೈತರ ಜತೆ ಚೆಲ್ಲಾಡವಾಡುತ್ತಿದ್ದಾರೆ. ಎಂದು ದೂರಿದರು.

# ಡಿಸಿಎಂ ದೆಹಲಿ ಭೇಟಿ ಕುತೂಹಲಕ್ಕೆಡೆ

**ಬೆಂಗಳೂರು ,ಸೆ. 29-** ಉಪಮುಖ್ಯಮಂತ್ರಿ ಡಾ. ಜಿ ಪರಮೇಶ್ವರ್ ಅವರ ಇಂದಿನ ದೆಹಲಿ ಭೇಟಿ ಕುತೂಹಲ ಮೂಡಿಸಿ ಇರುವಾಗಲೇ ದೆಹಲಿ ಭೇಟಿ ಬಗ್ಗೆ ಮಾತನಾಡಿರುವ ಅವರು "ನಾನು ದೆಹಲಿಗೆ ಹೋಗುತ್ತಿದ್ದೇನೆ. ಅಲ್ಲಿ ಯಾರನ್ನು ಭೇಟಿ ಮಾಡಲಾಗುತ್ತದೆ, ಯಾವ ಚರ್ಚೆ ನಡೆಯಲಿದೆ ಎಂಬುದು ಅಲ್ಲಿಗೆ ಹೋದ ಮೇಲೆಯೇ ಗೊತ್ತಾಗುತ್ತದೆ" ಎಂದು ಪರಮೇಶ್ವರ್ ಹೇಳಿದ್ದಾರೆ.

ಭೇಟಿಯ ಉದ್ದೇಶದ ಬಗ್ಗೆ ಕುತೂಹಲ ಮೂಡಿಸಿರುವ ಅವರು, ಚರ್ಚೆಯ ನಂತರವೇ ಮಾಹಿತಿ ನೀಡುವುದಾಗಿ ತಿಳಿಸಿದ್ದಾರೆ.

ಕೇಂದ್ರ ಸಚಿವ ಶಿವರಾಜ್ ಚೌಹಾಣ್ ಅವರು ಕೇಂದ್ರ ಬರ ಅಧ್ಯಯನ ತಂಡದ ಜೊತೆ ಬರುವುದಾಗಿ ಹೇಳಿದ್ದಾರೆ ಜನವರಿ 3 ರಂದು ಕೇಂದ್ರ ತಂಡದೊಂದಿಗೆ ರಾಜ್ಯಕ್ಕೆ ಭೇಟಿ ಇಡುವುದಾಗಿ ಎಂದು ಡಾ. ಜಿ ಪರಮೇಶ್ವರ್ ಹೇಳಿದರು ಬರ ಪೀಡಿತ ಪ್ರದೇಶಗಳನ್ನು ಕಣ್ಣಾರೆ ನೋಡಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ನಾವು ಹೇಳುವುದನ್ನು ಕೇಳುವ ಬದಲು ಅವರೇ ಪ್ರತ್ಯಕ್ಷ

ವೀಕ್ಷಣೆ ಮಾಡಿದರೆ, ಅವರಿಗೆ ತೃಪ್ತಿಯಾದರೆ ಹೆಚ್ಚಿನ ಹಣ ಬಿಡುಗಡೆ ಮಾಡಲು ಅನುಕೂಲವಾಗುತ್ತದೆ" ಎಂದು ಪರಮೇಶ್ವರ್ ವಿವರಿಸಿದ್ದಾರೆ.

ಬಿಜೆಪಿ ನಾಯಕರು ದೆಹಲಿಗೆ ಬರುವುದಿಲ್ಲ ಎಂದು ಹೇಳಿರುವುದರ ಕುರಿತು ಪ್ರತಿಕ್ರಿಯಿಸಿದ ಡಿಸಿಎಂ, "ನಾವು ಪ್ರಯತ್ನ ಮುಂದುವರಿಸುತ್ತೇವೆ. ಅವರು ಬರದಿದ್ದರೆ ಅದು ಅವರ ಇಚ್ಛೆಗೆ ಬಿಟ್ಟ ವಿಚಾರ. ಜವಾಬ್ದಾರಿಯುತ ಸರ್ಕಾರವಾಗಿ ನಾವು ಮನವಿ ಸಲ್ಲಿಸುವ ಕಾರ್ಯ ಮಾಡಲೇಬೇಕು" ಎಂದು ಸ್ಪಷ್ಟಪಡಿಸಿದ್ದಾರೆ.

Sanjevani - Printed and Published by B.T.Amuthan on behalf of M/s Karnataka News Publications (P) Ltd. Printed at Dinasudar Printing Division, 11/2, Queen's Road, Bangalore, Karnataka - 560052.
Published at M/s Karnataka News Publications (P) Ltd. 11/2, Queen's Road, Bangalore, Karnataka - 560052. Editor: B.T. Amuthan. RNI No.36667/82

# ಮರ ಬಿದ್ದು ವ್ಯಕ್ತಿಗೆ ಶಾಶ್ವತ ಅಂಗವೈಕಲ್ಯ 2.77 ಕೋಟಿ ಪರಿಹಾರ ನೀಡಲು ಜಿಬಿಎಗೆ ಹೈಕೋರ್ಟ್ ಆದೇಶ

ಬೆಂಗಳೂರು,ಸೆ.29–ಮರದಕೊಂಬೆ ಬಿದ್ದು ವ್ಯಕ್ತಿಗೆ ಶಾಶ್ವತ ಅಂಗವೈಕಲ್ಯ ಉಂಟಾದ ಪ್ರಕರಣದಲ್ಲಿ ಬಿಬಿಎಂಪಿ (ಹಾಲಿ ಜಿಬಿಎ) ನಿರ್ಲಕ್ಷ್ಯಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್ ಗಾಯಗೊಂಡ ಜಿ. ಚಂದನ್ ಅವರಿಗೆ 2,77,29,695 ಪರಿಹಾರ ನೀಡುವಂತೆ ಜಿಬಿಎಗೆ ಆದೇಶಿಸಿದೆ.

ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಚಂದನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಈ ಆದೇಶ ನೀಡಿ

ಪರಿಹಾರ ಮೊತ್ತಕ್ಕೆ ಶೇ.6ರಷ್ಟು ವಾರ್ಷಿಕಬಡ್ಡಿಯನ್ನೂಪಾವತಿಸುವಂತೆ ಸೂಚಿಸಿದೆ.

ಈಗಾಗಲೇಬಿಬಿಎಂಪಿಪಾವತಿಸಿರುವ ?5 ಲಕ್ಷವನ್ನು ಕಡಿತಗೊಳಿಸಿ ಉಳಿದ ಮೊತ್ತವನ್ನು ಪಾವತಿಸಬೇಕು. 2024ರ ಮಾರ್ಚ್ 7ರಿಂದ ಪರಿಹಾರ ಪಾವತಿಸುವವರೆಗೆ ಶೇ.6ರಷ್ಟು ಬಡ್ಡಿ ಅನ್ವಯವಾಗಲಿದೆ. ತೀರ್ಪಿನ ಪ್ರತಿ ಪಡೆದ 12 ವಾರಗಳೊಳಗೆ ಆರ್‌ಟಿಜಿಎಸ್ ಮೂಲಕ ಹಣ ಪಾವತಿಸುವಂತೆ ಪೀಠ ಸೂಚಿಸಿದೆ.

**ಮೊದಲೇ ಎಚ್ಚರಿಕೆ:**

2024ರ ಮಾರ್ಚ್ 7ರಂದು ಬೆಳಗ್ಗೆ 10 ಗಂಟೆ ಸುಮಾರಿಗೆ ಚಂದನ್ ಅವರು ಬೆಂಗಳೂರಿನ ಶಾಂತಲಾ ನಗರದ ಕಾನ್ವೆಂಟ್ ರಸ್ತೆಯಲ್ಲಿ ಕಚೇರಿಗೆ ತೆರಳುತ್ತಿದ್ದರು. ಈ ವೇಳೆ ಗುಡ್ ಶೆಫರ್ಡ್ ಕಾನ್ವೆಂಟ್ ಶಾಲೆಯ ಆವರಣದಲ್ಲಿದ್ದ ಗುಲ್ಮೊಹರ್ ಮರದ ದಪ್ಪ ಕೊಂಬೆ ಅವರ ಕುತ್ತಿಗೆಯ ಮೇಲೆ ಬಿದ್ದಿತ್ತು.

ಘಟನೆಯಿಂದ ಚಂದನ್ ಅವರ ಬೆನ್ನುಹುರಿಗೆ ಗಂಭೀರಗಾಯವಾಗಿದ್ದು, ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಬಳಿಕ ಅವರು ಟ್ರಾಮಾಟಿಕ್ ಪ್ಯಾರಾಪ್ಲೀಜಿಯಾ ಸಮಸ್ಯೆಗೆ ಒಳಗಾದರು. ವೈದ್ಯಕೀಯ ಪ್ರಮಾಣಪತ್ರದ ಪ್ರಕಾರ ಶೇ.85ರಷ್ಟು ಅಂಗವೈಕಲ್ಯವಿದ್ದರೂ, ಜೀವನೋಪಾಯ ಮತ್ತು ದೈನಂದಿನ ಚಟುವಟಿಕೆಗಳ ದೃಷ್ಟಿಯಿಂದ ಅವರ ಅಂಗವೈಕಲ್ಯವನ್ನು ಶೇ.100 ಎಂದು ಹೈಕೋರ್ಟ್ ಪರಿಗಣಿಸಿದೆ.

**ಶಾಲೆಯಿಂದ ಎಚ್ಚರ:**

ಅಪಾಯಕಾರಿ ಕೊಂಬೆಯ ಬಗ್ಗೆ ಗುಡ್ ಶೆಫರ್ಡ್ ಕಾನ್ವೆಂಟ್ ಶಾಲೆಯು ಫೆಬ್ರವರಿ 16ರಂದು ಬಿಬಿಎಂಪಿಗೆ ಪತ್ರ ಬರೆದಿತ್ತು. ಫೆಬ್ರವರಿ 22ರಂದು ಈ ಪತ್ರವನ್ನು ಬಿಬಿಎಂಪಿಗೆ ಸಲ್ಲಿಸಲಾಗಿತ್ತು. ಕೊಂಬೆ ಯಾವಾಗ ಬೇಕಾದರೂ ಮುರಿದು ಬೀಳುವ ಸಾಧ್ಯತೆಯಿದ್ದು, ಮಕ್ಕಳು, ನಿವಾಸಿಗಳು ಮತ್ತು ವಾಹನಗಳಿಗೆ ಅಪಾಯವಿದೆ ಎಂದು ಶಾಲೆ ಎಚ್ಚರಿಸಿತ್ತು.

ಆದರೆ, ಕೊಂಬೆ ಕತ್ತರಿಸಲು ಬಿಬಿಎಂಪಿ ಅನುಮತಿ ನೀಡಿದ್ದು ಅಪಘಾತ ಸಂಭವಿಸಿದ ಮಾರ್ಚ್ 7ರಂದು. ಅಪಾಯದ ಬಗ್ಗೆ ಮುಂಚಿತವಾಗಿ ಮಾಹಿತಿ ಇದ್ದರೂ ಕ್ರಮ ಕೈಗೊಳ್ಳದಿರುವುದು ನಿರ್ಲಕ್ಷ್ಯ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

**ಖಾಸಗಿ ಜಾಗದ ಮರ:**

ಮರ ಖಾಸಗಿ ಜಾಗದಲ್ಲಿತ್ತು ಹಾಗೂ ಘಟನೆ ಪ್ರಕೃತಿ ಕಾರಣದಿಂದ ಸಂಭವಿಸಿದೆ ಎಂಬ ಬಿಬಿಎಂಪಿ ವಾದವನ್ನು ಹೈಕೋರ್ಟ್ ಒಪ್ಪಲಿಲ್ಲ. ಅಪಾಯದ ಬಗ್ಗೆ ಮೊದಲೇ ಮಾಹಿತಿ ಬಂದಿದ್ದ ಸಂದರ್ಭದಲ್ಲಿ ಮರ ಖಾಸಗಿ ಜಾಗದಲ್ಲಿದ್ದರೂ ಸಾರ್ವಜನಿಕ ರಸ್ತೆ ಮತ್ತು ಜನರ ಸುರಕ್ಷತೆ ಕಾಪಾಡುವುದು ಸ್ಥಳೀಯ ಸಂಸ್ಥೆಯ ಕಾನೂನುಬದ್ಧ ಕರ್ತವ್ಯ ಎಂದು ಪೀಠ ಸ್ಪಷ್ಟಪಡಿಸಿದೆ.

ಇದೇ ವೇಳೆ ನಗರದಲ್ಲಿ ಮರಗಳು ಸೇರಿದಂತೆ ಸಾರ್ವಜನಿಕರಿಗೆ ಅಪಾಯ ಉಂಟುಮಾಡಬಹುದಾದ ಅಂಶಗಳನ್ನು ಗುರುತಿಸಿ ಸಮಗ್ರ ಸುರಕ್ಷತಾ ವ್ಯವಸ್ಥೆ ರೂಪಿಸುವಂತೆ ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

### ಸಾರ್ವಜನಿಕ ಸುರಕ್ಷತೆಗೆ ನಿರ್ದೇಶನ

* ಗುಂಡಿಗಳು, ತೆರೆದ ಮ್ಯಾನ್‌ಹೋಲ್‌ಗಳು, ಚರಂಡಿಗಳು, ವಿದ್ಯುತ್ ಅಪಾಯ, ಅಪಾಯಕಾರಿ ಕಟ್ಟಡಗಳು ಹಾಗೂ ನಿರ್ಮಾಣ ಕಾಮಗಾರಿಗಳನ್ನು ಗುರುತಿಸಬೇಕು.
* ನಾಗರಿಕರು ಫೋಟೋ, ವಿಡಿಯೋ ಮತ್ತು ಸ್ಥಳದ ಮಾಹಿತಿಯೊಂದಿಗೆ ದೂರು ನೀಡಲು ಸಾಮಾನ್ಯ ಡಿಜಿಟಲ್ ವ್ಯವಸ್ಥೆ ರೂಪಿಸಬೇಕು.
* ಪ್ರತಿ ದೂರಿಗೆ ವಿಶಿಷ್ಟ ಗುರುತು ಸಂಖ್ಯೆ ನೀಡಿ, ದೂರು ಪರಿಹಾರವಾಗುವವರೆಗೆ ಅದರ ಸ್ಥಿತಿಯನ್ನು ಸಾರ್ವಜನಿಕರು ಪರಿಶೀಲಿಸಲು ಅವಕಾಶ ಕಲ್ಪಿಸಬೇಕು.
* ಅಪಾಯಗಳನ್ನು ತುರ್ತು, ಹೆಚ್ಚು, ಮಧ್ಯಮ ಮತ್ತು ಸಾಮಾನ್ಯ ಎಂದು ವರ್ಗೀಕರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.
* ಅಪಾಯ ಗುರುತಿಸಲು ಕೃತಕ ಬುದ್ಧಿಮತ್ತೆ (ಎಐ) ವ್ಯವಸ್ಥೆ ಬಳಸಬಹುದಾದರೂ, ಕಾನೂನು ಉಲ್ಲಂಘನೆ ಅಥವಾ ಹೊಣೆಗಾರಿಕೆ ನಿರ್ಧರಿಸುವ ಅಧಿಕಾರವನ್ನು ಎಐಗೆ ನೀಡಬಾರದು.
* ಬೆಂಗಳೂರು ನಗರದಲ್ಲಿ ಈ ವ್ಯವಸ್ಥೆಯನ್ನು ಮೊದಲು ಜಾರಿಗೆ ತರಬೇಕು ಹಾಗೂ ಪ್ರಮುಖ ನಿರ್ದೇಶನಗಳನ್ನು ಆರು ತಿಂಗಳೊಳಗೆ ಅನುಷ್ಠಾನಗೊಳಿಸಬೇಕು.
* ಅಪಾಯಕಾರಿ ಮರಗಳ ನಿರ್ವಹಣಾ ಕ್ರಮಗಳನ್ನು ಮೂರು ತಿಂಗಳೊಳಗೆ ಪರಿಶೀಲಿಸಿ ಅಗತ್ಯ ಸುಧಾರಣೆ ಕೈಗೊಳ್ಳಬೇಕು

# ರೋಟರಿ ಕ್ಲಬ್‌ನಿಂದ ಉಚಿತ ಮೆಗಾ ಕೃತಕ ಅಂಗ ಶಿಬಿರ

ಬೆಂಗಳೂರು, ಸೆ. 29: ರೋಟರಿ ಕ್ಲಬ್ ಆಫ್ ಬೆಂಗಳೂರು ಜಂಕ್ಷನ್ ವತಿಯಿಂದ 10ನೇ ಉಚಿತ ವಾರ್ಷಿಕ ಮೆಗಾ ಕೃತಕ ಅಂಗ (ಜೈಪುರ ಫುಟ್) ಶಿಬಿರವನ್ನು ಆಯೋಜಿಸಲಾಗಿದೆ.

ಈ ಉಚಿತ ಶಿಬಿರವು ಅಕ್ಟೋಬರ್ 2 (ಶುಕ್ರವಾರ) ರಿಂದ ಅಕ್ಟೋಬರ್ 4 (ಭಾನುವಾರ) ರವರೆಗೆ ಶಂಕರಪುರಂನ ಪಂಪಮಹಾಕವಿ ರಸ್ತೆಯಲ್ಲಿರುವ 'ಶ್ರೀ ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪ'ದಲ್ಲಿ ನಡೆಯಲಿದೆ. ಜೈಪುರದ ಶ್ರೀ ಭಗವಾನ್ ಮಹಾವೀರ್ ವಿಕಲಾಂಗ್ ಸಹಾಯತಾ ಸಮಿತಿ ಹಾಗೂ ಶ್ರೀ ಶೃಂಗೇರಿ ಶಾರದಾಪೀಠಂ ಚಾರಿಟೇಬಲ್ ಟ್ರಸ್ಟ್ ಈ ಕಾರ್ಯಕ್ರಮದ ಸಹಭಾಗಿತ್ವವನ್ನು ವಹಿಸಿವೆ. ಸಾಧನಗಳನ್ನು ಅಥವಾ ಕೃತಕ ಅಂಗಗಳನ್ನು ಪಡೆಯಲು ಬಯಸುವ ಫಲಾನುಭವಿಗಳು ತಮ್ಮ ಆಧಾರ್ ಕಾರ್ಡ್ ಅಥವಾ ಅಂಗವಿಕಲರ ಗುರುತಿನ ಚೀಟಿಯ (ಡಿಟೇಲ್ಸ್) ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ತರಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ. ನೋಂದಣಿ ಮತ್ತು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಸತ್ಯೇಂದ್ರ ಸಾಹೂ: 7005852343 ಬಿ.ಎಂ.ವಿ.ಎಸ್.ಎಸ್: 080–29915342 ಶಂಕರ್ ಲಾಲ್ ಅಗರ್‌ವಾಲ್: 9342069904 ಅನುರಾಧ ಭಟ್: 7676975426 ಅಲನ್ ಕೃಷ್ಣಮೂರ್ತಿ: 9880844757 ಮನೀಶ್ ಭೋಬಾವರ್: 9071207574 ಅಗತ್ಯವಿರುವ ವಿಕಲಚೇತನರಿಗೆ ಈ ಉಚಿತ ಶಿಬಿರದ ಸದ್ಬಳಕೆಗೆ ಮಾಡಿಕೊಳ್ಳುವಂತೆ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲಾರಿ ಡಿಕ್ಕಿ -ಮಹಿಳೆ ಸಾವು, ಮೂವರಿಗೆ ಗಾಯ

ಬಳ್ಳಾರಿ.ಸೆ.29– ಕುರುಗೋಡು ತಾಲೂಕಿನ ಸೋಮಸಮುದ್ರ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ–150ಎ ರಲ್ಲಿ ಭೀಕರ ಅಪಘಾತ ಸಂಭವಿಸಿ ಓರ್ವ ಮಹಿಳೆ ಸಾವನ್ನಪ್ಪಿ, ಮೂವರು ಗಾಯಗೊಂಡಿದ್ದಾರೆ.

48 ವರ್ಷದ ಮಹಾದೇವಿ ಎಂಬ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದು, ಸೋಮಸಮುದ್ರಗ್ರಾಮದ ಸುನಿತಾ, ಗಗನ್ ಹಾಗೂ ಪೂಜಾರಿ ಜಡೇಮ್ಮ ಗಾಯಗೊಂಡಿದ್ದು, ಇವರನೆಲ್ಲಾ ಬಳ್ಳಾರಿಯ ಟ್ರಾಮಾಕೇರ್ ಸೆಂಟರ್‌ಗೆ ದಾಖಲಿಸಲಾಗಿದೆ.

ಲಾರಿ ಅತಿವೇಗವಾಗಿ ಚಲಿಸುತ್ತಿದ್ದುದೇ ಅಪಘಾತಕ್ಕೆ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ಆರೋಪಿಸಿದ್ದಾರೆ. ಘಟನೆ ಸಂಬಂಧ ಕುರುಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# 1.6 ಕೋಟಿ ಮೌಲ್ಯದ ಚಿನ್ನ ಜಪ್ತಿ ನಾಲ್ವರ ಬಂಧನ

ಬೆಂಗಳೂರು,ಸೆ.29–ಚಿನ್ನಾಭರಣ ತಯಾರಿಕಾ ಸಂಸ್ಥೆಯಲ್ಲಿ ಚಿನ್ನ ಕಳವು ಹಾಗೂ ಕನ್ನ ಕಳವು ಮಾಡಿದ್ದ ನಾಲ್ವರು ಆರೋಪಿಗಳನ್ನು ಸುಬ್ರಮಣ್ಯನಗರ ಪೊಲೀಸರು ಬಂಧಿಸಿ 1.06 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ಚಿನ್ನದ ಗಟ್ಟಿಗಳನ್ನು ವಶಪಡಿಸಿಕೊಂಡಿದ್ದಾರೆ.

ಪಶ್ಚಿಮ ಬಂಗಾಳ ಮೂಲದ ಮಂಜುನಾಥ್ ನಗರದ ನೂರ್ ಇಸ್ಲಾಂ ಮಲ್ಲಿಕ್(37) ಶ್ರೀನಿಧಿ(22) ಕಮಲಾನಗರದ ಭುವನೇಶ್ ಅಲಿಯಾಸ್ ಪುನೀತ್(20) ಹಾಗೂ ಬನಶಂಕರಿ ಚೇತನ್ ಅಲಿಯಾಸ್ ಕರಿಯ(24) ಬಂಧಿತ ಆರೋಪಿಗಳಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ರಾಜಾಜಿನಗರ 1ನೇ ಬ್ಲಾಕ್‌ನಲ್ಲಿರುವ ಚಿನ್ನಾಭರಣ ತಯಾರಿಕಾ ಸಂಸ್ಥೆಯ ಮಾಲೀಕ ರಾಜಾಜಿನಗರದ ರಾಜೇಶ್ ಸದಾನಂದ ರೇವಣ್ಣಕರ್ ಅವರು ಕಳೆದ ಆಗಸ್ಟ್ 27ರಂದು ಸುಬ್ರಮಣ್ಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಸಂಸ್ಥೆಯಲ್ಲಿ ಕಳೆದ ಐದು ವರ್ಷಗಳಿಂದ ಚಿನ್ನದ ಬಳೆ ತಯಾರಿಸುವ ಕೆಲಸ ಮಾಡುತ್ತಿದ್ದ ಹೊರರಾಜ್ಯದ ನೂರ್ ಇಸ್ಲಾಂ ಮಲ್ಲಿಕ್ ಗೆ ಆಗಸ್ಟ್ 20ರಂದು ಚಿನ್ನ ನೀಡಿ ಬಳೆಗಳನ್ನು ತಯಾರಿಸುವಂತೆ ಸೂಚಿಸಲಾಗಿತ್ತು.

ಆದರೆ, ಆರೋಪಿಯು ಬಳೆಗಳನ್ನು ತಯಾರಿಸದೆ ನೀಡಿದ್ದ ಚಿನ್ನವನ್ನು ತೆಗೆದುಕೊಂಡು ಹೋಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿತ್ತು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ಖಚಿತ ಮಾಹಿತಿ ಆಧರಿಸಿ ಕಳೆದ ಸೆ. 15ರಂದು ಪಶ್ಚಿಮ ಬಂಗಾಳದ ಬರ್ದಮಾನ್ ಜಿಲ್ಲೆಯ ಕಾಲ್ನಾ ನಗರದಲ್ಲಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ವಿಚಾರಣೆ ವೇಳೆ ಚಿನ್ನ ತೆಗೆದುಕೊಂಡು ಹೋಗಿರುವುದಾಗಿ ಆರೋಪಿಯು ಒಪ್ಪಿಕೊಂಡಿದ್ದಾನೆ.

ಬಳಿಕ ಆರೋಪಿಯ ಪತ್ನಿಯ ತಾಯಿಯ ಮನೆಯಿಂದ 441 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ. ಬಳಿಕ ಟ್ರಾನ್ಸಿಸ್ಟ್ ವಾರೆಂಟ್ ಪಡೆದು ಆರೋಪಿಯನ್ನು ಬೆಂಗಳೂರಿಗೆ ಕರೆತರಲಾಗಿತ್ತು. ಸೆಪ್ಟೆಂಬರ್ 18ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ



ನಗರದ ಪುಟ್ಟೇನಹಳ್ಳಿ ಪೊಲೀಸ್ ಠಾಣೆ ಪೊಲೀಸರು ಕಳ್ಳರಿಂದ ವಶಪಡಿಸಿಕೊಂಡಿರುವ 1.6 ಕೋಟಿ ಬೆಲೆಯ ಚಿನ್ನಾಭರಣ ಹಾಗೂ ಬೆಳ್ಳಿ ಆಭರಣಗಳನ್ನು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್‌ರವರು ಪರಿಶೀಲನೆ ನಡೆಸಿದರು. ಪೊಲೀಸ್ ಅಧಿಕಾರಿಗಳು ಇದ್ದಾರೆ.

ಐದು ದಿನಗಳ ಪೊಲೀಸ್ ಕಸ್ಟಡಿಗೆ ಪಡೆಯಲಾಗಿತ್ತು. ವಿಚಾರಣೆ ವೇಳೆ ಕಳವು ಮಾಡಿದ್ದ ಉಳಿದ ಚಿನ್ನವನ್ನು ವೆಸ್ಟ್ ಆಫ್ ಕಾರ್ಡ್ ರಸ್ತೆಯ ಮಂಜುನಾಥನಗರದಲ್ಲಿರುವ ತನ್ನ ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿದ್ದಾನೆ.

ಅದರಂತೆ ಸೆಪ್ಟೆಂಬರ್ 22ರಂದು ಆತನ ಮನೆಯಿಂದ 238 ಗ್ರಾಂ ಚಿನ್ನದ ಗಟ್ಟಿ ವಶಪಡಿಸಿಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಒಟ್ಟು 679 ಗ್ರಾಂ ಚಿನ್ನಾಭರಣ ಹಾಗೂ ಚಿನ್ನದ ಗಟ್ಟಿಗಳನ್ನು, ಸುಮಾರು 1.03 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

**ಮನೆ ಕನ್ನ ಕಳವು:**

ಸುಬ್ರಮಣ್ಯನಗರ ಪೊಲೀಸ್ ಠಾಣಾ ವ್ಯಾಪ್ತಿಯ 13ನೇ ಮುಖ್ಯರಸ್ತೆಯ ಸುರೇಶ್ ಕುಮಾರ್ ಅವರು ಆಗಸ್ಟ್ 29ರಂದು ಮನೆಗೆ ಬೀಗ ಹಾಕಿಕೊಂಡು ಸ್ನೇಹಿತರ ಮನೆಗೆ ತೆರಳಿದ್ದರು. ಮಧ್ಯಾಹ್ನ ಮನೆಗೆ ವಾಪಸ್ ಬಂದಾಗ ಬಾಗಿಲಿನ ಬೀಗ ಮುರಿದಿರುವುದು ಕಂಡುಬಂದಿದೆ. ಮನೆಯ ಬೀರಿನಲ್ಲಿಟ್ಟಿದ್ದ ಚಿನ್ನಾಭರಣ ಹಾಗೂ ನಗದು ಕಳವಾಗಿರುವುದು ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ದೂರು ನೀಡಲಾಗಿತ್ತು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ವಿವಿಧ ಆಯಾಮಗಳಲ್ಲಿ ಪರಿಶೀಲನೆ ನಡೆಸಿ, ಬಾತ್ಮೀದಾರರಿಂದ ಮಾಹಿತಿ ಸಂಗ್ರಹಿಸಿದ್ದರು. ಸೆಪ್ಟೆಂಬರ್ 13ರಂದು ರೈಲ್ವೆ ಪ್ಯಾರಲಲ್ ರಸ್ತೆಯ ಬಳಿ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ಸಮೇತ ಮೂವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ವಿಚಾರಣೆ ವೇಳೆ ಆರೋಪಿಗಳು ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ, ಕಳವು ಮಾಡಿದ್ದ ಚಿನ್ನಾಭರಣವನ್ನು ಲಗ್ಗೆರೆಯಲ್ಲಿ ವಾಸವಿರುವ ಓರ್ವ ಆರೋಪಿಯ ಸ್ನೇಹಿತೆಗೆ ನೀಡಿರುವುದಾಗಿ ಬಾಯ್ಬಿಟ್ಟಿದ್ದಾರೆ.

ಅದರಂತೆ ಸೆಪ್ಟೆಂಬರ್ 16ರಂದು ಆ ಸ್ನೇಹಿತೆಯಿಂದ 23 ಗ್ರಾಂ ಚಿನ್ನಾಭರಣ, ಸುಮಾರು 3 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೂವರು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಉತ್ತರ ವಿಭಾಗದ ಉಪ ಪೊಲೀಸ್ ಆಯುಕ್ತ ಬಿ.ಎಸ್. ನೇಮಗೌಡ ಮಾರ್ಗದರ್ಶನದಲ್ಲಿ ಸುಬ್ರಮಣ್ಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಗುರುಪ್ರಸಾದ್ ಎನ್. ಹಾಗೂ ಇತರೆ ಅಧಿಕಾರಿ ಮತ್ತು ಸಿಬ್ಬಂದಿ ಪ್ರಕರಣಗಳನ್ನು ಬೇಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ಫೇಸ್‌ಬುಕ್ ಜಾಹೀರಾತು ನಂಬಿ 1.9 ಕೋಟಿ ಕಳೆಕೊಂಡ ಟೆಕ್ಕಿ

ಬೆಂಗಳೂರು,ಸೆ.29–ಫೇಸ್‌ಬುಕ್‌ನಲ್ಲಿ ಕಾಣಿಸಿಕೊಂಡ ಆನ್‌ಲೈನ್ ಟ್ರೇಡಿಂಗ್ ಜಾಹೀರಾತು ನಂಬಿ ಸಾಫ್ಟ್‌ವೇರ್ ಇಂಜಿನಿಯರ್‌ರೊಬ್ಬರು 1.9 ಕೋಟಿ ರೂ ಕಳೆದುಕೊಂಡಿರುವ ಘಟನೆ ನಗರದಲ್ಲಿ ನಡೆದಿದೆ.

ನಕಲಿ ಹೂಡಿಕೆ ಪ್ಲಾಟ್‌ಫಾರ್ಮ್ ಮೂಲಕ ಹಂತ ಹಂತವಾಗಿ ಹಣ ವರ್ಗಾವಣೆ ಮಾಡಿಸಿಕೊಂಡು ಸೈಬರ್ ವಂಚಕರು ವಂಚಿಸಿದ್ದಾರೆ.

ಕಳೆದ ಫೆಬ್ರವರಿಯಲ್ಲಿ ಫೇಸ್‌ಬುಕ್ ವೀಕ್ಷಿಸುತ್ತಿದ್ದ ವೇಳೆ ಟೆಕ್ಕಿಗೆ ಆನ್‌ಲೈನ್ ಟ್ರೇಡಿಂಗ್‌ಗೆ ಸಂಬಂಧಿಸಿದ ಜಾಹೀರಾತೊಂದು ಕಾಣಿಸಿಕೊಂಡಿತ್ತು. ಜಾಹೀರಾತಿನ ಲಿಂಕ್ ಕ್ಲಿಕ್ ಮಾಡಿದ ಬಳಿಕ ಸೈಬರ್ ವಂಚಕರು ಹೂಡಿಕೆ ಸಲಹೆಗಾರರು ಹಾಗೂ ಪ್ರತಿನಿಧಿಗಳ ಸೋಗಿನಲ್ಲಿ ಅವರನ್ನು ಸಂಪರ್ಕಿಸಿದ್ದಾರೆ. ಬಳಿಕ ಆನ್‌ಲೈನ್ ಟ್ರೇಡಿಂಗ್ ಮತ್ತು ಹೂಡಿಕೆ ಪ್ಲಾಟ್‌ಫಾರ್ಮ್ ಫ್ರಾಕ್ಸ್ ಟ್ರೆಂಡ್ ನಲ್ಲಿ ಖಾತೆ ತೆರೆಯುವಂತೆ ಸೂಚಿಸಿದ್ದಾರೆ.

ವಂಚಕರ ಮಾತು ನಂಬಿದ ಟೆಕ್ಕಿ, 'ಫ್ರಾಕ್ಸ್ ಟ್ರೆಂಡ್' ಹೆಸರಿನ ನಕಲಿ ವೆಬ್‌ಸೈಟ್‌ನಲ್ಲಿ ಖಾತೆ ತೆರೆದಿದ್ದಾರೆ. ಆರಂಭದಲ್ಲಿ ಆಪ್‌ನಲ್ಲಿ ಹೂಡಿಕೆ ಮಾಡಿದ ಹಣಕ್ಕೆ ಲಾಭ ಬಂದಿರುವಂತೆ ನಕಲಿ ಬ್ಯಾಲೆನ್ಸ್ ತೋರಿಸಿ ವಂಚಕರು ವಿಶ್ವಾಸ ಗಳಿಸಿದ್ದಾರೆ. ಬಳಿಕ ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ಒಟ್ಟು 1.9 ಕೋಟಿ ರೂಪಾಯಿ ವರ್ಗಾವಣೆ ಮಾಡಿಸಿಕೊಂಡಿದ್ದಾರೆ.

ಫೆಬ್ರವರಿ 27ರಿಂದ ಸೆಪ್ಟೆಂಬರ್ 9ರವರೆಗೆ ವಿವಿಧ ಹೆಸರುಗಳಲ್ಲಿ ಮಾತನಾಡಿದ ಅಕೌಂಟ್ ಮ್ಯಾನೇಜರ್‌ಗಳು ನಿರಂತರವಾಗಿ ಟ್ರೇಡಿಂಗ್ ಸಲಹೆ ನೀಡಿ ಮತ್ತಷ್ಟು ಹಣ ಹೂಡಿಕೆ ಮಾಡುವಂತೆ ಪ್ರಚೋದಿಸಿದ್ದರು ಎನ್ನಲಾಗಿದೆ.

**ಬಯಲಾಯ್ತು ವಂಚನೆ:**

ತಾನು ಹೂಡಿಕೆ ಮಾಡಿದ್ದ ಹಣವನ್ನು ವಾಪಸ್ ಪಡೆಯಲು ಟೆಕ್ಕಿ ಮುಂದಾದಾಗ ವಂಚನೆ ಬಯಲಾಗಿದೆ. ಆರಂಭದಲ್ಲಿ ಸಣ್ಣ ಮೊತ್ತವನ್ನು ವಿತ್‌ಡ್ರಾ ಮಾಡಲು ಅವಕಾಶ ನೀಡಿದ್ದ ಆರೋಪಿಗಳು, ಸೆಪ್ಟೆಂಬರ್ 9ರಂದು ಸಂಪೂರ್ಣ ಹಣ ಹಿಂಪಡೆಯಲು ಮನವಿ ಮಾಡಿದಾಗ ವಿವಿಧ ನೆಪಗಳನ್ನು ಹೇಳಿದ್ದಾರೆ.

ಹಣ ಬಿಡುಗಡೆ ಮಾಡಬೇಕಾದರೆ ಪ್ರಕ್ರಿಯೆ ಶುಲ್ಕ ಸೇರಿದಂತೆ ಹೆಚ್ಚುವರಿಯಾಗಿ 50 ಲಕ್ಷ ಹಾಗೂ 20 ಲಕ್ಷ ರೂ ಪಾವತಿಸುವಂತೆ ಬೇಡಿಕೆ ಇಟ್ಟಿದ್ದಾರೆ. ಇದರಿಂದ ಅನುಮಾನಗೊಂಡ ಟೆಕ್ಕಿ ತಾನು ವಂಚನೆಗೆ ಒಳಗಾಗಿರುವುದನ್ನು ಅರಿತುಕೊಂಡಿದ್ದಾರೆ.

**ಸೈಬರ್ ಕ್ರೈಂ ಠಾಣೆಗೆ ದೂರು:**

ತಕ್ಷಣವೇ ಸೈಬರ್ ಕ್ರೈಂ ಹೆಲ್ಪ್‌ಲೈನ್ 1930ಕ್ಕೆ ದೂರು ನೀಡಿದ ಅವರು, ಬಳಿಕ ಬೆಂಗಳೂರಿನ ಪೂರ್ವ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ವಂಚನೆಗೆ ಬಳಸಿದ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಲು ಕ್ರಮ ಕೈಗೊಂಡಿದ್ದು, ಆರೋಪಿಗಳ ಪತ್ತೆಗೆ ತನಿಖೆ ಮುಂದುವರಿಸಿದ್ದಾರೆ.





ವಿಶ್ವ ಹೃದಯ ದಿನಾಚರಣೆಯ ಪ್ರಯುಕ್ತ ರಾಜಾಜಿನಗರದಲ್ಲಿ ಇಂದು ನಡೆದ 'ಹೃದಯಕ್ಕಾಗಿ ನಡಿಗೆ' ವಾಕಥಾನ್ ಕಾರ್ಯಕ್ರಮವನ್ನು ಮಾಜಿ ಸಚಿವ ಹಾಗೂ ಶಾಸಕ ಕೆ. ಗೋಪಾಲಯ್ಯರವರು ಬಲೂನು ಹಾರಿಸುವ ಮೂಲಕ ಚಾಲನೆ ನೀಡಿದರು. ರಾಜಾಜಿನಗರದ ಸೇಂಟ್ ಥೆರೆಸಾ ಆಸ್ಪತ್ರೆ ವೈದ್ಯ ಡಾ. ಮಹಂತೇಶ್, ಅನೇಕ ಗಣ್ಯರು ವೈದ್ಯರು, ಚಲನಚಿತ್ರ ನಟರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಚಾಮುಂಡಿ ಬೆಟ್ಟದಲ್ಲಿ ದಸರಾ ಆಹ್ವಾನ ಪತ್ರಿಕೆಗೆ ಪೂಜೆ

ಮೈಸೂರು,ಸೆ.29: ವಿಶ್ವವಿಖ್ಯಾತ ಮೈಸೂರು ದಸರಾ–2026 ಮಹೋತ್ಸವದ ಆಹ್ವಾನ ಪತ್ರಿಕೆಯನ್ನು ಸ್ವಾಗತ ಸಮಿತಿ ಸಿದ್ಧಪಡಿಸಿದೆ.

ದಸರಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ ಎಂದು ಜಿಲ್ಲಾಡಳಿತ ಇಂದು ಆಹ್ವಾನ ಪತ್ರಿಕೆಯೊಂದಿಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ



ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಐಶ್ವರ್ಯ ಆರ್, ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಹಾಸ್ಟೆಲ್‌ನಲ್ಲಿ ಡಿಪ್ಲೊಮಾ ವಿದ್ಯಾರ್ಥಿ ಆತ್ಮಹತ್ಯೆ

ದೇವನಹಳ್ಳಿ.ಸೆ.29–ಹಾಸ್ಟೆಲ್ ಕೊಠಡಿಯಲ್ಲಿ ಡಿಪ್ಲೊಮಾ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣದಲ್ಲಿ ನಡೆದಿದೆ.

ಬೆಂಗಳೂರಿನ ವಿಜಯನಗರ ನಿವಾಸಿ ಜೋಹೆಲ್ (18) ಮೃತ ವಿದ್ಯಾರ್ಥಿಯಾಗಿದ್ದು, ಚನ್ನರಾಯಪಟ್ಟಣದಲ್ಲಿರುವ ಸರ್ಕಾರಿ ಉಪಕರಣಾಗಾರ ಹಾಗೂ ತರಬೇತಿ ಕೇಂದ್ರದ ಹಾಸ್ಟೆಲ್‌ನಲ್ಲಿ ಈ ಘಟನೆ ನಡೆದಿದೆ.

ಜೋಹೆಲ್ ಹಾಸ್ಟೆಲ್‌ನ ಕೊಠಡಿಯಲ್ಲಿದ್ದ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಚನ್ನರಾಯಪಟ್ಟಣ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಂತರ ಹಾಸ್ಟೆಲ್‌ನ ಫ್ಯಾನ್‌ನಿಂದ ಮೃತದೇಹವನ್ನು ಕೆಳಗಿಳಿಸಿ, ಖಾಸಗಿ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಲಾಗಿದೆ.

ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಳ್ಳಲು ನಿಖರ ಕಾರಣ ತಿಳಿದುಬಂದಿಲ್ಲ. ಈ ಕುರಿತು ಚನ್ನರಾಯಪಟ್ಟಣ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಡಿಪಿಎಆರ್ ಅಧೀನ ಸಂಸ್ಥೆಗಳಲ್ಲಿ ಭಾರೀ ಅವ್ಯವಹಾರ: ತನಿಖೆಗೆ ರಮೇಶ್ ಆಗ್ರಹ

ಬೆಂಗಳೂರು: ಸೆ,29; ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಅಧೀನದ Centre fore-Governance ವ್ಯಾಪ್ತಿಯ Karnataka State Wide Area Network (KSWAN) ಮತ್ತು Karnataka State Data Centre (KSDC) ವಿಭಾಗಗಳಲ್ಲಿ ನೂರಾರು ಕೋಟಿ ರೂಪಾಯಿ ಮೊತ್ತದ ಟೆಂಡರ್ ಅಕ್ರಮ ನಡೆದಿದೆ ಎಂದು ಆರೋಪಿಸಿ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಇಂದು ದಾಖಲೆಗಳನ್ನು ಬಿಡುಗಡೆ ಮಾಡಿದ ಅವರು, ಏಖಘಂಂ–3.0 ಯೋಜನೆಯ 444 ಕೋಟಿ ಟೆಂಡರ್ ಹಾಗೂ ಏಖಆಅಯ ವಿವಿಧ ಟೆಂಡರ್‌ಗಳಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದರು. ಈ ಕುರಿತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, e-Governance CEO ಭೂಬಾಲನ್, ಏಖಆಅ ಯೋಜನಾ ನಿರ್ದೇಶಕಿ ಸೀಮಾ ಕೆ.ಪಿ. ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ ಕರ್ನಲ್ ರಂಗನಾಥನ್ ಸತೀಶ್ ವಿರುದ್ಧ ಲೋಕಾಯುಕ್ತ, ಜಾರಿ ನಿರ್ದೇಶನಾಲಯ ಹಾಗೂ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ದೂರು ದಾಖಲಿಸಿರುವುದಾಗಿ ತಿಳಿಸಿದರು.

**444 ಕೋಟಿ KSWAN ಟೆಂಡರ್**

ಏಖಘಂಂ–3.0 ಯೋಜನೆಗೆ 2025ರ ಜುಲೈನಲ್ಲಿ ಟೆಂಡರ್ ಕರೆಯಲಾಗಿತ್ತು. ಎರಡು ಸಂಸ್ಥೆಗಳು ಭಾಗವಹಿಸಿದ್ದರೂ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಲಾಯಿತು. ಬಳಿಕ 2025ರ ಡಿಸೆಂಬರ್‌ನಲ್ಲಿ 444 ಕೋಟಿ ಮೊತ್ತದ ಹೊಸ ಟೆಂಡರ್ ಆಹ್ವಾನಿಸಲಾಗಿದೆ ಎಂದು ರಮೇಶ್ ಹೇಳಿದ್ದಾರೆ.

ಈ ಟೆಂಡರ್‌ನಲ್ಲಿ ಅಋಖಅಔ ಸಂಸ್ಥೆಗೆ ಅನುಕೂಲವಾಗುವ ರೀತಿಯಲ್ಲಿ ಷರತ್ತುಗಳನ್ನು ರೂಪಿಸಲಾಗಿದೆ ಎಂಬುದು ಅವರ ಪ್ರಮುಖ ಆರೋಪ. ಅಋಖಅಔ, ಖಚುಟಖಿಜಟ ಜತೆ ಒಕ್ಕೂಟ ಮಾಡಿಕೊಂಡಿದ್ದು, RailTel ಸಂಸ್ಥೆಯು Allvy Software Solutions ಜತೆ ಒಡಂಬಡಿಕೆ ಮಾಡಿಕೊಂಡಿದೆ ಎಂದು ಅವರು



ಹೇಳಿದ್ದಾರೆ.

ಟೆಲಿಕಮ್ಯುನಿಕೇಷನ್ ಕ್ಷೇತ್ರದ ಖಿಅಋಖಐ ಸಂಸ್ಥೆಯೂ ಟೆಂಡರ್‌ನಲ್ಲಿ ಭಾಗವಹಿಸಲು ಮುಂದಾಗಿತ್ತು. ಆದರೆ CISCO ಅಗತ್ಯ ದಾಖಲೆಗಳನ್ನು ನೀಡದೆ ಅಸಹಕಾರ ತೋರಿದೆ ಎಂದು ಖಿಅಋಖಐ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ರಮೇಶ್ ಆರೋಪಿಸಿದ್ದಾರೆ.

**KSDCಯಲ್ಲೂ ಟೆಂಡರ್‌ಗಳ ಬಗ್ಗೆ ಪ್ರಶ್ನೆ:**

KSDCಯಲ್ಲಿ ಒಂದೇ ಬೃಹತ್ ಟೆಂಡರ್ ಬದಲಿಗೆ ಹಲವು ಸಣ್ಣ ಟೆಂಡರ್‌ಗಳನ್ನು ಆಹ್ವಾನಿಸಿ, ನಿರ್ದಿಷ್ಟ ಸಂಸ್ಥೆಗಳಿಗೆ ಅನುಕೂಲವಾಗುವ ಷರತ್ತುಗಳನ್ನು ಅಳವಡಿಸಲಾಗಿದೆ ಎಂದು ರಮೇಶ್ ಆರೋಪಿಸಿದ್ದಾರೆ. Pre-Bid ಸಭೆಗಳಲ್ಲೂ ಆಯ್ದ ಸಂಸ್ಥೆಗಳಿಗೆ ಮಾತ್ರ ಅವಕಾಶ ನೀಡಲಾಗಿದೆ ಎಂಬ ಆರೋಪ ಮಾಡಿದ್ದಾರೆ.

ಒಂದು Petabyte SAN Storage ಖರೀದಿ ವಿಚಾರವನ್ನು ಉದಾಹರಣೆಯಾಗಿ ನೀಡಿದ ಅವರು, 2024ರ ಜುಲೈನಲ್ಲಿ 2.48 ಕೋಟಿ, 2025ರ ಮೇನಲ್ಲಿ 3.36 ಕೋಟಿ ಹಾಗೂ 2026ರ ಜನವರಿಯಲ್ಲಿ 2.92 ಕೋಟಿ ಮೊತ್ತದ ಖರೀದಿ/ಆದೇಶ ಪ್ರಕ್ರಿಯೆ ನಡೆದಿದೆ ಎಂದು ಹೇಳಿದ್ದಾರೆ.

2026ರ ಜನವರಿಯಲ್ಲಿ Inspirisys ಸಂಸ್ಥೆಗೆ ಕಾರ್ಯಾದೇಶ ನೀಡಿದ್ದರೂ ಇದುವರೆಗೆ ಉಪಕರಣ ಪೂರೈಕೆ ಆಗಿಲ್ಲ. ಆದರೂ ಸಂಸ್ಥೆಯ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿರುವ ಅವರು, ನಂತರ ಇದೇ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ Sonata IBMU 14.96 ಕೋಟಿ ಮೊತ್ತದ Letter of Intent ನೀಡಲಾಗಿದೆ ಎಂದು ಹೇಳಿದ್ದಾರೆ.

**ಸಿಬಿಐ, ಸಿಐಡಿ ತನಿಖೆಗೆ ಆಗ್ರಹ:**

KSWAN–3.0 ಮತ್ತು KSDC ವಿಭಾಗಗಳ ಟೆಂಡರ್‌ಗಳ ಬಗ್ಗೆ ಸ್ವತಂತ್ರ ತನಿಖೆ ನಡೆಸಬೇಕು ಎಂದು ರಮೇಶ್ ಆಗ್ರಹಿಸಿದ್ದಾರೆ. 444 ಕೋಟಿ KSWAN–3.0 ಟೆಂಡರ್ ಹಾಗೂ ಇತ್ತೀಚಿನ KSDC ಟೆಂಡರ್‌ಗಳನ್ನು ರದ್ದುಪಡಿಸಿ ಮರು ಟೆಂಡರ್ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ಅಲ್ಲದೆ, ಪ್ರಕರಣವನ್ನು ಸಿಬಿಐ ಅಥವಾ ಸಿಐಡಿಗೆ ವಹಿಸಿ, ಆರೋಪ ಎದುರಿಸುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ DPAR ಹೊಣೆಹೊತ್ತಿರುವ ಸಚಿವ ಪ್ರಿಯಾಂಕ ಖರ್ಗೆ ಅವರನ್ನು ಆಗ್ರಹಿಸಿದ್ದಾರೆ..

# ಭೀಕರ ಅಪಘಾತ ಮೂವರ ಸಾವು

ಯಾದಗಿರಿ.ಸೆ.29 –ಜಿಲ್ಲೆಯ ಶಹಾಪುರ ತಾಲೂಕಿನ ರಸ್ತಾಪುರ ಸಮೀಪ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 6 ವರ್ಷದ ಬಾಲಕಿ ಸೇರಿದಂತೆ ಮೂವರು ಮೃತಪಟ್ಟು, ಮತ್ತೋರ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಸಗರ ಗ್ರಾಮದಿಂದ ರಾಯಚೂರಿಗೆ ತೆರಳುತ್ತಿದ್ದ ಕಾರಿನ ಟೈರ್ ಸ್ಫೋಟಗೊಂಡ ಪರಿಣಾಮ ವಾಹನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಕಾರಿನಲ್ಲಿದ್ದ ಆರಾಧ್ಯ(6), ತೇಜಸ್ವಿನಿ (28) ಹಾಗೂ ಸಹನಾ (22) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ಮಲ್ಲಿಕಾರ್ಜುನ ಎಂಬಾತ ಗಂಭೀರವಾಗಿ ಗಾಯಗೊಂಡಿದ್ದು, ಆತನನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರು ಚಾಲನೆ ಮಾಡುತ್ತಿದ್ದ ಮಹೇಂದ್ರಕುಮಾರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಶಹಾಪುರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಪಘಾತಕ್ಕೆ ನಿಖರ ಕಾರಣ ಸೇರಿದಂತೆ ಹೆಚ್ಚಿನ ಮಾಹಿತಿಯನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

# ಗಣೇಶ ವಿಸರ್ಜನೆ ವೇಳೆ ಗಲಾಟೆ: ನಾಲ್ವರಿಗೆ ಚೂರಿ ಇರಿತ

ಕೊಪ್ಪಳ.ಸೆ.29–ಗಣೇಶ ವಿಸರ್ಜನೆ ವೇಳೆ ನಡೆದ ಗಲಾಟೆಯಲ್ಲಿ ನಾಲ್ವರು ಯುವಕರಿಗೆ ಚೂರಿಯಿಂದ ಇರಿದು ಗಾಯಗೊಳಿಸಿರುವ ಘಟನೆ ಗಂಗಾವತಿ ತಾಲೂಕಿನ ಆರ್ಹಾಳ ಗ್ರಾಮದಲ್ಲಿ ನಡೆದಿದೆ.

ತಡರಾತ್ರಿ ಗಣೇಶ ವಿಸರ್ಜನೆ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಯುವಕರ ಗುಂಪೊಂದು ಡಿಜೆ ಹಾಕಿಕೊಂಡು ಕುಣಿಯುತ್ತಿತ್ತು. ಈ ವೇಳೆ ಕುಣಿಯದಂತೆ ಹೇಳಿದ ಮತ್ತೊಂದು ಗುಂಪಿನ ಯುವಕರೊಂದಿಗೆ ವಾಗ್ವಾದ ನಡೆದಿದೆ. ಬಳಿಕ ಸೋಮವಾರವು ಯುವಕರ ಎರಡು ಗುಂಪುಗಳ ನಡುವೆ ಮತ್ತೆ ಗಲಾಟೆ ನಡೆದಿದ್ದು, ಈ ವೇಳೆ ನಾಲ್ವರಿಗೆ ಚೂರಿಯಿಂದ ಇರಿಯಲಾಗಿದೆ.

ಗಾಯಗೊಂಡ ಜಯಪ್ರಕಾಶ್ ಹಾಗೂ ಗುರುಪ್ರಸಾದ್ ಸೇರಿದಂತೆ ನಾಲ್ವರನ್ನು ಕೊಪ್ಪಳದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಘಟನೆಗೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಬಾಲಕಿ ಮೇಲೆ ಅತ್ಯಾಚಾರ-ಬಂಧನ

ಕೊಪ್ಪಳ.ಸೆ.29:– ಎಂಟು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ 60 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿರುವ ಘಟನೆ ಗಂಗಾವತಿ ತಾಲೂಕಿನ ಬಾಪಿರಡ್ಡಿ ಕ್ಯಾಂಪ್‌ನಲ್ಲಿ ನಡೆದಿದೆ.

ಬಾಪಿರಡ್ಡಿ ಕ್ಯಾಂಪ್‌ನ ರಾಮಾಂಜನೇಯ ಸುಬ್ಬಾರಾವ್ ಎಂಬಾತ ಕೃತ್ಯ ಎಸಗಿರುವುದಾಗಿ ಪ್ರಕರಣದಲ್ಲಿ ಆರೋಪಿಸಲಾಗಿದೆ. ಭಾನುವಾರ ಗ್ರಾಮದಲ್ಲಿ ಆಟವಾಡುತ್ತಿದ್ದ ಬಾಲಕಿಗೆ ಆಮಿಷವೊಡ್ಡಿ ಕರೆದುಕೊಂಡು ಹೋಗಿ ಅತ್ಯಾಚಾರ ಎಸಗಿದ್ದಾನೆನ್ನಲಾಗಿದೆ.

ನಂತರ ಬಾಲಕಿ ಮನೆಯವರಿಗೆ ಘಟನೆ ಕುರಿತು ತಿಳಿಸಿದ್ದು, ಕುಟುಂಬಸ್ಥರು ನೀಡಿದ ದೂರಿನ ಆಧಾರದ ಮೇಲೆ ಗಂಗಾವತಿ ಗ್ರಾಮೀಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿ ಸುಬ್ಬಾರಾವ್ ಪರಾರಿಯಾಗಿದ್ದ. ಆದರೆ ಆರೋಪಿಗಾಗಿ ಹುಡುಕಾಟ ನಡೆಸಿದ ಪೊಲೀಸರು ಕೊನೆಗೂ ಆತನನ್ನು ಬಂಧಿಸಿದ್ದಾರೆ. ಬಳಿಕ ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

# ಸಂಭಲ್ ಹಿಂಸಾಚಾರ ಪ್ರಕರಣ: ಎನ್‌ಎಸ್‌ಎ ಅಡಿಯಲ್ಲಿ ಬಂಧನ ರದ್ದು

ನವದೆಹಲಿ, ಸೆ.29: 2024ರ ನವೆಂಬರ್‌ನಲ್ಲಿ ನಡೆದ ಸಂಭಲ್ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಮುಲ್ಲಾ ಅಫ್ರೋಜ್ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿಯಲ್ಲಿ ಹೊರಡಿಸಿದ್ದ ಮುನ್ನೆಚ್ಚರಿಕಾ ಬಂಧನ ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದುಪಡಿಸಿದೆ. ಅಲ್ಲದೆ, ಕಾನೂನುಬಾಹಿರ ಬಂಧನ ಆದೇಶ ಹೊರಡಿಸಿದ್ದಕ್ಕಾಗಿ ಉತ್ತರ ಪ್ರದೇಶ ಸರ್ಕಾರಕ್ಕೆ 10 ಲಕ್ಷ ರೂ. ದಂಡ ವಿಧಿಸಿದೆ.

ನ್ಯಾಯಮೂರ್ತಿ ದೀಪಂಕರ್ ದತ್ತ ಅವರ ನೇತೃತ್ವದ ಪೀಠವು, ಅಫ್ರೋಜ್ ಬಂಧನವನ್ನು ಸಮರ್ಥಿಸಿದ್ದ ಅಲಹಾಬಾದ್ ಹೈಕೋರ್ಟ್ ತೀರ್ಪನ್ನೂ ರದ್ದುಗೊಳಿಸಿದೆ. ಪ್ರಸ್ತುತ ಅಫ್ರೋಜ್ ಮೊರಾದಾಬಾದ್ ಜೈಲಿನಲ್ಲಿ ಬಂಧನದಲ್ಲಿದ್ದಾನೆ. ಸಂಭಲ್ ಹಿಂಸಾಚಾರದ ಸಂಚಿನಲ್ಲಿ ಪ್ರಮುಖ ಪಾತ್ರವಹಿಸಿದ್ದಾನೆ ಎಂಬ ಆರೋಪ ಅವನ ಮೇಲಿದೆ.

ವಿಚಾರಣೆ ವೇಳೆ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಪೊಲೀಸ್ ವಶದಲ್ಲಿರುವಾಗ ಆರೋಪಿಯೊಬ್ಬ ನೀಡಿದ ಹೇಳಿಕೆ ಅಥವಾ ಒಪ್ಪಿಗೆಯನ್ನೇ ಆಧಾರವಾಗಿಟ್ಟು ಎನ್‌ಎಸ್‌ಎ ಅಡಿಯಲ್ಲಿ ಬಂಧನ ವಿಧಿಸುವುದು ಕಾನೂನುಬದ್ಧವಾಗಿ ಸಮರ್ಥನೀಯವಲ್ಲ ಎಂದು ತಿಳಿಸಿದೆ.

ಎನ್‌ಎಸ್‌ಎ ಅಡಿಯಲ್ಲಿ ಮುನ್ನೆಚ್ಚರಿಕಾ ಬಂಧನ ವಿಧಿಸುವಾಗ ಸಂಬಂಧಿತ ಅಧಿಕಾರಿಗಳು ಆರೋಪಿಯ ಹೇಳಿಕೆಯ ಜತೆಗೆ ಪ್ರಕರಣದ ಸುತ್ತಮುತ್ತಲಿನ ಪರಿಸ್ಥಿತಿಗಳು, ಲಭ್ಯವಿರುವ ಇತರೆ ಸಾಕ್ಷ್ಯಾಧಾರಗಳು ಹಾಗೂ ವಾಸ್ತವಾಂಶಗಳನ್ನು ಸಹ ಪರಿಗಣಿಸಬೇಕು ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. "ಪೊಲೀಸರ ಮುಂದೆ ನೀಡಲಾದ ಒಪ್ಪಿಗೆಯ ಹೇಳಿಕೆಯನ್ನೇ ಆಧಾರವಾಗಿಟ್ಟು ಎನ್‌ಎಸ್‌ಎ ಆದೇಶವನ್ನು ಕಾನೂನಾತ್ಮಕವಾಗಿ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಇತರೆ ಸನ್ನಿವೇಶಗಳು ಹಾಗೂ ಸಂಬಂಧಿತ ಪರಿಸ್ಥಿತಿಗಳನ್ನು ಸಹ ಪರಿಗಣಿಸಬೇಕು," ಎಂದು ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ಹೇಳಿದೆ.

ಈ ತೀರ್ಪು, ಮುನ್ನೆಚ್ಚರಿಕಾ ಬಂಧನ ಪ್ರಕರಣಗಳಲ್ಲಿ ಕಾನೂನುಬದ್ಧ ಪ್ರಕ್ರಿಯೆ ಮತ್ತು ಸಾಕ್ಷ್ಯಾಧಾರಗಳ ಸಮಗ್ರ ಪರಿಶೀಲನೆಯ ಅಗತ್ಯತೆಯನ್ನು ಮತ್ತೊಮ್ಮೆ ಒತ್ತಿಹೇಳುವ ಮಹತ್ವದ ಬೆಳವಣಿಗೆಯಾಗಿದೆ.

# 9ನೇ ತರಗತಿಗೆ ಹೊಸ ಸಮಾಜ ವಿಜ್ಞಾನ ಪಠ್ಯಪುಸ್ತಕ ಇಂದಿನಿಂದ ಲಭ್ಯ

ನವದೆಹಲಿ, ಸೆ.29:– ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) 9ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಹೊಸ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಬಿಡುಗಡೆ ಮಾಡಿದೆ. ಈ ಪುಸ್ತಕ ಸೆ.29ರಿಂದ ಖರೀದಿಗೆ ಲಭ್ಯವಾಗಲಿದೆ.




ಸೆ.28ರಂದು ಹೊರಡಿಸಿದ ಪ್ರಕಟಣೆಯಲ್ಲಿ ಎನ್‌ಸಿಇಆರ್‌ಟಿ ಪುಸ್ತಕ ಬಿಡುಗಡೆ ಮಾಡಿರುವುದನ್ನು ಅಧಿಕೃತವಾಗಿ ತಿಳಿಸಿದೆ. ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ಸಂಶೋಧಕರು ಎನ್‌ಸಿಇಆರ್‌ಟಿಯ ಅಧಿಕೃತ ಮಾರಾಟ ಮಳಿಗೆಗಳು ಮತ್ತು ಅನುಮೋದಿತ ಮಾರಾಟಗಾರರ ಮೂಲಕ ಪುಸ್ತಕ ಖರೀದಿಸಬಹುದಾಗಿದೆ.

ಪರಿಷ್ಕೃತ ಪಠ್ಯಕ್ರಮಕ್ಕೆ ಅನುಗುಣವಾಗಿ ಶಾಲಾ ಪಠ್ಯಪುಸ್ತಕಗಳನ್ನು ಹಂತ ಹಂತವಾಗಿ ನವೀಕರಿಸುವ ಎನ್‌ಸಿಇಆರ್‌ಟಿಯ ಪ್ರಕ್ರಿಯೆಯ ಭಾಗವಾಗಿ ಈ ಹೊಸ ಪುಸ್ತಕವನ್ನು ಪ್ರಕಟಿಸಲಾಗಿದೆ. ಆದರೆ ಪುಸ್ತಕದ ಅಧ್ಯಾಯಗಳು, ವಿಷಯವಸ್ತು ಹಾಗೂ ಬದಲಾವಣೆಗಳ ಕುರಿತು ಬಿಡುಗಡೆ ಪ್ರಕಟಣೆಯಲ್ಲಿ ಹೆಚ್ಚಿನ ವಿವರಗಳನ್ನು ಎನ್‌ಸಿಇಆರ್‌ಟಿ ನೀಡಿಲ್ಲ.

ಹೊಸ ಪುಸ್ತಕದ ಕುರಿತು ಹೆಚ್ಚಿನ ಮಾಹಿತಿ ಪಡೆಯಲು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಎನ್‌ಸಿಇಆರ್‌ಟಿ ಪ್ರಕಟಣಾ ವಿಭಾಗವನ್ನು ಸಂಪರ್ಕಿಸಬಹುದಾಗಿದೆ. ನವದೆಹಲಿಯ ಅರಬಿಂದೋ ಮಾರ್ಗದಲ್ಲಿರುವ ಪ್ರಕಟಣಾ ವಿಭಾಗದ ಮುಖ್ಯ ವ್ಯವಹಾರ ವ್ಯವಸ್ಥಾಪಕರ ಕಚೇರಿಯನ್ನು ಸಂಪರ್ಕಿಸಲು ಮಂಡಳಿ ಸೂಚಿಸಿದೆ.

9ನೇ ತರಗತಿಯ ಹೊಸ ಸಮಾಜ ವಿಜ್ಞಾನ ಪಠ್ಯಪುಸ್ತಕವು ಎನ್‌ಸಿಇಆರ್‌ಟಿ ಪ್ರಕಟಣಾ ವಿಭಾಗದ ಮಳಿಗೆಗಳು ಹಾಗೂ ಅನುಮೋದಿತ ಮಾರಾಟಗಾರರ ಬಳಿ ಲಭ್ಯವಿರಲಿದೆ. ಇದರ ಜೊತೆಗೆ ಎನ್‌ಸಿಇಆರ್‌ಟಿಯ ಅಧಿಕೃತ ವೆಬ್‌ಸೈಟ್ ಮತ್ತು ಅಮೆಜಾನ್ ಮೂಲಕವೂ ಪುಸ್ತಕವನ್ನು ಆನ್‌ಲೈನ್‌ನಲ್ಲಿ ಖರೀದಿಸಬಹುದಾಗಿದೆ.

ಹೀಗಾಗಿ ವಿದ್ಯಾರ್ಥಿಗಳು ಹಾಗೂ ಪೋಷಕರು ತಮ್ಮ ಅನುಕೂಲಕ್ಕೆ ತಕ್ಕಂತೆ ನೇರವಾಗಿ ಮಳಿಗೆಗಳಲ್ಲಿ ಅಥವಾ ಆನ್‌ಲೈನ್ ಮೂಲಕ ಹೊಸ ಪಠ್ಯಪುಸ್ತಕ ಪಡೆಯಬಹುದಾಗಿದೆ.

# ಯುವಕನಿಗೆ ಕಪಾಳ ಮೋಕ್ಷ ಸಚಿವರ ವಿರುದ್ಧ ಪ್ರಕರಣ

ನವದೆಹಲಿ, ಸೆ.29: ದೆಹಲಿಯ ತಿಲಕ್ ನಗರದಲ್ಲಿ ರಸ್ತೆ ಪರಿಶೀಲನೆಯ ವೇಳೆ ಯುವಕನಿಗೆ ಕಪಾಳಮೋಕ್ಷ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಪಿಡಬ್ಲ್ಯುಡಿ ಸಚಿವ ಪರ್ವೇಶ್ ವರ್ಮಾ ವಿರುದ್ಧ ದೆಹಲಿ ಪೊಲೀಸರು ನಾನ್–ಕಾಗ್ನಿಜಬಲ್ ರಿಪೋರ್ಟ್ ದಾಖಲಿಸಿದ್ದಾರೆ. 22 ವರ್ಷದ ಯುವಕನೊಬ್ಬನಿಗೆ ಹೊಡೆದಿರುವ ಆರೋಪದಡಿ ಭಾರತೀಯ ನ್ಯಾಯ ಸಂಹಿತೆ ಕಲಂ 115ರ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿ ಆಮ್ ಆದ್ಮಿ ಪಕ್ಷದ ಶಾಸಕ ಜರ್ನೈಲ್ ಸಿಂಗ್ ವಿರುದ್ಧವೂ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ ನೀಡಿದ ದೂರಿನ ಮೇರೆಗೆ, ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಅಧಿಕಾರಿಗಳಿಗೆ ಅಡ್ಡಿಪಡಿಸಿದ ಆರೋಪದಲ್ಲಿ ಪ್ರಕರಣ ದಾಖಲಿಸಲಾಗಿದೆ.

ಭಾನುವಾರ ನಡೆದ ಘಟನೆ ವೇಳೆ, ಜರ್ನೈಲ್ ಸಿಂಗ್ ಅವರ ಸಾಮಾಜಿಕ ಜಾಲತಾಣ ತಂಡದಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿಕೊಂಡ ವ್ಯಕ್ತಿಯೊಬ್ಬ ರಸ್ತೆ ಪರಿಶೀಲನೆಯ ವಿಡಿಯೋ ಚಿತ್ರೀಕರಿಸಲು ಯತ್ನಿಸಿದ್ದ. ಈ ಸಂದರ್ಭ ಪರ್ವೇಶ್ ವರ್ಮಾ ಆತನ ಮೊಬೈಲ್ ಕಸಿದುಕೊಂಡು ಕಪಾಳಮೋಕ್ಷ ಮಾಡಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಈ ಬಗ್ಗೆ ಡಿಸಿಪಿ ಹರೇಶ್ವರ್ ಸ್ವಾಮಿ ಪ್ರತಿಕ್ರಿಯಿಸಿ, ಲಭಿಸಿದ ದೂರುಗಳ ಆಧಾರದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಮತ್ತಷ್ಟು ದೂರುಗಳನ್ನೂ ತನಿಖೆಯಲ್ಲಿ ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.

# ಟ್ರಿನಿಡಾಡ್ ಟೊಬ್ಯಾಗೋದಲ್ಲಿ ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿ

ನವದೆಹಲಿ, ಸೆ.29:– ಭಾರತದ ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ)ಗೆ ಜಾಗತಿಕ ಮನ್ನಣೆ ಮತ್ತಷ್ಟು ವಿಸ್ತರಿಸಿದ್ದು, ಟ್ರಿನಿಡಾಡ್ ಮತ್ತು ಟೊಬ್ಯಾಗೊ ಯುಪಿಐ ಆಧಾರಿತ ಡಿಜಿಟಲ್ ಪಾವತಿ ವ್ಯವಸ್ಥೆ ಅಳವಡಿಸಿಕೊಳ್ಳುತ್ತಿರುವ ಮೊದಲ ಕೆರಿಬಿಯನ್ ರಾಷ್ಟ್ರವಾಗಲಿದೆ.

ಭಾರತಕ್ಕೆ ಟ್ರಿನಿಡಾಡ್ ಮತ್ತು ಟೊಬ್ಯಾಗೊದ ಹೈಕಮಿಷನರ್ ಚಂದ್ರದತ್ ಸಿಂಗ್ ಈ ಬೆಳವಣಿಗೆಯನ್ನು ಖಚಿತಪಡಿಸಿದ್ದಾರೆ. ದೇಶದಲ್ಲಿ ಯುಪಿಐ ಮಾದರಿಯ ಪಾವತಿ ವ್ಯವಸ್ಥೆ ಜಾರಿಗೆ ತರುವ ಪ್ರಕ್ರಿಯೆ ಈಗಾಗಲೇ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಈ ಯೋಜನೆಯು ಎನ್‌ಪಿಸಿಐ ಇಂಟರ್‌ನ್ಯಾಷನಲ್ ಪೇಮೆಂಟ್ಸ್ ಲಿಮಿಟೆಡ್ (ಓಖಕಐ) ಮತ್ತು ಟ್ರಿನಿಡಾಡ್ ಮತ್ತು ಟೊಬ್ಯಾಗೊದ ಡಿಜಿಟಲ್ ಟ್ರಾನ್ಸ್‌ಫಾರ್ಮೇಷನ್ ಸಚಿವಾಲಯದ ನಡುವಿನ ಒಪ್ಪಂದದ ಆಧಾರದಲ್ಲಿ ಜಾರಿಯಾಗುತ್ತಿದೆ. ಉಭಯ ಸಂಸ್ಥೆಗಳ ನಡುವೆ 2024ರ ಸೆಪ್ಟೆಂಬರ್‌ನಲ್ಲಿ ಒಪ್ಪಂದ ವಿನಿಮಯವಾಗಿತ್ತು.

ಯುಪಿಐ ಮಾದರಿಯ ವ್ಯವಸ್ಥೆಯು ಟ್ರಿನಿಡಾಡ್ ಮತ್ತು ಟೊಬ್ಯಾಗೊದಲ್ಲಿ ವೇಗದ ಹಾಗೂ ರಿಯಲ್‌ಟೈಮ್ ಡಿಜಿಟಲ್ ಪಾವತಿಗೆ ನೆರವಾಗಲಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ವ್ಯಕ್ತಿಯಿಂದ ವ್ಯಾಪಾರಿಗೆ ಪಾವತಿ ಮಾಡುವ ವ್ಯವಸ್ಥೆ ಇದರಲ್ಲಿ ಇರಲಿದೆ.

ಹಣಕಾಸು ಸಂಸ್ಥೆಗಳ ನಡುವಿನ ಸಂಪರ್ಕ ಮತ್ತು ಪಾವತಿ ವ್ಯವಸ್ಥೆಗಳ ಹೊಂದಾಣಿಕೆಯನ್ನು ಸುಧಾರಿಸುವುದರ ಜತೆಗೆ, ನಗದು ಮೇಲಿನ ಅವಲಂಬನೆ ಕಡಿಮೆ ಮಾಡಲು ಇದು ಸಹಕಾರಿಯಾಗಲಿದೆ. ಪಾವತಿಗಳಲ್ಲಿ ಪಾರದರ್ಶಕತೆ ಮತ್ತು ದಕ್ಷತೆ ಹೆಚ್ಚಿಸುವ ಮೂಲಕ ಡಿಜಿಟಲ್ ವಾಣಿಜ್ಯ ಹಾಗೂ ಹಣಕಾಸು ಒಳಗೊಳ್ಳುವಿಕೆಗೆ ಉತ್ತೇಜನ ನೀಡುವ ನಿರೀಕ್ಷೆಯಿದೆ.

ಟ್ರಿನಿಡಾಡ್ ಮತ್ತು ಟೊಬ್ಯಾಗೊ ತನ್ನದೇ ಪಾವತಿ ವೇದಿಕೆಯ ಮಾಲೀಕತ್ವವನ್ನು ಉಳಿಸಿಕೊಳ್ಳಲಿದ್ದು, ಅದನ್ನು ಅಭಿವೃದ್ಧಿಪಡಿಸಲು ಅಗತ್ಯವಿರುವ ತಂತ್ರಜ್ಞಾನ, ಪರಿಣತಿ




ಮತ್ತು ತರಬೇತಿಯಲ್ಲಿ ಎನ್‌ಪಿಸಿಐ ಇಂಟರ್‌ನ್ಯಾಷನಲ್ ನೆರವು ನೀಡಲಿದೆ.

ಭಾರತದ ಯುಪಿಐ ವ್ಯವಸ್ಥೆ ಈಗಾಗಲೇ ಹಲವು ದೇಶಗಳಲ್ಲಿ ಬಳಕೆಯಲ್ಲಿದೆ. ಭೂತಾನ್, ನೇಪಾಳ, ಸಿಂಗಾಪುರ, ಯುಎಇ, ಫ್ರಾನ್ಸ್, ಮಾರಿಷಸ್, ಶ್ರೀಲಂಕಾ, ಕತಾರ್, ಕಾಂಬೋಡಿಯಾ, ಗ್ರೀಸ್ ಮತ್ತು ಮಾಲ್ಡೀವ್ಸ್ ಸೇರಿದಂತೆ 11 ರಾಷ್ಟ್ರಗಳು ವಿವಿಧ ರೂಪಗಳಲ್ಲಿ ಭಾರತದ ಯುಪಿಐ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ.

ಟ್ರಿನಿಡಾಡ್ ಮತ್ತು ಟೊಬ್ಯಾಗೊ ಸೇರ್ಪಡೆಯೊಂದಿಗೆ ಕೆರಿಬಿಯನ್ ಪ್ರದೇಶದಲ್ಲೂ ಭಾರತದ ಡಿಜಿಟಲ್ ಪಾವತಿ ತಂತ್ರಜ್ಞಾನದ ವ್ಯಾಪ್ತಿ ವಿಸ್ತರಿಸಲಿದೆ.

ಯುಪಿಐ ಯೋಜನೆಯ ಜತೆಗೆ ಭಾರತ ಮತ್ತು ಟ್ರಿನಿಡಾಡ್ ಮತ್ತು ಟೊಬ್ಯಾಗೊ ನಡುವಿನ ದ್ವಿಪಕ್ಷೀಯ ಸಂಬಂಧಗಳಿಗೂ ಹೊಸ ವೇಗ ದೊರೆತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಇತ್ತೀಚಿನ ಟ್ರಿನಿಡಾಡ್ ಮತ್ತು ಟೊಬ್ಯಾಗೊ ಭೇಟಿಯ ಸಂದರ್ಭದಲ್ಲಿ ವ್ಯಾಪಾರ, ಹೂಡಿಕೆ, ತಾಂತ್ರಿಕ ಸಹಕಾರ ಹಾಗೂ ಜನರ ನಡುವಿನ ಬಾಂಧವ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಆರು ಒಪ್ಪಂದಗಳು ಮತ್ತು ತಿಳಿವಳಿಕೆ ಪತ್ರಗಳಿಗೆ ಸಹಿ ಹಾಕಲಾಗಿದೆ ಎಂದು ಹೈಕಮಿಷನರ್ ತಿಳಿಸಿದ್ದಾರೆ.

# ಸ್ಪರ್ಧಾತ್ಮಕ ಯುಗದಲ್ಲಿ ಸ್ವಯಂ ಪರಿಶ್ರಮ ಅಗತ್ಯ: ಖಂಡ್ರೆ



ಬೆಂಗಳೂರು, ಸೆ.29: ಯಾವುದೇ ಸಮಾಜಕ್ಕೆ ಐತಿಹಾಸಿಕ ಶ್ರೀಮಂತಿಕೆ ಇದ್ದರಷ್ಟೇ ಸಾಲದು ಅದಕ್ಕೆ ವರ್ತಮಾನದ ಜೀವಂತಿಕೆಯೂ ಅಷ್ಟೇ ಮುಖ್ಯ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹಾಗೂ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಬಿ ಖಂಡ್ರೆ ಪ್ರತಿಪಾದಿಸಿದ್ದಾರೆ.

ಬೆಂಗಳೂರಿನ ವೀರಶೈವ ಲಿಂಗಾಯತ ಮಹಾಸಭಾದಲ್ಲಿಂದು ನಡೆದ ಮಹಿಳಾ ಘಟಕದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಪೂರ್ವಿಕರು ಶ್ರೇಷ್ಠರಾಗಿದ್ದರು, ಹೀಗಾಗಿ ನಾವೂ ಶ್ರೇಷ್ಠ ಎಂದು ಕೂರದೆ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸ್ವಯಂ ಪರಿಶ್ರಮದಿಂದ ನಾವು ಮೇಲೆ ಬರಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಇಂದು ರಾಜ್ಯ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಬೆಳೆಯುವಲ್ಲಿ ವೀರಶೈವ, ಲಿಂಗಾಯತ ಮಠಮಾನ್ಯಗಳ ಕೊಡುಗೆ ಅಪಾರವಾಗಿದೆ. ಅನಕ್ಷರತೆ ತಾಂಡವವಾಡುತ್ತಿದ್ದ ಕಾಲದಲ್ಲಿ, ಜಾತಿ, ಧರ್ಮ, ಪಂಥಗಳ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಅನ್ನ, ಆಶ್ರಯ, ಅಕ್ಷರ ನೀಡಿ ವಿದ್ಯಾವಂತರನ್ನಾಗಿ ಮಾಡಿ, ಮೌಢ್ಯತೆಯನ್ನು ದೂರ ಮಾಡಿದ ಕೀರ್ತಿ ನಮ್ಮ ಮಠಗಳಿಗೆ ಸಲ್ಲುತ್ತದೆ ಎಂದರು.

ಹಾನಗಲ್ಲ ಕುಮಾರೇಶ್ವರರು 122 ವರ್ಷಗಳ ಹಿಂದೆ ಸ್ಥಾಪಿಸಿದ ಮಹಾಸಭಾ, ಎಲ್ಲ ಉಪಪಂಗಡಗಳನ್ನೂ ಒಗ್ಗೂಡಿಸಿ, ಸಮಾಜದ ಕ್ಷೇಮಾಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದೆ. ಮಹಿಳಾ ಘಟಕದವರು ಮಹಿಳೆಯರಲ್ಲಿ ಧರ್ಮಜಾಗೃತಿ ಮೂಡಿಸಬೇಕು. ಮಾತೆಯರು ತಮ್ಮ ಮಕ್ಕಳಿಗೆ ವಚನಗಳನ್ನು ಕಲಿಸುವ ಮೂಲಕ ಸಂಸ್ಕಾರವಂತರನ್ನಾಗಿ ಮಾಡುವಂತೆ ಪ್ರೇರೇಪಿಸಬೇಕು ಎಂದರು.

ಬದುಕಿನ ಬಂಡಿ ಮುಂದೆ ಸಾಗಲು ಪುರುಷರು ಮತ್ತು ಮಹಿಳೆಯರು ಸರಿಸಮಾನವಾಗಿ ಹೋಗಬೇಕಾಗುತ್ತದೆ. ಮಹಿಳೆಯಿಲ್ಲದೆ ಸೃಷ್ಟಿಯೇ ಇಲ್ಲ. ನಮ್ಮ ಸಮಾಜ ಮೊದಲಿನಿಂದಲೂ ಮಹಿಳೆಗೆ ಉನ್ನತ ಸ್ಥಾನ ನೀಡಿದೆ. ಸಮಾನತೆ ನೀಡಿದೆ. 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಮಹಿಳೆಯರಿಗೆ ಅನುಭವ ಮಂಟಪದಲ್ಲಿ ಮುಕ್ತವಾಗಿ ಚರ್ಚಿಸಲು, ತಮ್ಮ ವಿಚಾರ ಮಂಡಿಸಲು ಅವಕಾಶ ನೀಡಿದ್ದರು ಎಂದರು.

ತೊಟ್ಟಿಲು ತೂಗುವ ಕೈ ದೇಶವನ್ನು ಆಳಬಲ್ಲದು ಎಂಬುದನ್ನು ಮಹಿಳೆಯರು ಸಾಬೀತು ಮಾಡಿದ್ದಾರೆ. ವಿಜ್ಞಾನ, ತಂತ್ರಜ್ಞಾನ, ಆಡಳಿತ ಸೇರಿದಂತೆ ಎಲ್ಲ ಕ್ಷೇತ್ರದಲ್ಲೂ ಮುಂದಿದ್ದಾರೆ. ಕೆಳದಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕಿತ್ತೂರು ರಾಣಿ ಚೆನ್ನಮ್ಮ ನಮ್ಮ ಸಮಾಜದ ಮಹಿಳೆಯರಿಗೆ ಆದರ್ಶಪ್ರಾಯರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಮತ್ತಿತರರು ಪಾಲ್ಗೊಂಡಿದ್ದರು.

# ಭಾರತ್ ಜೋಡೋ ಯಾತ್ರೆಗೆ ಶಾಂತುಗೌಡ ಶುಭಹಾರೈಕೆ



ಬೆಂಗಳೂರು.ಸೆ.29:– ನಾಳೆಯಿಂದ ರಾಜ್ಯಾದ್ಯಂತ 'ಭಾರತ್ ಜೋಡೋ ಯಾತ್ರೆಗೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ 2.0' ಚಾಲನೆ ನೀಡಲಿದ್ದು ಯಾತ್ರೆ ಯಶಸಿಯಾಗಲಿ ಎಂದು ರಾಜ್ಯ ಒಬಿಸಿ ಕಾರ್ಯದರ್ಶಿ ಹಾಗೂ ಸಂಯೋಜಕ ಶಾಂತುಗೌಡ ಗುತ್ತೆದಾರ ಶುಭ ಹಾರೈಸಿದ್ದಾರೆ.

ಐತಿಹಾಸಿಕ 'ಭಾರತ್ ಜೋಡೋ ಯಾತ್ರೆ'ಯ ಸವಿನೆನಪಿಗಾಗಿ ಸೆಪ್ಟೆಂಬರ್ 30 ರಂದು ರಾಜ್ಯಾದ್ಯಂತ 'ಭಾರತ್ ಜೋಡೋ ಯಾತ್ರೆ 2.0' ಅನ್ನು ಅತ್ಯಂತ ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿರುವ ಶಾಂತುಗೌಡ ಗುತ್ತೆದಾರ ತಿಳಿಸಿದ್ದಾರೆ.

ಈ ಹಿಂದೆ ಜರುಗಿದ ಮೊದಲ ಹಂತದ ಯಾತ್ರೆಯಲ್ಲಿ ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರು ರಾಜ್ಯದ 11 ಜಿಲ್ಲೆಗಳಿಗೆ ಭೇಟಿ ನೀಡಿದ್ದರು. ಆ ಜಿಲ್ಲೆಗಳನ್ನು ಹೊರತುಪಡಿಸಿ, ಈ ಬಾರಿ ಉಳಿದ 29 ಜಿಲ್ಲೆಗಳಲ್ಲಿ ಹಾಗೂ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹಿನ್ನಡೆ ಅನುಭವಿಸಿರುವ 84 ವಿಧಾನಸಭಾ ಕ್ಷೇತ್ರಗಳಲ್ಲಿ ಈ ವಿಶೇಷ ಯಾತ್ರೆಯನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಶಾಂತುಗೌಡ ತಿಳಿಸಿದ್ದಾರೆ.

ಯಾತ್ರೆಯ ಅಂಗವಾಗಿ ನಿಗದಿಪಡಿತ ದಿನದಂದು ಮಧ್ಯಾಹ್ನ 1:00 ಗಂಟೆಯಿಂದ ಸಂಜೆಯವರೆಗೆ ಆಯಾ ಭಾಗಗಳಲ್ಲಿ ಬೃಹತ್ ಸಾರ್ವಜನಿಕ ಸಭೆಗಳನ್ನು ಆಯೋಜಿಸಲಾಗಿದ್ದು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಾತ್ರೆಯನ್ನು ಯಶಸ್ವಿಗೊಳಿಸಬೇಕಾಗಿ ಶಾಂತುಗೌಡ ಗುತ್ತೆದಾರ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಮೂಲ ಸ್ಥಳದಲ್ಲೇ ಡಾ.ರಾಜಕುಮಾರ್ ಪುತ್ಥಳಿ ಪುನರ್ ಸ್ಥಾಪನೆಗೆ ನಿರ್ಧಾರ

ಮೈಸೂರು,ಸೆ.29:– ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿದ್ದ ಡಾ.ರಾಜಕುಮಾರ್ ಪುತ್ಥಳಿಯನ್ನು ಮೂಲ ಸ್ಥಳದಲ್ಲೇ ಮರು ಸ್ಥಾಪಿಸಲು ನಿರ್ಧರಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಾಧಿಕಾರ, ಕನ್ನಡಪರ ಸಂಘಟನೆಗಳು ಮತ್ತು ಡಾ.ರಾಜಕುಮಾರ್ ಅಭಿಮಾನಿಗಳ ಸಂಘದೊಂದಿಗೆ ನಡೆದ ಸುದೀರ್ಘ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ.

ಇತ್ತೀಚೆಗೆ ದಸರಾ ವಸ್ತುಪ್ರದರ್ಶನ ಆವರಣದಿಂದ ಡಾ.ರಾಜ್ ಪುತ್ಥಳಿಯನ್ನು ಸ್ಥಳಾಂತರಿಸಲಾಗಿತ್ತು. ಇದಕ್ಕೆ ಎಂಎಲ್ಸಿ ರಘು ಕೌಟಿಲ್ಯ ಆಕ್ರೋಶ ವ್ಯಕ್ತಪಡಿಸಿದ್ದರು.

ಮೊದಲಿದ್ದ ಸ್ಥಳದಲ್ಲೇ ಪುತ್ಥಳಿಯನ್ನು ಮರು ಸ್ಥಾಪಿಸಬೇಕು ಎಂದು ಆಗ್ರಹಿಸಿ ಸೆ.30ರವರೆಗೆ ಗಡುವು ನೀಡಿದ್ದರು.

# 22 ರಾಜ್ಯಗಳಿಗೆ ಭಾರೀ ಮಳೆ ಮುನ್ಸೂಚನೆ

ನವದೆಹಲಿ,ಸೆ.29:– ವಾಯುಭಾರ ಕುಸಿತ ಮತ್ತು ಮಾನ್ಸೂನ್ ಮಾರುತಗಳ ತೀವ್ರತೆಯಿಂದಾಗಿ ಭಾರತೀಯ ಹವಾಮಾನ ಇಲಾಖೆಯು ದೇಶದ ಒಟ್ಟು 22 ರಾಜ್ಯಗಳಿಗೆ ಭಾರೀ ಮಳೆಯ ಮುನ್ನೆಚ್ಚರಿಕೆಯನ್ನು ನೀಡಿದೆ. ಮುಂಬರುವ ಕೆಲವು ದಿನಗಳಲ್ಲಿ ಹಿಮಾಚಲ ಪ್ರದೇಶ, ಉತ್ತರಾಖಂಡ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಹಾಗೂ ರಾಜಸ್ಥಾನ ಸೇರಿದಂತೆ ಉತ್ತರ ಭಾರತದ ಪ್ರಮುಖ ಭಾಗಗಳಲ್ಲಿ ಗುಡುಗು, ಮಿಂಚು ಸಹಿತ ಸುರಿಯುವ ಮಳೆಯು ಜನಜೀವನವನ್ನು ಅಸ್ತವ್ಯಸ್ತಗೊಳಿಸುವ ಸಾಧ್ಯತೆಯಿದೆ.

ದಕ್ಷಿಣ ಭಾರತದ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿಯೂ ಮಳೆಯ ಆರ್ಭಟ ಹೆಚ್ಚಾಗಲಿದ್ದು, ಕರಾವಳಿ ತೀರ ಪ್ರದೇಶಗಳಲ್ಲಿ ಬಲವಾದ ಗಾಳಿ ಬೀಸುವ ಹಿನ್ನೆಲೆಯಲ್ಲಿ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ಪೈಕಿ ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ ಮತ್ತು ಮಿಜೋರಾಂಗಳಲ್ಲಿಯೂ ಸಹ ಸಾಧಾರಣದಿಂದ ಅತಿ ಭಾರೀ ಮಳೆಯಾಗುವ ಮುನ್ಸೂಚನೆ ಇದೆ. ಅತಿಯಾದ ಮಳೆಯಿಂದಾಗಿ ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲುವ ಅಪಾಯವಿದ್ದು, ಗುಡ್ಡಗಾಡು ಪ್ರದೇಶಗಳಾದ ಉತ್ತರಾಖಂಡ ಮತ್ತು



ಹಿಮಾಚಲ ಪ್ರದೇಶದಲ್ಲಿ ಭೂಕುಸಿತ ಸಂಭವಿಸುವ ಭೀತಿ ಎದುರಾಗಿದೆ.

ನದಿಗಳ ನೀರಿನ ಮಟ್ಟ ದಿಢೀರನೆ ಏರಿಕೆಯಾಗುತ್ತಿರುವುದರಿಂದ ಸ್ಥಳೀಯ ಆಡಳಿತಗಳು ಮತ್ತು ಎನ್ ಡಿ ಆರ್ ಎಫ್ ಮುನ್ನೆಚ್ಚರಿಕಾ ಕ್ರಮವಾಗಿ ಕಟ್ಟೆಚ್ಚರ ವಹಿಸಿವೆ. ಸಾರ್ವಜನಿಕರು ಅನಗತ್ಯ ಪ್ರಯಾಣಗಳನ್ನು ತಪ್ಪಿಸಬೇಕು, ನೀರು ತುಂಬಿದ ರಸ್ತೆಗಳಲ್ಲಿ ವಾಹನ ಚಲಾಯಿಸಬಾರದು ಹಾಗೂ ಹವಾಮಾನ ಇಲಾಖೆಯ ಅಧಿಕೃತ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ವಿನಂತಿಸಲಾಗಿದೆ.

# ಮ್ಯಾನ್ಮಾರ್ ಸೇನಾ ದಾಳಿಗೆ 49 ಮಂದಿ ಸಾವು

ರಖೈನ್,ಸೆ.29:– ಮ್ಯಾನ್ಮಾರ್‌ನ ಪಶ್ಚಿಮ ರಖೈನ್ ಪ್ರಾಂತ್ಯದಲ್ಲಿ ಸಶಸ್ತ್ರ ದಂಗೆಕೋರರ ನಿಯಂತ್ರಣದಲ್ಲಿರುವ ಕ್ಯಾಕ್ತಾವ್ ಪಟ್ಟಣದ ಜನನಿಬಿಡ ಮಾರುಕಟ್ಟೆಯ ಮೇಲೆಯೇ ಮಿಲಿಟರಿ ಆಡಳಿತವು ನಡೆಸಿದ ವಾಯುದಾಳಿಯಲ್ಲಿ 49 ಮಂದಿ ದುರಂತ ಅಂತ್ಯ ಕಂಡಿದ್ದು, 58 ಜನರು ತೀವ್ರವಾಗಿ ಗಾಯಗೊಂಡಿದ್ದಾರೆ.



ದಿಢೀರನೆ ಆಗಮಿಸಿದ ಮಿಲಿಟರಿಯ ಯುದ್ಧ ವಿಮಾನವೊಂದು ಸಾರ್ವಜನಿಕರು ಹಾಗೂ ಸಣ್ಣ ವ್ಯಾಪಾರಿಗಳಿಂದ ತುಂಬಿದ್ದ ಮಾರುಕಟ್ಟೆ ಪ್ರದೇಶಕ್ಕೆ ಎರಡು ಶಕ್ತಿಶಾಲಿ ಬಾಂಬ್‌ಗಳನ್ನು ಎಸೆದಿದೆ. ಬಾಂಬ್ ಸ್ಫೋಟದ ತೀವ್ರತೆಗೆ ಸುತ್ತಮುತ್ತಲಿನ ಅಂಗಡಿ ಮುಂಗಟ್ಟುಗಳು, ವಾಹನಗಳು ಹಾಗೂ ಸಮೀಪದಲ್ಲಿದ್ದ ಸೇತುವೆಯ ಭಾಗಗಳು ಧ್ವಂಸಗೊಂಡಿದ್ದು, ಕ್ಷಣಾರ್ಧದಲ್ಲಿ ಸಂಪೂರ್ಣ ಪ್ರದೇಶವು ಬೆಂಕಿ ಮತ್ತು ಹೊಗೆಯಿಂದ ಆವೃತವಾಯಿತು. ಮೃತಪಟ್ಟವರಲ್ಲಿ ಹೆಚ್ಚಿನವರು ದೈನಂದಿನ ವಸ್ತುಗಳನ್ನು ಖರೀದಿಸಲು ಬಂದಿದ್ದ ಗ್ರಾಹಕರು ಹಾಗೂ ಸ್ಥಳೀಯ ಬೀದಿಬದಿ ವ್ಯಾಪಾರಿಗಳಾಗಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರಗಳು ಮತ್ತು ವಿಡಿಯೋಗಳಲ್ಲಿ ದಟ್ಟವಾದ ಹೊಗೆಯ ಮೋಡಗಳು ಹಾಗೂ ಸಂಪೂರ್ಣವಾಗಿ ಜಖಂಗೊಂಡ ಕಟ್ಟಡಗಳ ಭೀಕರ ದೃಶ್ಯಗಳು ಕಂಡುಬಂದಿವೆ. ಗಾಯಗೊಂಡ ಐವತ್ತೆಂಟು ಜನರನ್ನು ಸ್ಥಳೀಯ ರಕ್ಷಣಾ ಸಿಬ್ಬಂದಿ ಆಸ್ಪತ್ರೆಗೆ ದಾಖಲಿಸಿದ್ದು, ಅವರಲ್ಲಿ ಇಪ್ಪತ್ತೆರಡು ಜನರ ಸ್ಥಿತಿ ಅತ್ಯಂತ ಗಂಭೀರವಾಗಿದೆ ಎಂದು ಪ್ರಾದೇಶಿಕ ಪಡೆಗಳು ಮಾಹಿತಿ ನೀಡಿವೆ. ಕಳೆದ ಎರಡು ವರ್ಷಗಳಿಂದ ಈ ಭಾಗದಲ್ಲಿ ಸಕ್ರಿಯವಾಗಿರುವ ಅರಾಕನ್ ಸೈನ್ಯದ ವಿರುದ್ಧದ ಹೋರಾಟದ ನೆಪದಲ್ಲಿ ಆಡಳಿತಾರೂಢ ಪಡೆಗಳು ಸಾರ್ವಜನಿಕರನ್ನೇ ಗುರಿಯಾಗಿಸಿ ದಾಳಿ ನಡೆಸುತ್ತಿವೆ ಎಂದು ಹಕ್ಕುಗಳ ಹೋರಾಟಗಾರರು ಆರೋಪಿಸಿದ್ದು, ಈ ಅಮಾನವೀಯ ದಾಳಿಗೆ ಶೀಘ್ರದಲ್ಲೇ ಬಲವಾದ ಪ್ರತ್ಯುತ್ತರ ನೀಡಲಾಗುವುದು ಎಂದು ಅರಾಕನ್ ಸೈನ್ಯವು ಎಚ್ಚರಿಸಿದೆ.

# ರ್‍ಯಾಂಪ್ ಮೇಲೆಹೆಜ್ಜೆ ಹಾಕಿದ ಬಾಲಿವುಡ್ ತಾರೆ ಐಶ್ವರ್ಯ

ಪ್ಯಾರೀಸ್,ಸೆ.29:– ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಜಾಗತಿಕ ಮಟ್ಟದ ಫ್ಯಾಷನ್ ವೀಕ್ 2026ರಲ್ಲಿ ಬಾಲಿವುಡ್‌ನ ಸುಂದರಿ ಐಶ್ವರ್ಯಾ ರೈ ಬಚ್ಚನ್ ರ್‍ಯಾಂಪ್ ವಾಕ್ ಮಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಭವ್ಯವಾದ ಐಫೆಲ್ ಟವರ್‌ನ ಹಿನ್ನೆಲೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಅವರ ಉಡುಪು ಹಾಗೂ ರಾಯಲ್ ಲುಕ್ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದ್ದು, ಪ್ರಸ್ತುತ ಫ್ಯಾಷನ್ ಪ್ರಿಯರ ನಡುವೆ ತೀವ್ರ ಚರ್ಚೆಯ ವಿಷಯವಾಗಿದೆ. ಈ ವೈಭವದ ರ್‍ಯಾಂಪ್ ಪ್ರದರ್ಶನದಲ್ಲಿ ಐಶ್ವರ್ಯಾ ರೈ ಅವರೊಂದಿಗೆ ಅಂತರರಾಷ್ಟ್ರೀಯ ಖ್ಯಾತಿಯ ಪ್ರಸಿದ್ಧ ತಾರೆಗಳಾದ ಸಿಮೋನ್ ಆಶ್ಲೇ, ಸೆಲೀನ್ ಡಿಯೋನ್, ಇವಾ ಲಾಂಗೋರಿಯಾ ಮತ್ತು ಕೆಂಡಾಲ್ ಜೆನ್ನರ್ ಕೂಡ ವೇದಿಕೆ ಹಂಚಿಕೊಂಡು ಮೆರಗು ನೀಡಿದರು.

ಈ ಕಾರ್ಯಕ್ರಮದ ಮುಖ್ಯ ವೇದಿಕೆಯನ್ನೇರುವ



ಮುನ್ನ, ಜನಪ್ರಿಯ 'ಬ್ರಿಡ್ಜರ್ಟನ್' ವೆಬ್ ಸರಣಿಯ ನಟನೆಯ ಮೂಲಕ ಜಗತ್ತಿನಾದ್ಯಂತ ಹೆಸರುವಾಸಿಯಾಗಿರುವ ಸಿಮೋನ್ ಆಶ್ಲೇ ಅವರೊಂದಿಗೆ ಐಶ್ವರ್ಯಾ ರೈ ಬಚ್ಚನ್ ಅವರು ಪರಸ್ಪರ ಕೈ ಹಿಡಿದು ಆತ್ಮೀಯವಾಗಿ ಮಾತನಾಡುತ್ತಿರುವ ವೀಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ಅಪಾರ ವೈರಲ್ ಆಗಿದೆ.

ಪ್ಯಾರಿಸ್ ಫ್ಯಾಷನ್ ವೀಕ್ ಜಾಗತಿಕ ಫ್ಯಾಷನ್ ಜಗತ್ತಿನಲ್ಲಿಯೇ ಅತ್ಯಂತ ಪ್ರತಿಷ್ಠಿತ ಹಾಗೂ ಪ್ರಭಾವಶಾಲಿ ಕಾರ್ಯಕ್ರಮಗಳಲ್ಲಿ ಒಂದೆಂದು ಗುರುತಿಸಿಕೊಂಡಿದೆ. ವಿಶ್ವದ ಪ್ರಮುಖ ಮತ್ತು ಜನಪ್ರಿಯ ಫ್ಯಾಷನ್ ಬ್ರ್ಯಾಂಡ್‌ಗಳು ಹಾಗೂ ಪ್ರಸಿದ್ಧ ವಿನ್ಯಾಸಕರು ತಮ್ಮ ಮುಂಬರುವ ಅತ್ಯಾಕರ್ಷಕ ಹೊಸ ಸಂಗ್ರಹಗಳನ್ನು (ಕಲೆಕ್ಷನ್ಸ್) ಪ್ರದರ್ಶಿಸಲು ಈ ವೇದಿಕೆಯನ್ನು ಬಳಸಿಕೊಳ್ಳುತ್ತಾರೆ. ಫ್ಯಾಷನ್ ಉದ್ಯಮಕ್ಕೆ ಹೊಸ ಹೊಸ ಪ್ರವೃತ್ತಿಗಳು ಹಾಗೂ ವಿನೂತನ ವಿನ್ಯಾಸದ ದಿಕ್ಕನ್ನು ನಿರೂಪಿಸುವ ಹೆಗ್ಗುರುತಿನ ಕಾರ್ಯಕ್ರಮವಾಗಿರುವ ಇದು, ವರ್ಷಕ್ಕೆ ನಾಲ್ಕು ಬಾರಿ ಕಾಲೋಚಿತವಾಗಿ (ಸೀಸನಲ್ ಆಗಿ) ಆಯೋಜನೆಗೊಂಡು ಜಗತ್ತಿನ ಗಮನ ಸೆಳೆಯುತ್ತದೆ.

# ಸಿನಿಮೀಯ ಶೈಲಿಯಲ್ಲಿ ಹತ್ಯೆಗೆ ಯತ್ನ, 5 ಮಂದಿ ಬಂಧನ

ಮೈಸೂರು,ಸೆ.29:– ದಕ್ಷಿಣಕಾಶಿ ನಂಜನಗೂಡಿನಲ್ಲಿ ಮಾಜಿ ರೌಡಿ ಹಾಗೂ ಗುತ್ತಿಗೆದಾರನ ಕೊಲೆಗೆ ಸುಪಾರಿ ನೀಡಿ, ಅಪಘಾತದ ನೆಪದಲ್ಲಿ ಹತ್ಯೆಗೆ ಯತ್ನಿಸಿದ ಪ್ರಕರಣ ಬೆಳಕಿಗೆ ಬಂದಿದೆ.

ನಂಜನಗೂಡು ಪಟ್ಟಣದಲ್ಲಿ ಈ ಘಟನೆ ನಡೆದಿದ್ದು, ಗುತ್ತಿಗೆದಾರ ಧನರಾಜ್ ಭೋಲಾ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.

ಲಾರಿಯಿಂದ ಡಿಕ್ಕಿ ಹೊಡೆದು ಹತ್ಯೆ ಮಾಡಲು 2 ಲಕ್ಷ ರೂ. ಸುಪಾರಿ ನೀಡಲಾಗಿತ್ತು. ಲಾರಿ ಚಾಲಕ ಸೈಯದ್ ಸೂಫಿಯಾನ್‌ಗೆ ಸುಪಾರಿ ನೀಡಲಾಗಿದ್ದು, ಒಂದೇ ಸಮಯದಲ್ಲಿ ಎರಡು ಬಾರಿ ಡಿಕ್ಕಿ ಹೊಡೆದು ಕೊಲೆ ಮಾಡಲು ಯತ್ನಿಸಲಾಗಿದೆ.

ಆರೋಪಿಗಳ ಚಲನವಲನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಸಂಚು ಬಯಲಾಗಿದೆ.

ಪ್ರಕರಣ ಸಂಬಂಧ ನಂಜನಗೂಡು ಟೌನ್ ಪೊಲೀಸರು ಕಾರ್ಯಾಚರಣೆ ನಡೆಸಿ 5 ಮಂದಿಯನ್ನು ಬಂಧಿಸಿದ್ದಾರೆ. ಬಂಧಿತರನ್ನು ಜಿಮ್ ಸಲೀಂ, ಸೈಯದ್ ಸೂಫಿಯಾನ್, ಜಿಯಾ, ಸಲ್ಮಾನ್ ಮತ್ತು ಸಮೀರ್ ಎಂದು ಗುರುತಿಸಲಾಗಿದೆ.

# ಬಿಜೆಪಿ ತೊರೆದು ಕೈ ಹಿಡಿದ ರಾಘವೇಂದ್ರ



ಬೆಂಗಳೂರು,ಸೆ.29–ಕೆ.ಆರ್.ಪುರ ಕ್ಷೇತ್ರದ ಕೊತ್ತನೂರಿನ ಬಿಜೆಪಿ ಮುಖಂಡ ರಾಘವೇಂದ್ರ ಪಟೇಲ್ ಅವರು ಸಚಿವ ರಾಮಲಿಂಗರೆಡ್ಡಿ ಸಮ್ಮುಖದಲ್ಲಿ ಪೂರ್ವ ಜಿಲ್ಲಾ ಅಧ್ಯಕ್ಷ ಡಿ.ಕೆ.ಮೋಹನ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ರಾಮಲಿಂಗರೆಡ್ಡಿ ಅವರು ಮುಂದಿನ ಚುನಾವಣೆಯಲ್ಲಿ ಕೆ.ಆರ್.ಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಿ.ಕೆ.ಮೋಹನ್ ಶಾಸಕರಾಗಿ ಆಯ್ಕೆಯಾಗುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಮುಖಂಡರಾದ ರಾಘವೇಂದ್ರ ಪಟೇಲ್ ಸೇರಿದಂತೆ ಹಲವು ಮುಖಂಡರು ಮಾತೃ ಪಕ್ಷಕ್ಕೆ ಮರಳಿದ್ದು,ಪಕ್ಷಕ್ಕೆ ಆನೆಬಲ ಬಂದಿದೆ ಎಂದು ನುಡಿದರು.

ಪೂರ್ವ ಜಿಲ್ಲಾ ಅಧ್ಯಕ್ಷ ಡಿ.ಕೆ. ಮೋಹನ್ ಅವರು ಮಾತನಾಡಿ ಎ.ನಾರಾಯಣಪುರ ವಾರ್ಡ್‌ನಲ್ಲಿ ಕಾಂಗ್ರೆಸ್ ಪಕ್ಷದ ವರ್ಚಸ್ಸನ್ನು ಹೆಚ್ಚಿಸುವ ಮುಖಂಡರಾದ ರಾಘವೇಂದ್ರ ಪಟೇಲ್ ಪಕ್ಷ ಸೇರ್ಪಡೆ ಪಕ್ಷದ ಸಂಘಟನೆಗೆ ಹೆಚ್ಚು ಸಹಕಾರಿಯಾಗಿದೆ ಎಂದು ಹೇಳಿದರು.

ಕೆ.ಆರ್.ಪುರ ಕಾಂಗ್ರೆಸ್ ಭದ್ರಕೋಟೆಯಾಗಿದ್ದು,ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಮುಖಂಡರಾದ ಬೈರತಿ ಮುನಿರಾಜು,ಸಿ.ವೆಂಕಟೇಶ್, ಅಗರ ಪ್ರಕಾಶ್,ಗುರುದಾಸ್,ಆದಿನಾರಾಯಣ್,ಕೇಶವ,ಆಕಾಶ್,ಹೇಮಾವತಿ ಸುರೇಶ್, ಪುರುಷೋತ್ತಮ್ ಬಾಬು,ರಾಮಾಂಜಿನಪ್ಪ ಇದ್ದರು.

# ಅಮೆರಿಕದಲ್ಲಿ ಭಾರತದ ಎಸ್ಸಾರ್‌ನ 1.5 ಲಕ್ಷ ಕೋಟಿ ಉಕ್ಕು ಘಟಕ



ವಾಷಿಂಗ್ಟನ್, ಸೆ.29: ಭಾರತದ ಖ್ಯಾತ ಉದ್ಯಮ ಸಮೂಹ ಎಸ್ಸಾರ್ ಗ್ರೂಪ್, ಅಮೆರಿಕದಲ್ಲಿ ಬರೋಬ್ಬರಿ 18 ಬಿಲಿಯನ್ ಡಾಲರ್ (ಸುಮಾರು 1.5 ಲಕ್ಷ ಕೋಟಿ) ಹೂಡಿಕೆ ಮಾಡಿ ಬೃಹತ್ ಉಕ್ಕು ಉತ್ಪಾದನಾ ಘಟಕ ನಿರ್ಮಿಸಲು ಮುಂದಾಗಿದೆ. ಎಸ್ಸಾರ್‌ನ ಅಮೆರಿಕ ಘಟಕವಾದ ಮೆಸಾಬಿ ಮೆಟಾಲಿಕ್ಸ್ ಮೂಲಕ ಐವಾ ರಾಜ್ಯದಲ್ಲಿ ನಿರ್ಮಾಣವಾಗಲಿರುವ ಈ ಘಟಕವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ಅಮೆರಿಕದ ಇತಿಹಾಸದಲ್ಲೇ ಅತಿದೊಡ್ಡ ಉಕ್ಕು ಘಟಕ' ಎಂದು ಬಣ್ಣಿಸಿದ್ದಾರೆ.

ವೈಟ್‌ಹೌಸ್‌ನ ಓವಲ್ ಕಚೇರಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಟ್ರಂಪ್ ಅವರು ಮೆಸಾಬಿ ಮೆಟಾಲಿಕ್ಸ್‌ನ ಅಧಿಕಾರಿಗಳೊಂದಿಗೆ ಯೋಜನೆಯನ್ನು ಘೋಷಿಸಿದರು. ಮುಂದಿನ 10 ವರ್ಷಗಳಲ್ಲಿ ಹಂತ ಹಂತವಾಗಿ ಯೋಜನೆ ಅನುಷ್ಠಾನಗೊಳ್ಳಲಿದ್ದು, ಅತ್ಯಾಧುನಿಕ ಉಕ್ಕು ತಯಾರಿಕಾ ತಂತ್ರಜ್ಞಾನ ಬಳಸಲಾಗುತ್ತದೆ ಎಂದು ತಿಳಿಸಿದರು.

ವರ್ಷಕ್ಕೆ 1 ಕೋಟಿ ಟನ್ ಉಕ್ಕು

ಯೋಜನೆ ಪೂರ್ಣಗೊಂಡ ಬಳಿಕ ಘಟಕವು ವರ್ಷಕ್ಕೆ 10 ಮಿಲಿಯನ್ ಟನ್ (1 ಕೋಟಿ ಟನ್) ಉಕ್ಕು ಉತ್ಪಾದಿಸುವ ಸಾಮರ್ಥ್ಯ ಹೊಂದಲಿದೆ. ಅಮೆರಿಕದ ಏಕೈಕ ಸ್ಥಳದಲ್ಲಿರುವ ಅತಿದೊಡ್ಡ ಉಕ್ಕು ಘಟಕಗಳ ಪೈಕಿ ಇದೂ ಒಂದಾಗಲಿದೆ.

"ಅಮೆರಿಕದ ಇತಿಹಾಸದಲ್ಲೇ ಅತಿದೊಡ್ಡ ಉಕ್ಕು ಘಟಕವನ್ನು ಐವಾದಲ್ಲಿ ನಿರ್ಮಿಸಲಾಗುತ್ತಿದೆ. ಇದು ಅಮೆರಿಕದಲ್ಲಿ ಮಾತ್ರವಲ್ಲ, ವಿಶ್ವದ ಅತಿದೊಡ್ಡ ಘಟಕಗಳ ಪೈಕಿ ಒಂದಾಗಲಿದೆ," ಎಂದು ಟ್ರಂಪ್ ಹೇಳಿದರು.

ಈ ಯೋಜನೆಯಿಂದ 6 ಸಾವಿರಕ್ಕೂ ಹೆಚ್ಚು ನಿರ್ಮಾಣ ಉದ್ಯೋಗಗಳು ಮತ್ತು ಸುಮಾರು 2 ಸಾವಿರ ಶಾಶ್ವತ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಮುಂದಿನ ಅವಧಿಯಲ್ಲಿ ಅಮೆರಿಕದ ಆರ್ಥಿಕತೆಗೆ ಸುಮಾರು 95 ಬಿಲಿಯನ್ ಡಾಲರ್ ಕೊಡುಗೆ ನೀಡಲಿದೆ ಎಂದು ಟ್ರಂಪ್ ಹೇಳಿದ್ದಾರೆ.

ಯೋಜನೆಯ ಪ್ರಮುಖ ವಿಶೇಷತೆ ಎಂದರೆ ಉಕ್ಕು ಉತ್ಪಾದನೆಗೆ ಬೇಕಾದ ಕಬ್ಬಿಣದ ಅದಿರನ್ನು ಅಮೆರಿಕದ ಮಿನ್ನೇಸೋಟದಲ್ಲಿರುವ ಹೊಸ ಗಣಿಯಿಂದ ಪಡೆಯಲಾಗುತ್ತದೆ. ಹೀಗಾಗಿ ಗಣಿಗಾರಿಕೆಯಿಂದ ಹಿಡಿದು ಉಕ್ಕು ಉತ್ಪಾದನೆವರೆಗೆ ಸಂಪೂರ್ಣ ಸಮಗ್ರ ಪೂರೈಕೆ ಸರಪಳಿ ಅಮೆರಿಕದಲ್ಲೇ ರೂಪುಗೊಳ್ಳಲಿದೆ.

ಮೆಸಾಬಿ ಮೆಟಾಲಿಕ್ಸ್‌ನ ಕಾರ್ಯಕಾರಿ ಮಂಡಳಿ ಅಧ್ಯಕ್ಷ ರೇವಂತ್ ರುಯಿಯಾ, ಅಮೆರಿಕದಲ್ಲಿ ಉತ್ಪಾದನಾ ಚಟುವಟಿಕೆಗಳಿಗೆ ಹೊಸ ಒತ್ತು ನೀಡುತ್ತಿರುವ ಟ್ರಂಪ್ ಆಡಳಿತಕ್ಕೆ ಧನ್ಯವಾದ ಸಲ್ಲಿಸಿದರು.

"ಅಮೆರಿಕದಲ್ಲಿ ವಸ್ತುಗಳನ್ನು ತಯಾರಿಸುವ ಮಹತ್ವವನ್ನು ಮತ್ತೆ ಮುನ್ನೆಲೆಗೆ ತಂದಿದ್ದಕ್ಕಾಗಿ ಅಧ್ಯಕ್ಷ ಟ್ರಂಪ್ ಅವರಿಗೆ ಧನ್ಯವಾದ. ಐವಾದ ಹೊಸ ಉಕ್ಕು ಸಂಕೀರ್ಣದೊಂದಿಗೆ ಸಂಪೂರ್ಣ ಸಮಗ್ರ ಅಮೆರಿಕನ್ ಪೂರೈಕೆ ಸರಪಳಿಯನ್ನು ಪೂರ್ಣಗೊಳಿಸಲಿದ್ದೇವೆ," ಎಂದು ಅವರು ಹೇಳಿದರು.

ಯೋಜನೆಯ ಒಟ್ಟು ವೆಚ್ಚ ಸುಮಾರು 18 ಬಿಲಿಯನ್ ಡಾಲರ್ ಎಂದು ಎಸ್ಸಾರ್ ತಿಳಿಸಿದೆ. ಇದು ಭಾರತೀಯ ರೂಪಾಯಿಯಲ್ಲಿ ಸುಮಾರು 1.5 ಲಕ್ಷ ಕೋಟಿ. ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲಟ್ನಿಕ್ ಅವರು ಗಣಿ ಮತ್ತು ಉಕ್ಕು ಘಟಕ ಎರಡನ್ನೂ ಒಳಗೊಂಡ ಒಟ್ಟು ಹೂಡಿಕೆ ಸುಮಾರು 17.5 ಬಿಲಿಯನ್ ಡಾಲರ್ ಎಂದು ಹೇಳಿದ್ದಾರೆ.

# ಯುಪಿಐ ಎಂಡಿಆರ್ ಅನ್ನು ವ್ಯಾಪಾರಿಗಳಿಗೆ ವಿಧಿಸಲಾಗುತ್ತದೆ - ಆದರೆ ಗ್ರಾಹಕರು ಅಂತಿಮವಾಗಿ ಪಾವತಿಸುತ್ತಾರೆಯೇ?

ಯುಪಿಐ ಯ ಪ್ರಸ್ತಾವಿತ ವ್ಯಾಪಾರಿ ರಿಯಾಯಿತಿ ದರವು 2,000 ಕ್ಕಿಂತ ಹೆಚ್ಚಿನ ಕೆಲವು ವ್ಯಾಪಾರಿ ಪಾವತಿಗಳಿಗೆ ಅನ್ವಯಿಸುತ್ತದೆ, ಗ್ರಾಹಕರಿಗೆ ನೇರವಾಗಿ ಅಲ್ಲ.

ಆದರೆ ವ್ಯವಹಾರಗಳು ಬೆಲೆಗಳನ್ನು ಹೆಚ್ಚಿಸುವ ಮೂಲಕ,ರಿಯಾಯಿತಿಗಳನ್ನು ಕಡಿತಗೊಳಿಸುವ ಮೂಲಕ ಅಥವಾ ಶುಲ್ಕವನ್ನು ಸೇರಿಸುವ ಮೂಲಕ ವೆಚ್ಚವನ್ನು ಭರಿಸಿದರೆ, ಖರೀದಿದಾರರು ಅಂತಿಮವಾಗಿ ಭಾರತದ ಹೊಸ ಡಿಜಿಟಲ್–ಪಾವತಿ ಶುಲ್ಕವನ್ನು ಪಾವತಿಸಬಹುದೇ?

ಭಾರತವು ನವೆಂಬರ್ 8, 2016 ರಂದು 2000 ಮತ್ತು 1,000 ನೋಟುಗಳ ನೋಟು ರದ್ದತಿಯನ್ನು ಘೋಷಿಸಿದಾಗ, ಈ ಕ್ರಮವು ಕಪ್ಪು ಹಣ, ನಕಲಿ ಕರೆನ್ಸಿ ಮತ್ತು ಕಾನೂನುಬಾಹಿರ ಚಟುವಟಿಕೆಗಳಿಗೆ ಹಣಕಾಸು ಒದಗಿಸುವುದನ್ನು ಗುರಿಯಾಗಿರಿಸಿಕೊಂಡಿತು ಮತ್ತು ಔಪಚಾರಿಕ ಮತ್ತು ಡಿಜಿಟಲ್ ಪಾವತಿಗಳನ್ನು ಪ್ರೋತ್ಸಾಹಿಸಿತು ಎಂದು ಸರ್ಕಾರ ಹೇಳಿದೆ.

ಆದಾಗ್ಯೂ, ಹಿಂಪಡೆಯಲಾದ ಹೆಚ್ಚಿನ ಕರೆನ್ಸಿಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದವು. ಭಾರತೀಯ ರಿಸರ್ವ್ ಬ್ಯಾಂಕ್ ವರದಿ ಮಾಡಿರುವ ಪ್ರಕಾರ, 15.44 ಲಕ್ಷ ಕೋಟಿಗಳಲ್ಲಿ ಸುಮಾರು 15.28 ಲಕ್ಷ ಕೋಟಿಯ ಸುಮಾರು ಶೇ. 98.96 ಆರ್‌ಬಿಐ ಗೆ ಹಿಂತಿರುಗಿಸಲಾಗಿದೆ. ಆದಾಗ್ಯೂ, ನೋಟು ರದ್ದತಿಯು ಔಪಚಾರಿಕ ಬ್ಯಾಂಕಿಂಗ್ ಮತ್ತು ಡಿಜಿಟಲ್ ಪಾವತಿಗಳ ಕಡೆಗೆ ಬದಲಾವಣೆಯೊಂದಿಗೆ ಹೊಂದಿಕೆಯಾಯಿತು ಮತ್ತು ವೇಗವನ್ನು ಪಡೆದಿರಬಹುದು.

ಯುಪಿಐನ ನಂತರದ ವಿಸ್ತರಣೆಗೆ ಅದು ಎಷ್ಟರ ಮಟ್ಟಿಗೆ ನೇರವಾಗಿ ಕಾರಣವಾಯಿತು ಎಂಬುದನ್ನು ಪ್ರತ್ಯೇಕಿಸುವುದು ಕಷ್ಟ ಮತ್ತು ಅದನ್ನು ನಿರ್ಣಾಯಕವಾಗಿ ಸ್ಥಾಪಿಸಲಾಗಿದೆ ಎಂದು ಪ್ರಸ್ತುತಪಡಿಸಬಾರದು.

ಯುಪಿಐ ಏರಿಕೆ:

2016 ರಲ್ಲಿ ಪ್ರಾರಂಭವಾದ ಗಕಖ ಭಾರತದ ಪಾವತಿ ವ್ಯವಸ್ಥೆಯ ಕೇಂದ್ರಬಿಂದುವಾಗಿದೆ. 2016–17ನೇ ಹಣಕಾಸು ವರ್ಷದಲ್ಲಿ 1.78 ಕೋಟಿ ಇದ್ದ ವಾರ್ಷಿಕ ವಹಿವಾಟಿನ ಪ್ರಮಾಣವು 2025?26ನೇ ಹಣಕಾಸು ವರ್ಷದಲ್ಲಿ 24,162 ಕೋಟಿಗೂ ಹೆಚ್ಚಾಗಿದೆ ಎಂದು ಸರ್ಕಾರದ ಅಂಕಿಅಂಶಗಳು ಹೇಳುತ್ತವೆ, ಆದರೆ ವಹಿವಾಟಿನ ಮೌಲ್ಯವು ಸುಮಾರು 0.07 ಲಕ್ಷ ಕೋಟಿಯಿಂದ 314 ಲಕ್ಷ ಕೋಟಿಗೆ ಹೆಚ್ಚಾಗಿದೆ. ಆಗಸ್ಟ್ 2026 ರಲ್ಲಿ ಯುಪಿಐ 29.82 ಟ್ರಿಲಿಯನ್ ಮೌಲ್ಯದ ಸುಮಾರು 24.51 ಬಿಲಿಯನ್ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಿದೆ ಎಂದು ಎನ್‌ಪಿಸಿಐ ಡೇಟಾ ತೋರಿಸುತ್ತದೆ, ಇದು ದಿನಕ್ಕೆ ಸರಾಸರಿ 791 ಮಿಲಿಯನ್ ವಹಿವಾಟುಗಳನ್ನು ಹೊಂದಿದೆ.

29.82 ಟ್ರಿಲಿಯನ್ ರೂ.ಗಳನ್ನು 24.51 ಬಿಲಿಯನ್ ವಹಿವಾಟುಗಳಿಂದ ಭಾಗಿಸಿದಾಗ ಪ್ರತಿ ವಹಿವಾಟಿಗೆ ಸರಿಸುಮಾರು 1,216 ಮತ್ತು 31 ದಿನಗಳಲ್ಲಿ 24.51 ಬಿಲಿಯನ್ ವಹಿವಾಟುಗಳು ದಿನಕ್ಕೆ ಸರಿಸುಮಾರು 791 ಮಿಲಿಯನ್.

15 ಅಕ್ಟೋಬರ್ 2026 ರಿಂದ ಏನು ಬದಲಾಗುತ್ತದೆ

ಹೊಸ ಚೌಕಟ್ಟು 2,000 ಕ್ಕಿಂತ ಹೆಚ್ಚಿನ ನಿರ್ದಿಷ್ಟ ವ್ಯಕ್ತಿಯಿಂದ ವ್ಯಾಪಾರಿಗೆ ಯುಪಿಐ ಪಾವತಿಗಳ ಮೇಲೆ ಎಂಡಿಆರ್ ಅನ್ನು ಪರಿಚಯಿಸುತ್ತದೆ ಎಂದು ದಾಖಲೆ ಹೇಳುತ್ತದೆ, ಅಕ್ಟೋಬರ್ 15, 2026 ರಿಂದ: ವಹಿವಾಟು ಹೊಸ ಎಂಡಿಆರ್, ವ್ಯಕ್ತಿಯಿಂದ ವ್ಯಕ್ತಿಗೆ(ಪಿ& ಪಿ) – ಶೂನ್ಯ, 2,000 ವರೆಗಿನ ವ್ಯಾಪಾರಿ ಪಾವತಿ ಶೂನ್ಯ, ರೂ. 2,000 ಕ್ಕಿಂತ ಹೆಚ್ಚಿನ ಇತರ ವ್ಯಾಪಾರಿ ಪಾವತಿಗಳು – ಶೇ. 0.4, ರೂ. 75,000 ಅಥವಾ ಅದಕ್ಕಿಂತ ಹೆಚ್ಚಿನ ವಹಿವಾಟುಗಳು ಗರಿಷ್ಠ. – ರೂ. 300, ರೂ. 2,000 ಶೇ. 5 ಕ್ಕಿಂತ ಹೆಚ್ಚಿನ ಕೆಲವು ಅಗತ್ಯ ವಲಯಗಳು ಎಂಡಿಆರ್, ಮ್ಯೂಚುಯಲ್ ಫಂಡ್‌ಗಳು, ಸೆಕ್ಯುರಿಟೀಸ್ ಮತ್ತು ಸ್ಟಾಕ್ ಬ್ರೋಕಿಂಗ್– ಶೇ. 0.02, ರೂ. 300 ಕ್ಕೆ ಸೀಮಿತವಾಗಿದೆ.

**ಈ ಪ್ರಶ್ನೆಗಳಿಗೆ ಸರ್ಕಾರ ಉತ್ತರ! :**

* ಮಿತಿ ನಿಖರವಾಗಿ ರೂ. 2,000 ಆಗಿದೆಯೇ.
* ಚೌಕಟ್ಟು 15 ಅಕ್ಟೋಬರ್ 2026 ರಂದು ಪ್ರಾರಂಭವಾಗುವುದೇ.
* ರೂ. 2,000 ಕ್ಕಿಂತ ಹೆಚ್ಚಿನ ಎಲ್ಲಾ ವ್ಯಾಪ್ತಿಗೆ ಒಳಪಡುವ ವಹಿವಾಟುಗಳಿಗೆ ಅಥವಾ ನಿರ್ದಿಷ್ಟ ವರ್ಗಗಳಿಗೆ ಮಾತ್ರ ಶೇ. 0.4 ದರ ಅನ್ವಯಿಸುತ್ತದೆಯೇ.
* ರೂ. 75,000 ಅಥವಾ ಅದಕ್ಕಿಂತ ಹೆಚ್ಚಿನ ಎಲ್ಲಾ ವ್ಯಾಪ್ತಿಗೆ ಒಳಪಡುವ ವಹಿವಾಟುಗಳಿಗೆ ರೂ. 300 ಮಿತಿ ಅನ್ವಯಿಸುತ್ತದೆಯೇ.
* "ಅರ್ಹ ಸಣ್ಣ ವ್ಯಾಪಾರಿಗಳು" ಎಂಬುದರ ನಿಖರವಾದ ವ್ಯಾಖ್ಯಾನ;
* ಪಟ್ಟಿ ಮಾಡಲಾದ ಎಲ್ಲಾ ಅಗತ್ಯ ವಲಯಗಳಿಗೆ ಶೇ. 5 ದರ ಅನ್ವಯಿಸುತ್ತದೆಯೇ.

ಶೇ. 0.02 ದರ ಮತ್ತು ರೂ. 300 ಮಿತಿಯು ಮ್ಯೂಚುವಲ್ ಫಂಡ್‌ಗಳು, ಸೆಕ್ಯುರಿಟೀಸ್ ಮತ್ತು ಸ್ಟಾಕ್ ಬ್ರೋಕಿಂಗ್ ವಹಿವಾಟುಗಳಿಗೆ ವಿವರಿಸಿದಂತೆ ನಿಖರವಾಗಿ ಅನ್ವಯಿಸುತ್ತದೆಯೇ.

* ದರಗಳು ಅನ್ವಯವಾಗುವ ಯಾವುದೇ ತೆರಿಗೆಗಳು ಅಥವಾ ಇತರ ಶುಲ್ಕಗಳನ್ನು ಒಳಗೊಂಡಿವೆಯೇ ಅಥವಾ ಪ್ರತ್ಯೇಕವಾಗಿವೆಯೇ.

5 ವಲಯಗಳಲ್ಲಿ ರೈಲ್ವೆ, ದೂರಸಂಪರ್ಕ, ವಿಮೆ, ಇಂಧನ ಮತ್ತು ಕೃಷಿ ಒಳಹರಿವು ಸೇರಿವೆ ಎಂದು ಸರ್ಕಾರ ಹೇಳುತ್ತದೆ.

ಈ ವಲಯದ ಪಟ್ಟಿ ಮತ್ತು ಅನ್ವಯವಾಗುವ ವಹಿವಾಟು ವರ್ಗಗಳಿಗೆ ಅಧಿಕೃತ ನೀತಿ ಪತ್ರದ ವಿರುದ್ಧ ಪರಿಶೀಲನೆ ಅಗತ್ಯವಿದೆ.

ಹೊಸ ಯುಪಿಐ ವಹಿವಾಟು ಶುಲ್ಕದೊಂದಿಗೆ ಸಾಮಾನ್ಯ ಜನರು ಹೇಗೆ ಹೋರಾಡುತ್ತಾರೆ:

1 ಪ್ರಮುಖ ಹೋರಾಟ: ವೆಚ್ಚದ ಭಯ ಪಾಸ್–ಥ್ರೂ,ಅರ್ಥಶಾಸ್ತ್ರಜ್ಞರು, ರಾಜಕಾರಣಿಗಳು ಮತ್ತು ಖರೀದಿದಾರರು ವ್ಯಕ್ತಪಡಿಸಿದ ಪ್ರಮುಖ ಚಿಂತೆಯೆಂದರೆ, ಅನೇಕರು ಪ್ರಸ್ತುತ ಕ್ರೆಡಿಟ್ ಕಾರ್ಡ್ ಪಾವತಿಗಳಿಗೆ 2% ಸರ್‌ಚಾರ್ಜ್ ಅನ್ನು ಸೇರಿಸುವಂತೆಯೇ ವ್ಯಾಪಾರಿಗಳು ಎಂಡಿಆರ್ ವೆಚ್ಚವನ್ನು ಬೆಲೆಗಳಲ್ಲಿ ಸೇರಿಸುತ್ತಾರೆ. ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಸಾರ್ವಜನಿಕವಾಗಿ ಈ ಸಮಾನಾಂತರವನ್ನು ಚಿತ್ರಿಸಿದ್ದಾರೆ, ವ್ಯಾಪಾರಿಗಳು ಈಗಾಗಲೇ ಕಾರ್ಡ್ ಶುಲ್ಕವನ್ನು ವರ್ಗಾಯಿಸುತ್ತಾರೆ ಮತ್ತು ಅದೇ ಮಾದರಿಯು ಗಕಖ ಯೊಂದಿಗೆ ಇರಬಹುದು ಎಂದು ಹೇಳಿದ್ದಾರೆ. ಹೈದರಾಬಾದ್‌ನ ಐಟಿ ವೃತ್ತಿಪರರೊಬ್ಬರು ಈ ಭಯವನ್ನು ನೇರವಾಗಿ ಪ್ರತಿಧ್ವನಿಸಿದರು, ಹೊಸ ಶುಲ್ಕವು ಅನೇಕ ಜನರನ್ನು ನಗದು ವಹಿವಾಟಿಗೆ ಮರಳುವಂತೆ ಒತ್ತಾಯಿಸುವ ಸಾಧ್ಯತೆಯಿದೆ ಎಂದು ವಿವರಿಸಿದರು, ಏಕೆಂದರೆ ದೂರದ ಸ್ಥಳಗಳಲ್ಲಿನ ಅನೇಕ ಸಣ್ಣ ವ್ಯವಹಾರಗಳು ಈಗಾಗಲೇ ಯುಪಿಐ ಅಥವಾ ಕಾರ್ಡ್ ಪಾವತಿಗಳನ್ನು ತಪ್ಪಿಸುತ್ತವೆ ಮತ್ತು ಈ ಹಿಂಜರಿಕೆಯು ಈಗ ಉಪನಗರ ಮತ್ತು ನಗರ ಪ್ರದೇಶಗಳಿಗೆ ಹರಡಬಹುದು ಎಂದು ಚಿಂತಿಸುತ್ತಿದ್ದಾರೆ.

2. ಸಣ್ಣ ವಹಿವಾಟಿನ ಸಂಖ್ಯೆಯ ಹೊರತಾಗಿಯೂ ಅಸಮಾನ ವ್ಯಾಪ್ತಿ: ರೂ 2,000 ಕ್ಕಿಂತ ಹೆಚ್ಚಿನ ವಹಿವಾಟುಗಳು ಒಟ್ಟು ಯುಪಿಐ ವಹಿವಾಟಿನ ಪರಿಮಾಣದ ಸಣ್ಣ ಪಾಲನ್ನು ಪ್ರತಿನಿಧಿಸುತ್ತವೆಯಾದರೂ, ಅವು ದೊಡ್ಡ ಮೌಲ್ಯವನ್ನು ನಿರ್ವಹಿಸುತ್ತವೆ. ರೂ. 2,000 ಕ್ಕಿಂತ ಹೆಚ್ಚಿನ ಪಾವತಿಗಳು ವ್ಯಕ್ತಿಯಿಂದ ವ್ಯಾಪಾರಿಗೆ ವಹಿವಾಟಿನ ಪರಿಮಾಣದ ಸುಮಾರು 4%ರಷ್ಟಿದೆ, ಆದರೆ ಅವುಗಳ ಒಟ್ಟು ಮೌಲ್ಯದ ಸುಮಾರು ಮೂರನೇ ಎರಡರಷ್ಟು. ಇದರರ್ಥ ಶುಲ್ಕವನ್ನು ಕಿರಿದಾಗಿ ರೂಪಿಸಲಾಗಿದ್ದರೂ, ಅಪರೂಪದ ಐಷಾರಾಮಿ ವಹಿವಾಟುಗಳಿಗಿಂತ ನಿಜವಾದ ಮನೆಯ ಖರ್ಚು ದೊಡ್ಡ ದಿನಸಿ ಬಿಲ್‌ಗಳು, ಉಪಕರಣಗಳ ಖರೀದಿಗಳು, ದೊಡ್ಡ ಟಿಕೆಟ್ ಸೇವೆಗಳ ದೊಡ್ಡ ಭಾಗವನ್ನು ಮುಟ್ಟುತ್ತದೆ.

3. ಕೌಂಟರ್‌ನಲ್ಲಿ ಅಸಮಂಜಸ ನಿಯಮಗಳು ಗೊಂದಲವನ್ನು ಸೃಷ್ಟಿಸುತ್ತವೆ:

ವಿವಿಧ ವರ್ಗಗಳು ಸಾಮಾನ್ಯ ವ್ಯಾಪಾರಿಗಳಿಗೆ 0.4%/–300–ಕ್ಯಾಪ್, ಇಂಧನ/ಟೆಲಿಕಾಂ/ವಿಮೆ/ರೈಲ್ವೆಗಳಿಗೆ ಶೇ. 5 ಸ್ಥಿರ ಮತ್ತು ಬಂಡವಾಳ–ಮಾರುಕಟ್ಟೆ ವಹಿವಾಟುಗಳಿಗೆ ಕಡಿಮೆ ದರವನ್ನು ಎದುರಿಸುವುದರಿಂದ – ಸಾಮಾನ್ಯ ಖರೀದಿದಾರರು ನಿರ್ದಿಷ್ಟ ಖರೀದಿಗೆ ಎಷ್ಟು ವೆಚ್ಚವಾಗುತ್ತದೆ ಅಥವಾ ಅಂಗಡಿಯವರು ಸದ್ದಿಲ್ಲದೆ ಸರ್‌ಚಾರ್ಜ್ ಅನ್ನು ಸೇರಿಸುತ್ತಾರೆಯೇ ಎಂದು ಸುಲಭವಾಗಿ ಊಹಿಸಲು ಸಾಧ್ಯವಿಲ್ಲ. ವಿಶ್ಲೇಷಕರು ಗಮನಿಸುವಂತೆ, ಕೆಲವು ಪ್ರದೇಶಗಳಲ್ಲಿ ವೆಚ್ಚದ ಪರಿಣಾಮಗಳನ್ನು "ತುಲನಾತ್ಮಕವಾಗಿ ಸೀಮಿತಗೊಳಿಸಲಾಗಿದೆ" ಆದರೆ ಇತರ ಪ್ರದೇಶಗಳಲ್ಲಿ ಅಲ್ಲ.

4. ಸಣ್ಣ ವ್ಯಾಪಾರಿಗಳು ದೊಡ್ಡ ಖರೀದಿಗಳಿಗೆ ಗಕಖ ಅನ್ನು ನಿರುತ್ಸಾಹಗೊಳಿಸಬಹುದು:

ಸಂದರ್ಶನ ನಡೆಸಿದ ಹಲವಾರು ವ್ಯಾಪಾರಿಗಳು ಗ್ರಾಹಕರು ಶುಲ್ಕವನ್ನು ಸ್ವತಃ ಹೀರಿಕೊಳ್ಳುವ ಬದಲು ನಗದುಗೆ ಮರಳುತ್ತಾರೆ ಎಂದು ನಿರೀಕ್ಷಿಸುತ್ತೇವೆ ಎಂದು ಹೇಳಿದರು. ಇದು ಗ್ರಾಹಕರಿಗೆ ದ್ವಿತೀಯಕ ಹೋರಾಟವನ್ನು ಸೃಷ್ಟಿಸುತ್ತದೆ: ಹೆಚ್ಚಿನ ಮೌಲ್ಯದ ಖರೀದಿಗಳಿಗೆ ಗಕಖ ಸ್ವೀಕಾರ ಕಡಿಮೆಯಾಗಿದೆ, ಕೆಲವು ದೂರದ ಮತ್ತು ಸಣ್ಣ ಪಟ್ಟಣದ ವ್ಯಾಪಾರಿಗಳು ಈಗಾಗಲೇ ಅನ್ವಯಿಸುವ "ದೊಡ್ಡ ಖರೀದಿಗಳಿಗೆ ಯುಪಿಐ ಇಲ್ಲ" ಮಾದರಿಯನ್ನು ಪ್ರತಿಧ್ವನಿಸಲು ಗಕಖ ಉದ್ದೇಶಿಸಲಾದ ರೀತಿಯ ಖರ್ಚುಗಾಗಿ ಜನರು ಮತ್ತೆ ಹಣವನ್ನು ಸಾಗಿಸಲು ಒತ್ತಾಯಿಸುತ್ತದೆ.

5. "ಜಾರು ಇಳಿಜಾರಿನ" ಬಗ್ಗೆ ಆತಂಕ:

ಕೆಲವು ಕಿರಿಯ ಬಳಕೆದಾರರು ಈ ಶುಲ್ಕವನ್ನು ಒಮ್ಮೆ ಸಾಮಾನ್ಯೀಕರಿಸಿದ ನಂತರ ಸಣ್ಣ ವ್ಯಾಪಾರಿಗಳಿಗೆ ಅಥವಾ ಅಂತಿಮವಾಗಿ ಪೀರ್–ಟು–ಪೀರ್ ವರ್ಗಾವಣೆಗಳಿಗೆ ವಿಸ್ತರಿಸಬಹುದು ಎಂದು ಚಿಂತಿಸುತ್ತಾರೆ. ಸಣ್ಣ ವ್ಯವಹಾರಗಳನ್ನು ಪ್ರಾರಂಭಿಸುವ ಕಿರಿಯರು ತಮ್ಮ ಲಾಭದ ಒಂದು ಪಾಲು ಯಾವಾಗಲೂ ಶುಲ್ಕಗಳಿಗೆ ಹೋಗುತ್ತದೆ ಎಂದು ಭಾವಿಸಿದರೆ ಹಿಂಜರಿಯಬಹುದು, ಇದು ಡಿಜಿಟಲ್ ಪಾವತಿಗಳ ಸುತ್ತ ನಿರ್ಮಿಸಲಾದ ಉದ್ಯಮಶೀಲತೆಯನ್ನು ನಿರುತ್ಸಾಹಗೊಳಿಸುತ್ತದೆ ಎಂಬ ಭಯವಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾದ ವಿದ್ಯಾರ್ಥಿಯೊಬ್ಬರು ಹೇಳಿದರು.

6. ಶುಲ್ಕ ಇನ್ನೂ ಅಗತ್ಯವಿದೆಯೇ ಎಂಬ ಬಗ್ಗೆ ಸಾರ್ವಜನಿಕ ಸಂದೇಹ:

ಸ್ವತಂತ್ರ ಚಿಂತಕರ ಚಾವಡಿ ಜಿಟಿಆರ್‌ಐ ಸರ್ಕಾರದ ಆಧಾರವಾಗಿರುವ ತಾರ್ಕಿಕತೆಯನ್ನು ಪ್ರಶ್ನಿಸಿದೆ. ಯುಪಿಐ ಅನ್ನು ಮುಕ್ತವಾಗಿಡುವುದರಿಂದ ಸರ್ಕಾರಕ್ಕೆ ವಾರ್ಷಿಕವಾಗಿ ರೂ. 2,000– 2,500 ಕೋಟಿ ಮಾತ್ರ ಖರ್ಚಾಗುತ್ತದೆ ಎಂದು ಅದರ ಸಂಸ್ಥಾಪಕರು ಗಮನಿಸಿದರು, ಆಹಾರ (2.03 ಲಕ್ಷ ಕೋಟಿ) ಅಥವಾ ರಸಗೊಬ್ಬರ (1.68 ಲಕ್ಷ ಕೋಟಿ) ನಂತಹ ಪ್ರಮುಖ ಸಬ್ಸಿಡಿಗಳ ಜೊತೆಗೆ ಎನ್‌ಪಿಸಿಐ ಸ್ವತಃ ರೂ. 1,552 ಕೋಟಿ ಹೆಚ್ಚುವರಿಯನ್ನು ದಾಖಲಿಸಿದೆ ಎಂದು ಗಮನಸೆಳೆದರು. "ಸುಸ್ಥಿರತೆ"ಗಾಗಿ ಶುಲ್ಕವು ಕಟ್ಟುನಿಟ್ಟಾಗಿ ಅಗತ್ಯವಿಲ್ಲದಿರಬಹುದು ಎಂಬ ಸಾರ್ವಜನಿಕ ಗ್ರಹಿಕೆಯನ್ನು ಇದು ಹುಟ್ಟುಹಾಕಿದೆ. ಸಾಮಾನ್ಯ ಜನರಲ್ಲಿ ಪರೋಕ್ಷವಾಗಿ ವೆಚ್ಚವನ್ನು ಭರಿಸುವಂತೆ ಸಂದೇಹವನ್ನು ಹೆಚ್ಚಿಸಿದೆ.

7. ಗ್ರಾಹಕರ ಆತಂಕದ ರಾಜಕೀಯ ವರ್ಧನೆ:

ಬಹು ವಿರೋಧ ಪಕ್ಷದ ವ್ಯಕ್ತಿಗಳಾದ ಕಾಂಗ್ರೆಸ್‌ನ ರಾಹುಲ್ ಗಾಂಧಿ ಮತ್ತು ಜೈರಾಮ್ ರಮೇಶ್, ತೆಲಂಗಾಣ ಸಿಎಂ ರೇವಂತ್ ರೆಡ್ಡಿ, ಬಿಜೆಡಿಯ ನವೀನ್ ಪಟ್ನಾಯಕ್ ಮತ್ತು ಸಿಪಿಐ(ಎಂಎಲ್)ನ ದೀಪಂಕರ್ ಭಟ್ಟಾಚಾರ್ಯ ಅವರು ಶುಲ್ಕವನ್ನು ಸಾಮಾನ್ಯ ನಾಗರಿಕರ ಮೇಲೆ ಪರೋಕ್ಷ ತೆರಿಗೆ ಎಂದು ಸಾರ್ವಜನಿಕವಾಗಿ ರೂಪಿಸಿದ್ದಾರೆ.

ಎಂಡಿಆರ್ –ಅರ್ಹ ವಹಿವಾಟುಗಳು ಒಂದು ಸಣ್ಣ ಪ್ರಮಾಣದ ಪ್ರಮಾಣದಲ್ಲಿದ್ದರೂ ಸಹ, ಅವುಗಳನ್ನು ನೇರವಾಗಿ ಬೆಲೆಗಳಿಗೆ ಸೇರಿಸಲಾಗುತ್ತದೆ, ಅಂತಿಮವಾಗಿ ಗ್ರಾಹಕರ ಜೇಬಿನಿಂದ ಹೊರಬರುತ್ತದೆ ಎಂದು ಕಾಂಗ್ರೆಸ್ ನಿರ್ದಿಷ್ಟವಾಗಿ ವಾದಿಸಿತು. ಈ ನಿರಂತರ ರಾಜಕೀಯ ಸಂದೇಶವು ಅದರ ನಿಖರತೆಯನ್ನು ಲೆಕ್ಕಿಸದೆ, ಸಾರ್ವಜನಿಕರಲ್ಲಿ ಅನಿಶ್ಚಿತತೆ ಮತ್ತು ಚಿಂತೆಯನ್ನು ಜೀವಂತವಾಗಿರಿಸುತ್ತದೆ, ಅವರು ಈಗ ದಿನನಿತ್ಯದ ಯುಪಿಐ ಖರೀದಿಗಳನ್ನು ಹೆಚ್ಚು ಹಿಂಜರಿಕೆಯಿಂದ ಸಂಪರ್ಕಿಸಬಹುದು.

8. ಸರ್ಕಾರದ ಪ್ರತಿ–ಭರವಸೆ:

ಇನ್ನೊಂದು ಕಡೆ ನ್ಯಾಯಯುತವಾಗಿರಲು: ರೂ. 2,000 ವರೆಗಿನ ವಹಿವಾಟುಗಳ ಮೇಲೆ ಅಥವಾ ಖಣಕಚಿಥಿ ಡೆಬಿಟ್ ಕಾರ್ಡ್ ಪಾವತಿಗಳ ಮೇಲೆ ಯಾವುದೇ ಶುಲ್ಕ ವಿಧಿಸದಂತೆ ಸರ್ಕಾರ ಬ್ಯಾಂಕುಗಳು ಮತ್ತು ಪಾವತಿ ಪೂರೈಕೆದಾರರಿಗೆ ನಿರ್ದೇಶನ ನೀಡಿದೆ ಮತ್ತು ಗ್ರಾಹಕರಿಗೆ ಪಾಸ್–ಥ್ರೂ ಅನ್ನು ತಡೆಯಲು ನಿರ್ದಿಷ್ಟವಾಗಿ ಪಾವತಿ ವೇದಿಕೆಗಳೊಂದಿಗೆ ಕೆಲಸ ಮಾಡುತ್ತಿದ್ದೇವೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಹಣಕಾಸು ಸಚಿವಾಲಯವು ಗುಪ್ತ ಉದ್ದೇಶಗಳ ಹಕ್ಕುಗಳನ್ನು "ಖಂಡಿತವಾಗಿ ಸುಳ್ಳು ಮತ್ತು ದಾರಿತಪ್ಪಿಸುವ" ಎಂದು ಕರೆದಿದೆ. ಕಾರ್ಡ್ ಸರ್‌ಚಾರ್ಜ್‌ಗಳೊಂದಿಗೆ ಭಾರತದ ಟ್ರ್ಯಾಕ್ ರೆಕಾರ್ಡ್ ಅನ್ನು ಗಮನಿಸಿದರೆ ಈ ಭರವಸೆ ಆಚರಣೆಯಲ್ಲಿ ಕಾರ್ಯನಿರ್ವಹಿಸುತ್ತದೆಯೇ ಎಂಬುದು ಸಾರ್ವಜನಿಕ ಆತಂಕಕ್ಕೆ ಕಾರಣವಾಗುವ ಮುಕ್ತ ಪ್ರಶ್ನೆಯಾಗಿಯೇ ಉಳಿದಿದೆ.

**ಎಂಡಿಆರ್ ಅನ್ನು ಯಾರು ಪಾವತಿಸುತ್ತಾರೆ?:**

ಎಂಡಿಆರ್ ಅನ್ನು ಔಪಚಾರಿಕವಾಗಿ ವ್ಯಾಪಾರಿ–ಪಾವತಿ ಪರಿಸರ ವ್ಯವಸ್ಥೆಯೊಳಗೆ ವಿಧಿಸಲಾಗುತ್ತದೆ, ಗ್ರಾಹಕರಿಗೆ ನೇರವಾಗಿ ಅಲ್ಲ. ವ್ಯಾಪ್ತಿಗೆ ಒಳಪಟ್ಟ ವಹಿವಾಟಿಗೆ, ಹೇಳಲಾದ ದರ 0.4%:

* ರೂ. 2,500 ಮೇಲೆ ರೂ.10.
* ರೂ. 10,000 ಮೇಲೆ ರೂ.40.
* ರೂ. 50,000 ಮೇಲೆ ರೂ. 200.

ಆದಾಗ್ಯೂ ಆರ್ಥಿಕ ಹೊರೆ ವ್ಯಾಪಾರಿಗಳನ್ನು ಮೀರಿ ಹರಡಬಹುದು. ವ್ಯವಹಾರಗಳು ವೆಚ್ಚವನ್ನು ಹೀರಿಕೊಳ್ಳಬಹುದು, ಕಡಿಮೆ ಲಾಭವನ್ನು ಪಡೆಯಬಹುದು, ರಿಯಾಯಿತಿಗಳನ್ನು ಕಡಿಮೆ ಮಾಡಬಹುದು, ಸಾಮಾನ್ಯವಾಗಿ ಬೆಲೆಗಳನ್ನು ಹೆಚ್ಚಿಸಬಹುದು ಅಥವಾ ಗ್ರಾಹಕರು ಇತರ ಪಾವತಿ ವಿಧಾನಗಳನ್ನು ಬಳಸಲು ಪ್ರೋತ್ಸಾಹಿಸಬಹುದು. ಇವು ಆರ್ಥಿಕ ಸಾಧ್ಯತೆಗಳು, ಸ್ಥಾಪಿತ ಫಲಿತಾಂಶಗಳಲ್ಲ.

**ಈಗ ಎಂಡಿಆರ್ ಅನ್ನು ಏಕೆ ಪರಿಚಯಿಸಬೇಕು?:**

ದತ್ತು ಸ್ವೀಕಾರವನ್ನು ಉತ್ತೇಜಿಸಲು ಯುಪಿಐ ಅನ್ನು ವರ್ಷಗಳ ಕಾಲ ಉಚಿತವಾಗಿ ಇರಿಸಲಾಗಿತ್ತು ಮತ್ತು ವ್ಯವಸ್ಥೆಯನ್ನು ನಿರ್ವಹಿಸಲು ಮೂಲಸೌಕರ್ಯ, ಸೈಬರ್ ಭದ್ರತೆ, ವಂಚನೆ ಮೇಲ್ವಿಚಾರಣೆ, ಸಂಸ್ಕರಣೆ, ಗ್ರಾಹಕ ಬೆಂಬಲ ಮತ್ತು ಅನುಸರಣೆಗಾಗಿ ಖರ್ಚು ಮಾಡುವ ಅಗತ್ಯವಿದೆ.

ಪಾವತಿ–ವ್ಯವಸ್ಥೆಯ ವೆಚ್ಚಗಳ ಸಮಂಜಸವಾದ ವಿವರಣೆಗಳು ಇವು, ಆದರೆ ಗಕಖ ಅನ್ನು ನಿರ್ದಿಷ್ಟವಾಗಿ ದತ್ತು ಸ್ವೀಕಾರಕ್ಕಾಗಿ ಮುಕ್ತವಾಗಿ ಇರಿಸಲಾಗಿದೆ ಎಂಬ ಹೇಳಿಕೆಯನ್ನು ಅಧಿಕೃತ ನೀತಿ ಇತಿಹಾಸದಿಂದ ಬೆಂಬಲಿಸಬೇಕು ಅಥವಾ ಸರ್ಕಾರಕ್ಕೆ ಸ್ಪಷ್ಟವಾಗಿ ಕಾರಣವೆಂದು ಹೇಳಬೇಕು.

**ರಾಜಕೀಯ ವಿವಾದ:**

ರಾಹುಲ್ ಗಾಂಧಿ ಸೇರಿದಂತೆ ವಿರೋಧ ಪಕ್ಷದ ನಾಯಕರು ಈ ನಿರ್ಧಾರವು ಅಮೆರಿಕದ ಒತ್ತಡವನ್ನು ಪ್ರತಿಬಿಂಬಿಸುತ್ತದೆ ಮತ್ತು ಅಮೆರಿಕನ್ ಕಂಪನಿಗಳಿಗೆ ಲಾಭ ತಂದಿದೆ ಎಂದು ಆರೋಪಿಸಿದರು. ಸರ್ಕಾರವು ಈ ಹಕ್ಕನ್ನು ತಿರಸ್ಕರಿಸಿದೆ ಮತ್ತು ಭಾರತದ ಯುಪಿಐ ನೀತಿಯನ್ನು ಸ್ವತಂತ್ರವಾಗಿ ಮಾಡಲಾಗಿದೆ ಎಂದು ಹೇಳಿದೆ ಎಂದು ಅದು ಹೇಳುತ್ತದೆ.

ಲಭ್ಯವಿರುವ ವರದಿಯು ಆರೋಪವನ್ನು ಮಾಡಲಾಗಿದೆ ಮತ್ತು ನಿರಾಕರಿಸಲಾಗಿದೆ ಎಂದು ಸ್ಥಾಪಿಸಬಹುದು, ಆದರೆ ಅಮೇರಿಕನ್ ಕಂಪನಿಯೊಂದು ಅದನ್ನು ಒತ್ತಾಯಿಸಿದ್ದರಿಂದ ಒಆಖ ಅನ್ನು ಪರಿಚಯಿಸಲಾಗಿದೆ ಎಂದು ಅದು ಸ್ವತಃ ಸಾಬೀತುಪಡಿಸುವುದಿಲ್ಲ.

ಉಲ್ಲೇಖಿಸಲಾದ ವರದಿಯು ಮೌಲ್ಯಮಾಪನವನ್ನು ಬದಲಾಯಿಸುವ ಹೆಚ್ಚುವರಿ ಪುರಾವೆಗಳನ್ನು ಹೊಂದಿಲ್ಲದಿದ್ದರೆ, ಆ ಕಾರಣವಾದ ಹಕ್ಕನ್ನು ಸಾಬೀತುಪಡಿಸಲಾಗಿಲ್ಲ ಎಂದು ದಾಖಲೆಯು ಸರಿಯಾಗಿ ಪರಿಗಣಿಸುತ್ತದೆ

ಎಂಡಿಆರ್ ಡಿಜಿಟಲ್ ಅಳವಡಿಕೆಯ ಮೇಲೆ ಪರಿಣಾಮ ಬೀರಬಹುದೇ?.

ಹೆಚ್ಚಿನ ಪಿ 2ಎಂ ವಹಿವಾಟುಗಳು ಶುಲ್ಕದ ಹೊರಗೆ ಉಳಿದಿದ್ದರೆ ಮತ್ತು ಪಿ2ಪಿ ವರ್ಗಾವಣೆಗಳು ಉಚಿತವಾಗಿದ್ದರೆ ತಕ್ಷಣದ ಪರಿಣಾಮವು ಸೀಮಿತವಾಗಿರಬಹುದು. 0.4% ದರವು ಅನೇಕ ಸಾಂಪ್ರದಾಯಿಕ ಕಾರ್ಡ್–ಸಂಸ್ಕರಣಾ ಶುಲ್ಕಗಳಿಗಿಂತ ಕಡಿಮೆಯಾಗಿದೆ ಎಂದು ದಾಖಲೆಯು ಹೇಳುತ್ತದೆ.

ಕಾರ್ಡ್–ಸಂಸ್ಕರಣಾ ಶುಲ್ಕಗಳೊಂದಿಗೆ ಹೋಲಿಕೆಗೆ ಮೂಲ ಮತ್ತು ಎಚ್ಚರಿಕೆಯ ಅರ್ಹತೆಯ ಅಗತ್ಯವಿದೆ. ಎಂಡಿಆರ್ ಕಾರ್ಡ್ ಪ್ರಕಾರ, ವ್ಯಾಪಾರಿ ವರ್ಗ, ಸ್ವಾಧೀನಪಡಿಸಿಕೊಳ್ಳುವವರು, ನೆಟ್‌ವರ್ಕ್, ವಹಿವಾಟು ಗಾತ್ರ, ನಿಯಂತ್ರಕ ನಿಯಮಗಳು ಮತ್ತು ವಾಣಿಜ್ಯ ಒಪ್ಪಂದದ ಮೂಲಕ ಬದಲಾಗುತ್ತದೆ. ತುಲನಾತ್ಮಕ ಮೂಲವಿಲ್ಲದೆ ಹೇಳಿಕೆಯನ್ನು ಸಾಮಾನ್ಯ ಸಂಗತಿಯಾಗಿ ಉಳಿಸಿಕೊಳ್ಳಬಾರದು.

ಕಾಲಾನಂತರದಲ್ಲಿ, ವ್ಯಾಪಾರಿಗಳು ಬೆಲೆಗಳು ಮತ್ತು ಕಡಿಮೆ ರಿಯಾಯಿತಿಗಳ ಮೂಲಕ ಅವರು ದೊಡ್ಡ ಪಾವತಿಗಳನ್ನು ಹೇಗೆ ಸ್ವೀಕರಿಸುತ್ತಾರೆ ಅಥವಾ ವೆಚ್ಚಗಳನ್ನು ಮರುಪಡೆಯುತ್ತಾರೆ ಎಂಬುದನ್ನು ಮರುಪರಿಶೀಲಿಸಬಹುದು.

ಗ್ರಾಹಕರು ಪಾವತಿ–ಸಂಬಂಧಿತ ಶುಲ್ಕಗಳನ್ನು ನೋಡಲು ಪ್ರಾರಂಭಿಸಿದರೆ, ಯುಪಿಐ ಒಂದು ಉಚಿತ ಮತ್ತು ಘರ್ಷಣೆರಹಿತ ವ್ಯವಸ್ಥೆ ಎಂಬ ಖ್ಯಾತಿಯು ದುರ್ಬಲಗೊಳ್ಳಬಹುದು. ಇವು ಸನ್ನಿವೇಶಗಳು, ಪರಿಶೀಲಿಸಿದ ಫಲಿತಾಂಶಗಳಲ್ಲ.

**ಏನನ್ನು ಮೇಲ್ವಿಚಾರಣೆ ಮಾಡಬೇಕು?:**

ಸರ್ಕಾರ ಮತ್ತು ಎನ್‌ಪಿಸಿಐ ಈ ಕೆಳಗಿನವುಗಳ ಕುರಿತು ಡೇಟಾವನ್ನು ಪ್ರಕಟಿಸಬೇಕು:

1. ಸಂಗ್ರಹಿಸಿದ ಎಂಡಿಆರ್ ಮತ್ತು ಪರಿಣಾಮ ಬೀರುವ ವಹಿವಾಟುಗಳ ಸಂಖ್ಯೆ.
2. ವ್ಯಾಪಾರಿಗಳು ಪಾವತಿಸುವ ಸರಾಸರಿ ಎಂಡಿಆರ್.
3. ಬ್ಯಾಂಕ್‌ಗಳ ನಡುವೆ ಆದಾಯದ ವಿತರಣೆ ಮತ್ತು ಪಾವತಿ ಅರ್ಜಿಗಳು.
4. ಸಣ್ಣ ವ್ಯವಹಾರಗಳು ಮತ್ತು ಗ್ರಾಹಕ ಬೆಲೆಗಳ ಮೇಲಿನ ಪರಿಣಾಮಗಳು.
5. ನಗದು ಬಳಕೆ, ಯುಪಿಐ ಪ್ರಮಾಣಗಳು ಮತ್ತು ಅಪ್ಲಿಕೇಶನ್ ಮಾರುಕಟ್ಟೆ ಷೇರುಗಳಲ್ಲಿನ ಬದಲಾವಣೆಗಳು.

ವಿವರಿಸಿದಂತೆ ಚೌಕಟ್ಟಿನ ಅಡಿಯಲ್ಲಿ ಗ್ರಾಹಕರಿಗೆ ಅಧಿಕೃತವಾಗಿ ಶುಲ್ಕ ವಿಧಿಸಲಾಗುವುದಿಲ್ಲ, ಆದರೆ ವ್ಯಾಪಾರಿಗಳು ಬೆಲೆಗಳು, ಮಾರ್ಜಿನ್‌ಗಳು ಅಥವಾ ರಿಯಾಯಿತಿಗಳ ಮೂಲಕ ಪ್ರತಿಕ್ರಿಯಿಸಬಹುದು.

ಆದ್ದರಿಂದ ಕೇಂದ್ರ ಪ್ರಶ್ನೆಯೆಂದರೆ ಎಂಡಿಆರ್ ಅನ್ನು ಔಪಚಾರಿಕವಾಗಿ ಯಾರು ಪಾವತಿಸುತ್ತಾರೆ ಎಂಬುದು ಮಾತ್ರವಲ್ಲ, ಅಂತಿಮವಾಗಿ ಅದರ ಆರ್ಥಿಕ ವೆಚ್ಚವನ್ನು ಯಾರು ಭರಿಸುತ್ತಾರೆ.

**ಬಿನ್ನಿಸ್ ಥಾಮಸ್**
**ಹಿರಿಯ ಪತ್ರಕರ್ತರು.**

# ಪೀಣ್ಯ ಕೈಗಾರಿಕೆಗಳಲ್ಲಿ ಕನ್ನಡಿಗರಿಗೇ ಹೆಚ್ಚು ಉದ್ಯೋಗ ಕಲ್ಪಿಸಿ




ಬೆಂಗಳೂರು.ಸೆ.29– ಪೀಣ್ಯ ಕೈಗಾರಿಕಾ ಪ್ರದೇಶದ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಹೆಚ್ಚು ಉದ್ಯೋಗ ಅವಕಾಶ ಕಲ್ಪಿಸಬೇಕು ಎಂದು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ವೈ.ಬಿ.ಎಚ್.ಜಯದೇವ್ ಒತ್ತಾಯಿಸಿದರು.

ಬೆಂಗಳೂರಿನ ದಾಸರಹಳ್ಳಿ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್‌ನಿಂದ ಬಾಗಲಗುಂಟೆಯ ಮಾರಮ್ಮ ದೇವಸ್ಥಾನದ ರಂಗಮಂದಿರದ ಜ್ಞಾನಪೀಠ ದಿಗ್ಗಜರ ವೇದಿಕೆಯಲ್ಲಿ ಆಯೋಜಿಸಿದ್ದ ಅದ್ದೂರಿ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಭಾಗವಹಿಸಿ ಮಾತನಾಡಿದ ಅವರು, ಬೆಂಗಳೂರಿನ ಹೆಬ್ಬಾಗಿಲು ಎಂಟನೇ ಮೈಲಿ ವೃತ್ತದಲ್ಲಿ ರಾಷ್ಟ್ರಕವಿ ಡಾ. ಕುವೆಂಪು ಪುತ್ಥಳಿಯನ್ನು ಪ್ರತಿಷ್ಠಾಪಿಸಿ, ಸ್ಥಳೀಯ ನಿವಾಸಿಗಳು ಹಾಗೂ ಬೆಂಗಳೂರಿಗೆ ಬರುವ ಎಲ್ಲರಿಗೂ ಸಾಹಿತ್ಯದ ಕಂಪನ್ನು ಪಸರಿಸುವಂತೆ ಮಾಡಬೇಕು ಎಂದು ಪ್ರಜಾಪ್ರತಿನಿಧಿಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ ಮಾತನಾಡಿದ ಸಾಹಿತಿ ಹಾಗೂ ವಾಗ್ಮಿ ಡಾ. ಸಿ. ಸೋಮಶೇಖರ್, ಇಂತಹ ಸಮ್ಮೇಳನಗಳು ಕನ್ನಡಿಗರನ್ನು ಉತ್ತೇಜಿಸಿ ಕನ್ನಡ ಪ್ರೇಮವನ್ನು ಸಮೃದ್ಧವಾಗಿ ಬಿತ್ತುವಲ್ಲಿ ಶಕ್ತಿಶಾಲಿಯಾಗಿವೆ ಎಂದು ಅಭಿಪ್ರಾಯಪಟ್ಟರು.

ಸಮ್ಮೇಳನ ಹಾಗೂ ಕವಿಗೋಷ್ಠಿಯಲ್ಲಿ ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗರಾಜು ಎ. ಕಾಳೇನಹಳ್ಳಿ, ಸಾಹಿತಿ ಮಣ್ಣೇ ಮೋಹನ್, ಕಂನಾಡಿಗಾ ನಾರಾಯಣ, ಡಾ.ಟಿ. ಗೋವಿಂದರಾಜ್, ರತ್ನ ಕಾಳೇಗೌಡ, ವಿ.ಟಿ. ರಾಮಕೃಷ್ಣಯ್ಯ, ಮಮತಾ ವಾರನಹಳ್ಳಿ , ಡಾ. ಸಂಪದಾ, ಸಿರಿಗಂಧ ರಾಮಕೃಷ್ಣಪ್ಪ , ಗೀತಾ ವಿ. ಆರ್ ನೂರಾರು ಕವಿಗಳು ಉಪಸ್ಥಿತರಿದ್ದರು.

# ಪಾಕ್‌ನಲ್ಲಿ ಎಸ್‌ಸಿಒ ಸಭೆ: ಭಾರತ ಭಾಗಿ

ಇಸ್ಲಾಮಾಬಾದ್, ಸೆ.29: ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ)ಯ ರಾಷ್ಟ್ರೀಯ ಸಂಯೋಜಕರ ಮೂರು ದಿನಗಳ ಸಭೆ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಆರಂಭವಾಗಿದ್ದು, ಭಾರತವೂ ಸಭೆಯಲ್ಲಿ ಪಾಲ್ಗೊಂಡಿದೆ. ರಾಷ್ಟ್ರೀಯ ಸಂಯೋಜಕ ಅಲೋಕ್ ದಿಮ್ರಿ ನೇತೃತ್ವದಲ್ಲಿ ಭಾರತೀಯ ನಿಯೋಗ ಸಭೆಯಲ್ಲಿ ಭಾಗವಹಿಸಿದೆ.

ಎಸ್‌ಸಿಒದ ಸದಸ್ಯ ರಾಷ್ಟ್ರಗಳ ರಾಷ್ಟ್ರೀಯ ಸಂಯೋಜಕರ ಸಭೆಗೆ ಪಾಕಿಸ್ತಾನದ ರಾಷ್ಟ್ರೀಯ ಸಂಯೋಜಕ ಮೊಹಮ್ಮದ್ ಫೈಸಲ್ ಅಧ್ಯಕ್ಷತೆ ವಹಿಸಿದ್ದಾರೆ. 2027ರ ಆಗಸ್ಟ್‌ನಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಎಸ್‌ಸಿಒ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಯ ಸಿದ್ಧತೆ ಸೇರಿದಂತೆ ಹಲವು ಪ್ರಮುಖ ವಿಚಾರಗಳು ಸಭೆಯ ಚರ್ಚೆಯಲ್ಲಿವೆ.

ರಷ್ಯಾ, ಭಾರತ, ಇರಾನ್, ಕಜಕಸ್ತಾನ, ಕಿರ್ಗಿಸ್ತಾನ, ಪಾಕಿಸ್ತಾನ, ತಜಿಕಿಸ್ತಾನ, ಉಜ್ಬೇಕಿಸ್ತಾನ, ಬೆಲಾರಸ್ ಮತ್ತು ಚೀನಾ ಸೇರಿದಂತೆ 10 ರಾಷ್ಟ್ರಗಳು ಎಸ್‌ಸಿಒ ಸದಸ್ಯರಾಗಿವೆ.

ಭಾರತ–ಪಾಕಿಸ್ತಾನ ನಡುವೆ ಕಳೆದ ವರ್ಷ ನಡೆದ ಸಂಕ್ಷಿಪ್ತ ಸಂಘರ್ಷದ ಬಳಿಕ ಭಾರತೀಯ ನಿಯೋಗವೊಂದು ಇಸ್ಲಾಮಾಬಾದ್‌ಗೆ ಭೇಟಿ ನೀಡುತ್ತಿರುವುದು ಇದೇ ಮೊದಲ ಬಾರಿಯಾಗಿದೆ. ಇದಕ್ಕೂ ಮುನ್ನ 2024ರ ಅಕ್ಟೋಬರ್ 15 ಮತ್ತು 16ರಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ನೇತೃತ್ವದ ಭಾರತೀಯ ನಿಯೋಗ ಎಸ್‌ಸಿಒ ಮಂಡಳಿಯ ಸರ್ಕಾರದ ಮುಖ್ಯಸ್ಥರ ಸಭೆಯಲ್ಲಿ ಪಾಲ್ಗೊಳ್ಳಲು ಇಸ್ಲಾಮಾಬಾದ್‌ಗೆ ತೆರಳಿತ್ತು.

ಸೆ.28ರಿಂದ 30ರವರೆಗೆ ನಡೆಯುತ್ತಿರುವ ರಾಷ್ಟ್ರೀಯ ಸಂಯೋಜಕರ ಸಭೆಯಲ್ಲಿ ಎಸ್‌ಸಿಒ ಸಹಕಾರ ಮತ್ತು ಸಮನ್ವಯಕ್ಕೆ ಸಂಬಂಧಿಸಿದ ಹಲವು ವಿಷಯಗಳು ಚರ್ಚೆಯಾಗಲಿವೆ. ಪಾಕಿಸ್ತಾನದ ಅಧ್ಯಕ್ಷತೆ–ಯ ಅವಧಿಯ ಕಾರ್ಯಕ್ರಮಗಳು, ಮುಂಬರುವ ಎಸ್‌ಸಿಒ ಸಭೆಗಳು ಹಾಗೂ ಕಾರ್ಯಕ್ರಮಗಳ ಸಿದ್ಧತೆ ಮತ್ತು ಸಂಘಟನೆಯ ಕಾರ್ಯಸೂಚಿಯಲ್ಲಿರುವ ಇತರ ವಿಚಾರಗಳ ಬಗ್ಗೆಯೂ ಚರ್ಚೆ ನಡೆಯಲಿದೆ. 2026–27ನೇ ಸಾಲಿನಲ್ಲಿ ಎಸ್‌ಸಿಒ ರಾಷ್ಟ್ರಗಳ ಮುಖ್ಯಸ್ಥರ ಮಂಡಳಿಯ ಅಧ್ಯಕ್ಷತೆಯನ್ನು ಪಾಕಿಸ್ತಾನ ವಹಿಸಿಕೊಂಡಿದೆ. 'ದೃಷ್ಟಿಕೋನವನ್ನು ಕಾರ್ಯರೂಪಕ್ಕೆ: ಸಂಪರ್ಕ, ನವೀನತೆ ಮತ್ತು ಹಂಚಿಕೆಯ ಸಮೃದ್ಧಿ' ಎಂಬುದು ಪಾಕಿಸ್ತಾನದ ಅಧ್ಯಕ್ಷತೆಯ ಘೋಷವಾಕ್ಯವಾಗಿದೆ.

# ರೈತರಿಂದ ಬೃಹತ್ ಪ್ರತಿಭಟನೆ



ಹುಬ್ಬಳ್ಳಿ, ಸೆ 29: ಕಬ್ಬಿಗೆ ಬೆಂಬಲ ಬೆಲೆ ನೀಡಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘ ಹಸಿರು ಸೇನೆ ನೇತೃತ್ವದಲ್ಲಿ ನಗರದ ಚೆನ್ನಮ್ಮ ವೃತ್ತದಲ್ಲಿಂದು ಬೃಹತ್ ಪ್ರತಿಭಟನೆ ನಡೆಸಲಾಯಿತು.

ಬೆಳಗಾವಿ, ಬಾಗಲಕೋಟೆ, ಧಾರವಾಡ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ರೈತರು ಆಗಮಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು. ಡಾ. ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಗೊಳಿಸಬೇಕು, ಪ್ರತಿ ಟನ್ ಕಬ್ಬಿಗೆ ಕನಿಷ್ಠ 5,500 ಬೆಂಬಲ ಬೆಲೆ ನೀಡಬೇಕು, ಮಹದಾಯಿ ನೀರಾವರಿ ಯೋಜನೆ ಶೀಘ್ರ ಅನುಷ್ಠಾನಗೊಳಿಸಬೇಕು ಸೇರಿದಂತೆ ಇತರ ಬೇಡಿಕೆಗಳ ಈಡೇರಿಕೆಗೆ ರೈತರು ಆಗ್ರಹಿಸಿದರು.

ಬೆಳಿಗ್ಗೆಯಿಂದಲೆ ನಗರದ ಹೃದಯ ಭಾಗ ಚನ್ನಮ್ಮ ವೃತ್ತದಲ್ಲಿ ಬೃಹತ್ ಸಂಖ್ಯೆಯಲ್ಲಿ ರೈತರು ಜಮಾಯಿಸಿದರು. ನಗರದ ಚೆನ್ನಮ್ಮ ವೃತ್ತದಲ್ಲಿ ಸಂಚಾರ ವ್ಯವಸ್ಥೆಯನ್ನು ಬಂದ್ ಮಾಡಲಾಗಿತ್ತು. ಸಂಚಾರ ಮಾರ್ಗ ಬದಲಾವಣೆಯಿಂದ ಬೆಳಿಗ್ಗೆ ವಾಹನಗಳ ಓಡಾಟಕ್ಕೆ ಅಡಚಣೆ ಉಂಟಾಯಿತು.

ನಗರದಲ್ಲಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ನಿವಾಸ ಹಾಗೂ ಅವರ ಕಚೇರಿಗೆ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ನಗರದ ಪ್ರಮುಖ ಸ್ಥಳಗಳಲ್ಲಿಯೂ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.






# ಗ್ರೀನ್‌ಲ್ಯಾಂಡ್, ಅಂಟಾರ್ಟಿಕಾ ದಾಖಲೆಯ ಹಿಮ ಕರಗುವಿಕೆ

1970ರ ದಶಕದಿಂದ ಈಚೆಗೆ ಗ್ರೀನ್‌ಲ್ಯಾಂಡ್ ಮತ್ತು ಅಂಟಾರ್ಟಿಕಾ ಒಟ್ಟಾರೆಯಾಗಿ 11.3 ಶತಕೋಟಿ ಟನ್‌ನಷ್ಟು ಮಂಜುಗಡ್ಡೆ ಕರಗಿದ್ದು ಇದರ ಪರಿಣಾಮ ಜಾಗತಿಕ ಸಮುದ್ರ ಮಟ್ಟ ಏರಿಕೆಗೆ 3 ಸೆಂಟಿಮೀಟರ್‌ಗಿಂತಲೂ ಹೆಚ್ಚು ಕೊಡುಗೆ ನೀಡಿದೆ. ನಾರ್ಥಂಬ್ರಿಯಾ ವಿಶ್ವವಿದ್ಯಾಲಯದ ಸಂಶೋಧಕರ ನೇತೃತ್ವದಲ್ಲಿ ಮತ್ತು ನಾಸಾ ಬೆಂಬಲದೊಂದಿಗೆ ನಡೆಸಲಾದ ಈ ಸಮಗ್ರ ಅಧ್ಯಯನದಲ್ಲಿ ಈ ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ. ಕಳೆದ ಅರ್ಧ ಶತಮಾನದಲ್ಲಿ ವಿಶ್ವದ ಎರಡು ಪ್ರಮುಖ ಮಂಜುಗಡ್ಡೆಯ ಪದರಗಳು ಹೇಗೆ ಬದಲಾಗಿವೆ ಎಂಬುದರ ಕುರಿತು ಅತ್ಯಂತ ಸಂಪೂರ್ಣ ಚಿತ್ರಣ ನೀಡಿದ್ದು ಭವಿಷ್ಯದಲ್ಲಿ ಮತ್ತಷ್ಟು ಹಿಮ ಕರಗುವಿಕೆ ಮತ್ತಷ್ಟು ಅಪಾಯ ತರಲಿದೆ ಎಂದು ಅಂದಾಜು ಮಾಡಲಾಗಿದೆ. 1979 ಮತ್ತು 2023ರ ನಡುವೆ, ಗ್ರೀನ್‌ಲ್ಯಾಂಡ್ ಮತ್ತು ಅಂಟಾರ್ಟಿಕ್ ಮಂಜುಗಡ್ಡೆಯ ಪದರಗಳು ಅಂದಾಜು 11,309 ಶತಕೋಟಿ ಟನ್ ಮಂಜುಗಡ್ಡೆ ಕಳೆದುಕೊಂಡಿವೆ, ಇದರಿಂದ ಜಾಗತಿಕ ಸಮುದ್ರ ಮಟ್ಟ 31.4 ಮಿಲಿಮೀಟರ್‌ಗಳಷ್ಟು ಏರಿಕೆಯಾಗಿದೆ. ಇದರಲ್ಲಿ ಗ್ರೀನ್‌ಲ್ಯಾಂಡ್‌ನ ಪಾಲು ಹೆಚ್ಚಾಗಿದ್ದರೆ, ಅಂಟಾರ್ಟಿಕಾ ಸಮುದ್ರ ಮಟ್ಟದ ಏರಿಕೆಗೆ 13.3 ಮಿಲಿಮೀಟರ್‌ಗಳಷ್ಟು ಕಾರಣವಾಗಿದೆ ಎಂದು ಧ್ರುವ ಪ್ರದೇಶದ ವಿಜ್ಞಾನಿಗಳ ಹೊಸ ಅಂತರರಾಷ್ಟ್ರೀಯ ಮೌಲ್ಯಮಾಪನದ ಸಮೀಕ್ಷೆಯ ಮಾಹಿತಿ ಹಂಚಿಕೊಂಡಿದೆ. ಹಿಮನದಿಗಳ ವೇಗವರ್ಧನೆಯು ಹೆಚ್ಚಿನ ಪ್ರಮಾಣದ ಮಂಜುಗಡ್ಡೆ ನಷ್ಟಕ್ಕೆ ಕಾರಣವಾಗಿದೆ. ಈ ಅಧ್ಯಯನದ ಪ್ರಮುಖ ಅಂಶವೆಂದರೆ, ಮಂಜುಗಡ್ಡೆಯ ನಷ್ಟದ ಬಹುಭಾಗ ಮೇಲ್ಮೈಯಲ್ಲಿ ಕರಗುವಿಕೆಯಿಂದ ಉಂಟಾಗಿಲ್ಲ ಎಂದು ಮಾಹಿತಿ ಹಂಚಿಕೊಳ್ಳಲಾಗಿದೆ. ಸುಮಾರು ಶೇಕಡಾ 84 ರಷ್ಟು ಮಂಜುಗಡ್ಡೆ ನಷ್ಟ ಹಿಮನದಿಗಳ ವೇಗವರ್ಧನೆ ಮತ್ತು ಸಾಗರಕ್ಕೆ ಹೆಚ್ಚಿನ ಮಂಜುಗಡ್ಡೆ ಬಿಡುಗಡೆ ಮಾಡಿದ್ದರಿಂದ ಸಂಭವಿಸಿದೆ ಎಂದು ಸಂಶೋಧಕರು ಹೇಳಿದ್ದಾರೆ. ಮೇಲ್ಮೈಯಲ್ಲಿ ಕರಗುವಿಕೆ ಸುಮಾರು ಶೇಕಡಾ 16 ರಷ್ಟು ನಷ್ಟಕ್ಕೆ ಕಾರಣವಾಗಿದೆ.ಅಧ್ಯಯನದ ಪ್ರಮುಖ ಸಂಶೋಧಕರಲ್ಲಿ ಒಬ್ಬರಾದ ಡಾ. ಇನೆಸ್ ಒಟೊಸಾಕಾ, 1970ರ ದಶಕದವರೆಗಿನ ದಾಖಲೆಗಳನ್ನು ವಿಸ್ತರಿಸಿ ಪರಿಶೀಲಿಸಿದ್ದು ಬೆಚ್ಚಗಾಗುತ್ತಿರುವ ಹವಾಮಾನಕ್ಕೆ ಮಂಜುಗಡ್ಡೆಯ ಪದರಗಳು ಹೇಗೆ ಪ್ರತಿಕ್ರಿಯಿಸಿವೆ ಎನ್ನುವುದರ ಕುರಿತು ಅಧ್ಯಯನಗಳು ಮುಂದುವರಿದಿದೆ. "ಕಳೆದುಹೋದ ಮಂಜುಗಡ್ಡೆಯ ಐದನೇ ನಾಲ್ಕು ಭಾಗಕ್ಕಿಂತಲೂ ಹೆಚ್ಚು ಭಾಗ ಮೇಲ್ಮೈಯಲ್ಲಿ ಕರಗುವ ಬದಲು, ವೇಗವಾಗಿ ಚಲಿಸುವ ಹಿಮನದಿಗಳ ಮೂಲಕ ಸಾಗರಕ್ಕೆ ಬಿಡುಗಡೆಯಾಗಿದೆ"ದೀರ್ಘಕಾಲೀನ ಪ್ರವೃತ್ತಿಯು "ಬೆಚ್ಚಗಾಗುತ್ತಿರುವ ಸಾಗರಕ್ಕೆ ಮಂಜುಗಡ್ಡೆಯ ಪದರಗಳ ಕ್ರಿಯಾತ್ಮಕ ಪ್ರತಿಕ್ರಿಯೆ"ಯಿಂದ ನಿರ್ಧರಿಸಲ್ಪಡುತ್ತಿದೆ ಎಂಬುದನ್ನು ಸಂಶೋಧನೆಯು ಸೂಚಿಸುತ್ತದೆ. ಈ ಮೌಲ್ಯಮಾಪನ 27 ಉಪಗ್ರಹ ಕಾರ್ಯಾಚರಣೆಗಳಿಂದ 42 ಸ್ವತಂತ್ರ ಉಪಗ್ರಹ ಸಮೀಕ್ಷೆಗಳನ್ನು ಒಟ್ಟುಗೂಡಿಸಿದೆ. ಇದಕ್ಕಾಗಿ ಆರಂಭಿಕ 'ಲ್ಯಾಂಡ್‌ಸ್ಯಾಟ್' ದಾಖಲೆಗಳನ್ನು ಬಳಸಿಕೊಂಡು, ಗ್ರೀನ್‌ಲ್ಯಾಂಡ್‌ಗೆ 1972 ಮತ್ತು ಅಂಟಾರ್ಟಿಕಾಗೆ 1979ರವರೆಗಿನ ಅವಲೋಕನ ಮಾಡಿ ಈ ವಿಷಯ ತಿಳಿಸಿದೆ.




## ♦ ಉಪಗ್ರಹ ವೀಕ್ಷಣೆಗಳಿಂದ ನಿರ್ಣಾಯಕ ಸಾಕ್ಷ್ಯ

ಸುದೀರ್ಘ ಅವಧಿಯ ವೀಕ್ಷಣಾ ದಾಖಲೆ, ಹೆಚ್ಚಿನ ಸಂಶೋಧನಾ ತಂಡಗಳ ಭಾಗವಹಿಸುವಿಕೆ ಮತ್ತು ಅನಿಶ್ಚಿತತೆಗಳನ್ನು ಅಳೆಯುವ ವಿಧಾನಗಳಲ್ಲಿನ ಸುಧಾರಣೆಗಳು ಈ ಇತ್ತೀಚಿನ ಅಧ್ಯಯನಕ್ಕೆ ಸಹಕಾರಿಯಾಗಿವೆ ಎಂದು ವಾಷಿಂಗ್ಟನ್ ವಿಶ್ವವಿದ್ಯಾಲಯದ ಅಪ್ಲೈಡ್ ಫಿಸಿಕ್ಸ್ ಲ್ಯಾಬೊರೇಟರಿಯ ಮೌಲ್ಯಮಾಪನ ಕಾರ್ಯದ ಸಹ-ಮುಖ್ಯಸ್ಥರಾದ ಡಾ. ಟೈಲರ್ ಸಟರ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಗ್ರೀನ್‌ಲ್ಯಾಂಡ್ ಮತ್ತು ಅಂಟಾರ್ಟಿಕಾ ಪ್ರದೇಶಗಳು ಅಪಾರ ಪ್ರಮಾಣದ ಮಂಜುಗಡ್ಡೆ ಕಳೆದುಕೊಂಡಿವೆ ಎಂದು ಒಂದು ಪ್ರಮುಖ ಅಧ್ಯಯನ ತಿಳಿಸಿದೆ. ಬೆಚ್ಚಗಿನ ನೀರು ಮತ್ತು ಬೆಚ್ಚಗಿನ ಗಾಳಿಯು ಮಂಜುಗಡ್ಡೆಯನ್ನು ಅತ್ಯಂತ ವೇಗವಾಗಿ ಕರಗಿಸುತ್ತಿವೆ. ಹೀಗೆ ಕರಗಿದ ಮಂಜುಗಡ್ಡೆಯಿಂದಾಗಿ ಪ್ರಪಂಚದಾದ್ಯಂತ ಸಮುದ್ರ ಮಟ್ಟವು 3.2 ಸೆಂಟಿಮೀಟರ್‌ಗಳಷ್ಟು ಏರಿಕೆಯಾಗಿದೆ. ಸಮುದ್ರ ಮಟ್ಟ ಏರಿದಾಗ ಭಾರಿ ಪ್ರವಾಹಗಳು ಉಂಟಾಗುತ್ತವೆ. ಇದು ಸಮುದ್ರದ ಹತ್ತಿರ ವಾಸಿಸುವ ಜನರಿಗೆ ಅಪಾಯಕಾರಿಯಾಗಿದೆ. ಸಮುದ್ರ ಮಟ್ಟದಲ್ಲಿನ ಪ್ರತಿ ಸೆಂಟಿಮೀಟರ್ ಏರಿಕೆಯೂ ಲಕ್ಷಾಂತರ ಮನೆಗಳನ್ನು ಜಲಾವೃತಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ. ವಿಜ್ಞಾನಿಗಳು ಕಳೆದ ನಲವತ್ತು ವರ್ಷಗಳಿಂದ ಉಪಗ್ರಹ ಚಿತ್ರಗಳನ್ನು ಪರಿಶೀಲಿಸುತ್ತಿದ್ದಾರೆ. ಹಿಂದೆ ಮಂಜುಗಡ್ಡೆ ಸುರಕ್ಷಿತವಾಗಿತ್ತು ಎಂದು ಅವರು ಹೇಳುತ್ತಾರೆ. ಆದರೆ ಈಗ ಅದು ಪ್ರತಿ ವರ್ಷವೂ ವೇಗವಾಗಿ ಕರಗುತ್ತಿದೆ. ಭೂಮಿಯ ಉಷ್ಣತೆಯು ಹೆಚ್ಚಾಗುತ್ತಲೇ ಇದ್ದರೆ, ಸಮುದ್ರ ಮಟ್ಟವೂ ಏರುತ್ತಲೇ ಇದೆ ಎನ್ನುವ ಸಂಗತಿಯನ್ನು ಬಯಲು ಮಾಡಿದ್ದಾರೆ



## ♦ 11.3 ಲಕ್ಷ ಕೋಟಿ ಟನ್ ಕರಗಿದ ಹಿಮ

ಗ್ರೀನ್‌ಲ್ಯಾಂಡ್ ಮತ್ತು ಅಂಟಾರ್ಕ್ಟಿಕಾ ಪ್ರದೇಶಗಳು 1979 ರಿಂದ 2023ರ ನಡುವೆ ಸುಮಾರು 11.3 ಲಕ್ಷ ಕೋಟಿ ಟನ್‌ಗಳಷ್ಟು ಐಸ್ ಅಥವಾ ಹಿಮವನ್ನು ಕಳೆದುಕೊಂಡಿವೆ ಎಂದು ಇತ್ತೀಚಿನ ವಿಜ್ಞಾನ ಅಧ್ಯಯನಗಳು ತಿಳಿಸಿವೆ. ಹಿಮ ಕರಗುವಿಕೆ ಪ್ರಮಾಣ 1979 ರಿಂದ ಇಲ್ಲಿಯವರೆಗೆ ಸುಮಾರು 12.5 ಲಕ್ಷ ಕೋಟಿ ಟನ್‌ಗಳಷ್ಟು ಧ್ರುವೀಯ ಹಿಮ ಕರಗಿದೆ ಎಂದು ಅಂದಾಜು ಮಾಡಲಾಗಿದೆ. ಸಮುದ್ರ ಮಟ್ಟ ಏರಿಕೆ: ಈ ಹಿಮ ನಷ್ಟದಿಂದಾಗಿ ಜಾಗತಿಕ ಸಮುದ್ರ ಮಟ್ಟವು ಸುಮಾರು 3.2 ಸೆಂಟಿಮೀಟರ್‌ಗಳಷ್ಟು ಏರಿಕೆಯಾಗಿದೆ. ಮೇಲ್ಮೈಯಲ್ಲಿ ಬಿಸಿಲಿನಿಂದ ಕರಗುವುದಕ್ಕಿಂತ ಹೆಚ್ಚಾಗಿ, ಸಮುದ್ರದ ಉಷ್ಣ ನೀರು ಹಿಮದ ಕೆಳಭಾಗವನ್ನು ಸವೆಸುತ್ತಿರುವುದು ಹಾಗೂ ಹಿಮ ನದಿಗಳು ವೇಗವಾಗಿ ಸಾಗರದೊಳಗೆ ಸೇರುತ್ತಿರುವುದು ಶೇ. 84ರಷ್ಟು ನಷ್ಟಕ್ಕೆ ಮುಖ್ಯ ಕಾರಣವಾಗಿದೆ. ಮೇಲ್ಮೈ ಕರಗುವಿಕೆ ಕೇವಲ ಶೇ. 16ರಷ್ಟಿದೆ ಎಂದು ಹೇಳಿದೆ.



♦

1990ರ ದಶಕದಿಂದೀಚೆಗೆ ಮಂಜುಗಡ್ಡೆಯ ನಷ್ಟ ತೀವ್ರಗತಿಯಲ್ಲಿ ಹೆಚ್ಚಾಗಿದೆ. ವೇಗವಾಗಿ ಚಲಿಸುವ ಹಿಮ ನದಿಗಳು ಮಂಜುಗಡ್ಡೆಯ ನಷ್ಟದ ಶೇ. 84ರಷ್ಟು ಪಾಲನ್ನು ಹೊಂದಿವೆ. ವೇಗವಾಗಿ ಚಲಿಸುವ ಹಿಮನದಿಗಳು ಮಂಜುಗಡ್ಡೆಯ ನಷ್ಟದ ಶೇ. 84ರಷ್ಟು ಪಾಲನ್ನು ಹೊಂದಿವೆ ಎನ್ನುವ ವಿಷಯನ್ನು ವಿಜ್ಞಾನಿಗಳು ಪತ್ತೆಮಾಡಿದ್ದಾರೆ. ದೀರ್ಘಕಾಲೀನ ದಾಖಲೆಗಳ ಪ್ರಕಾರ, 1990ರ ದಶಕದಿಂದೀಚೆಗೆ ಮಂಜುಗಡ್ಡೆಯ ನಷ್ಟ ಗಣನೀಯವಾಗಿ ಹೆಚ್ಚಾಗಿದೆ.

## ♦ ತೀವ್ರಗತಿಯಲ್ಲಿ ಹೆಚ್ಚಳ

ಗ್ರೀನ್‌ಲ್ಯಾಂಡ್‌ನಲ್ಲಿ, ವಾರ್ಷಿಕ ಮಂಜುಗಡ್ಡೆಯ ನಷ್ಟ 1980ರ ದಶಕದ ಸುಮಾರು 60 ಶತಕೋಟಿ ಟನ್‌ಗಳಿಂದ 2010ರ ದಶಕದಲ್ಲಿ 264 ಶತಕೋಟಿ ಟನ್‌ಗಳಿಗೆ ಏರಿಕೆಯಾಗಿದೆ. ನಂತರದ ಈ ದಶಕ ಬೇಸಿಗೆಯಲ್ಲಿ ಮಂಜುಗಡ್ಡೆ ಕರಗುವ ಹಲವಾರು ತೀವ್ರ ಘಟನೆಗಳಿಗೆ ಸಾಕ್ಷಿಯಾಗಿದೆ ಅಂಟಾರ್ಟಿಕಾದಲ್ಲೂ ಇದೇ ರೀತಿಯ ಗಮನಾರ್ಹ ಏರಿಕೆ ಕಂಡುಬಂದಿದೆ. ಅಲ್ಲಿ ವಾರ್ಷಿಕ ನಷ್ಟ 1980ರ ದಶಕದ ಸುಮಾರು 48 ಶತಕೋಟಿ ಟನ್‌ಗಳಿಂದ 2010ರ ದಶಕದಲ್ಲಿ 202 ಶತಕೋಟಿ ಟನ್‌ಗಳಿಗೆ ಏರಿಕೆಯಾಗಿದೆ. ಈ ಮೌಲ್ಯಮಾಪನದ ಪ್ರಕಾರ, ಜಾಗತಿಕ ಸಮುದ್ರ ಮಟ್ಟ ಏರಿಕೆಯ ಸುಮಾರು ಕಾಲು ಭಾಗದಷ್ಟು ಪಾಲಿಗೆ ಈ ಎರಡು ಮಂಜುಗಡ್ಡೆಯ ಪದರಗಳೇ ಕಾರಣವಾಗಿವೆ.

## ♦ ಸಮುದ್ರ ಮಟ್ಟ ಏರಿಕೆಯಿಂದ ಅಪಾಯ

ಸಮುದ್ರ ಮಟ್ಟ ಏರಿಕೆಯು ಕರಾವಳಿ ಸಮುದಾಯಗಳ ಮೇಲೆ ಬೀರುವ ಪರಿಣಾಮ ಬೀರಿದೆ, ಇದರಿಂದ ಸುತ್ತ ಮುತ್ತಲ ಪ್ರದೇಶದ ಜನರ ಮೇಲೂ ಗಂಭೀರ ಪರಿಣಾಮ ಬೀರಿದೆ ಎಂದು ವಿಜ್ಞಾನಿಗಳು ಮಾಹಿತಿ ಹಂಚಿಕೊಂಡಿದ್ದಾರೆ. ನಾರ್ತುಂಬ್ರಿಯಾ ವಿಶ್ವವಿದ್ಯಾಲಯದ ಭೂಗೋಳ ಮತ್ತು ನೈಸರ್ಗಿಕ ವಿಜ್ಞಾನ ವಿಭಾಗದ ಮುಖ್ಯಸ್ಥರು ಹಾಗೂ ಈ ಮೌಲ್ಯಮಾಪನದ ಪ್ರಮುಖ ಸಂಶೋಧಕರಾದ ಪ್ರೊ?ರಫೆಸರ್ ಆಂಡ್ರ್ಯೂ ಶೆಫರ್ಡ್ ಈ ಮಾಹಿತಿ ನೀಡಿದ್ದಾರೆ. "ಸಮುದ್ರ ಮಟ್ಟದಲ್ಲಿನ ಮೂರು ಸೆಂಟಿಮೀಟರ್‌ಗಳ ಏರಿಕೆ ಚಿಕ್ಕದಾಗಿ ಕಾಣಿಸಬಹುದು, ಆದರೆ ಇದು ಇನ್ನೂ ಆರು ರಿಂದ ಒಂಬತ್ತು ದಶಲಕ್ಷ ಜನರನ್ನು ಕರಾವಳಿ ಪ್ರವಾಹ ಮತ್ತು ಭೂಕುಸಿತದ ಅಪಾಯಕ್ಕೆ ಸಿಲುಕಿಸುತ್ತದೆ," "ಮುಂದಿನ ದಶಕಗಳಲ್ಲಿ ಈ ಮಂಜುಗಡ್ಡೆಯ ಪದರಗಳು ಇನ್ನೂ ಹೆಚ್ಚಿನ ಪ್ರಮಾಣದ ಮಂಜುಗಡ್ಡೆಯನ್ನು ಕಳೆದುಕೊಳ್ಳಲಿರುವುದರಿಂದ, ಹವಾಮಾನ ಬದಲಾವಣೆಯಿಂದ ಬಾಧಿತವಾದ ಸಮುದಾಯಗಳನ್ನು ರಕ್ಷಿಸಲು ಜಾಗತಿಕ ಮೌಲ್ಯಮಾಪನಗಳು ಅತ್ಯಗತ್ಯವಾಗಿವೆ ಎನ್ನುವ ಅಭಿಪ್ರಾಯ ಹೊರಹಾಕಿದ್ದಾರೆ. ಸಮುದ್ರ ಮಟ್ಟ ಏರಿಕೆಯಿಂದ ಅಪಾಯಕ್ಕೆ ಸಿಲುಕುವ ತಗ್ಗು ಪ್ರದೇಶದ ಕರಾವಳಿ ಭಾಗಗಳಲ್ಲಿ ಕೋಟ್ಯಂತರ ಜನರು ವಾಸಿಸುತ್ತಿರುವುದರಿಂದ, ಹಿಮಪದರಗಳ ನಡವಳಿಕೆಯ ನಿರಂತರ ದಾಖಲೆಯನ್ನು ನಿರ್ವಹಿಸುವುದು ಅತ್ಯಂತ ಮುಖ್ಯವೆಂದು ಸಂಶೋಧಕರು ಹೇಳಿದ್ದಾರೆ

## ♦ ನಿಧಾನಗತಿ ಪ್ರವೃತ್ತಿ



2020 ಮತ್ತು 2023ರ ನಡುವೆ ಮಂಜುಗಡ್ಡೆಯ ನಷ್ಟ ತಾತ್ಕಾಲಿಕವಾಗಿ ನಿಧಾನಗೊಂಡಿದೆ ಎಂದು ಸಂಶೋಧಕರು ಗಮನಿಸಿದ್ದಾರೆ. ಆದಾಗ್ಯೂ, ಈ ಇತ್ತೀಚಿನ ಬದಲಾವಣೆಯನ್ನು ದೀರ್ಘಕಾಲೀನ ಪ್ರವೃತ್ತಿಯು ಹಿಮ್ಮುಖವಾಗಿದೆ ಎಂಬುದಕ್ಕೆ ಸಾಕ್ಷಿಯೆಂದು ಪರಿಗಣಿಸಬಾರದು ಎಂದು ಅವರು ಎಚ್ಚರಿಸಿದ್ದಾರೆ. ಅಂಟಾರ್ಟಿಕಾದಲ್ಲಿ, ಪೂರ್ವ ಭಾಗದಲ್ಲಿ ಅಸಾಮಾನ್ಯವಾಗಿ ಹೆಚ್ಚು ಹಿಮಪಾತವಾದದ್ದು, ಖಂಡದ ಇತರ ಭಾಗಗಳ ಹಿಮನದಿಗಳಿಂದ ಕಳೆದುಹೋಗುತ್ತಿದ್ದ ಮಂಜುಗಡ್ಡೆಯ ಪ್ರಮಾಣವನ್ನು ಸ್ವಲ್ಪ ಮಟ್ಟಿಗೆ ಸರಿದೂಗಿಸಿತು. ಗ್ರೀನ್‌ಲ್ಯಾಂಡ್‌ನಲ್ಲಿ, ತುಲನಾತ್ಮಕವಾಗಿ ಸೌಮ್ಯವಾಗಿದ್ದ ಕೆಲವು ಬೇಸಿಗೆಗಳು ಮೇಲ್ಮೈ ಮಂಜುಗಡ್ಡೆ ಕರಗುವಿಕೆಯನ್ನು ಕಡಿಮೆ ಮಾಡಿದೆ. ಇದರಿಂದಾಗಿ ಇತ್ತೀಚಿನ ಅವಧಿಯಲ್ಲಿ ಮಂಜುಗಡ್ಡೆ ಕರಗುವಿಕೆಯಿಂದಾಗುವ ಕೊಡುಗೆಯು ಸುಮಾರು ಅರ್ಧದಷ್ಟು ಕಡಿಮೆಯಾಗಿದೆ. ವಿಜ್ಞಾನಿಗಳು ಈ ಬೆಳವಣಿಗೆಗಳನ್ನು ಮಂಜುಗಡ್ಡೆಯ ನಷ್ಟದ ದೀರ್ಘಕಾಲೀನ ಮಾದರಿಯೊಳಗಿನ ಅಲ್ಪಾವಧಿಯ ಏರಿಳಿತಗಳು ಎಂದು ಬಣ್ಣಿಸಿದ್ದಾರೆ.



ಕೆ.ಆರ್. ನಗರ ಸಿಂಡಿಕೇಟ್ ಸೌಹಾರ್ಧ ಸಹಕಾರಿ ನಿಯಮಿತ ಇದರ ಉದ್ಘಾಟನೆಯನ್ನು ಗೌರವ ಅಧ್ಯಕ್ಷ ಮಿರ್ಲೆ ವರದರಾಜ್‌ರವರು ನೆರವೇರಿಸಿದರು. ಸಮಿತಿಯ ಅಧ್ಯಕ್ಷ ಮಂಜೇಗೌಡ, ಉಪಾಧ್ಯಕ್ಷೆ ಕೆ. ಸೌಮ್ಯ ಮತ್ತು ನಿರ್ದೇಶಕ ಮಂಡಳಿಯ ಸದಸ್ಯರು ಹಾಗೂ ನವನಗರ ಸಹಕಾರಿ ನಿಯಮಿತ ಸಂಘದ ಅಧ್ಯಕ್ಷ ಬಸಂತ್ ರವರು ಉಪಸ್ಥಿತಿದ್ದರು..



ಯಶವಂತಪುರ ಕ್ಷೇತ್ರದ ಮಂಗನಹಳ್ಳಿಯಲ್ಲಿ ಶ್ರೀ ವೀರಾಂಜನೇಯ ಸ್ವಾಮಿ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಗೌರಿ ಗಣೇಶೋತ್ಸವದಲ್ಲಿ ಗ್ರಾಮ ದೇವತೆಗಳಾದ ಶ್ರೀ ಮಹೇಶ್ವರಿ ದೇವಿ ಹಾಗೂ ಶ್ರೀ ವೀರಾಂಜನೇಯ ದೇವರುಗಳ ಪ್ರತಿಷ್ಠಾಪನೆ ಮಾಡಲಾಯಿತು. ಗ್ರಾಮದ ಹಿರಿಯರು ಮತ್ತು ಮುಖಂಡರಾದ ಮಂಜುನಾಥ್ ರವರನ್ನು ಸನ್ಮಾನಿಸಲಾಯಿತು

# ಶಂಕಿತ ಶಬ್ಬಿರ್, ಸಲಾಮೀನ್ 4 ದಿನ ಪೊಲೀಸ್ ಕಸ್ಟಡಿಗೆ

ಬೆಂಗಳೂರು, ಸೆ.29–ದೇಶದಲ್ಲಿ ವಿಧ್ವಂಸಕ ಕೃತ್ಯ ಹಾಗೂ ಭಯೋತ್ಪಾದನೆಗೆ ಪಿತೂರಿ ನಡೆಸಿದ ಆರೋಪದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಶಬ್ಬಿರ್ ಹಾಗೂ ಸಲಾಮೀನ್ ನನ್ನು ಚಿಕ್ಕಬಳ್ಳಾಪುರ ಪೊಲೀಸರು ನಾಲ್ಕು ದಿನಗಳ ಕಾಲ ಕಸ್ಟಡಿಗೆ ಪಡೆದಿದ್ದಾರೆ.

ಆರೋಪಿಗಳನ್ನು ಪೊಲೀಸರು ಚಿಕ್ಕಬಳ್ಳಾಪುರ ಜಿಲ್ಲಾ ಪ್ರಧಾನ ಸಿವಿಲ್ ಹಾಗೂ ಸಿಜೆಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಪ್ರಕರಣದ ತನಿಖೆಗಾಗಿ ಇಬ್ಬರು ಆರೋಪಿಗಳನ್ನು ಐದು ದಿನಗಳ ಕಾಲ ಪೊಲೀಸ್ ವಶಕ್ಕೆ ನೀಡುವಂತೆ ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು ನಾಲ್ಕು ದಿನಗಳ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ.

ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಶಬ್ಬಿರ್ ಹಾಗೂ ಸಲಾಮೀನ್ ಅವರನ್ನು ನಾಲ್ಕು ದಿನಗಳ ಕಾಲ ಪೊಲೀಸರು ವಿಚಾರಣೆ ನಡೆಸಲಿದ್ದಾರೆ. ಚಿಕ್ಕಬಳ್ಳಾಪುರ ಸಿಪಿಐ ರಂಜನ್ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಯಲಿದೆ.

ಬಂಧಿತರು ದೇಶದ ಮೂವರು ಪ್ರಭಾವಿ ನಾಯಕರನ್ನು ಗುರಿಯಾಗಿಸಿಕೊಂಡು ಪಿತೂರಿ ನಡೆಸಿದ್ದರು ಎಂಬ ಗಂಭೀರ ಆರೋಪ ಕೇಳಿಬಂದಿದೆ. ಅಲ್ಲದೇ, ದೇಶದಲ್ಲಿ ಭಯೋತ್ಪಾದಕ ಹಾಗೂ ವಿಧ್ವಂಸಕ ಕೃತ್ಯ ನಡೆಸುವ ಕುರಿತು ಟೆಲಿಗ್ರಾಂ ಗ್ರೂಪ್‌ನಲ್ಲಿ ಚರ್ಚೆ ನಡೆಸಿದ್ದರು ಎಂಬ ಆರೋಪವಿದೆ.

ಪ್ರಕರಣದ ತನಿಖೆ ವೇಳೆ ಆರೋಪಿಗಳಿಗೆ ಮತ್ತಷ್ಟು ವ್ಯಕ್ತಿಗಳ ಸಂಪರ್ಕವಿದೆಯೇ, ಟೆಲಿಗ್ರಾಂ ಗ್ರೂಪ್‌ನಲ್ಲಿ ನಡೆದಿರುವ ಚರ್ಚೆಗಳ ಸ್ವರೂಪವೇನು ಹಾಗೂ ಯಾವುದೇ ವಿಧ್ವಂಸಕ ಕೃತ್ಯಕ್ಕೆ ಸಂಬಂಧಿಸಿದಂತೆ ಸಿದ್ಧತೆ ನಡೆದಿತ್ತೇ ಎಂಬ ಕುರಿತು ಪೊಲೀಸರು ಮಾಹಿತಿ ಕಲೆಹಾಕಲಿದ್ದಾರೆ.

# ಬೆಂಗಳೂರಲ್ಲಿ ಇವಿ ವಾಹನಗಳ ನೋಂದಣಿ ಏರಿಕೆ

ಬೆಂಗಳೂರು,ಸೆ.29– 2026ರ ಆಗಸ್ಟ್‌ನಲ್ಲಿ ಕರ್ನಾಟಕದಲ್ಲಿ ನೋಂದಣಿಯಾದ ಒಟ್ಟು ಎಲೆಕ್ಟ್ರಿಕ್ ವಾಹನಗಳಲ್ಲಿ ಅರ್ಧಕ್ಕಿಂತ ಹೆಚ್ಚು ಬೆಂಗಳೂರಿನಲ್ಲೇ ನೋಂದಣಿಯಾಗಿದ್ದು, ರಾಜ್ಯದ ಇವಿ ಮಾರುಕಟ್ಟೆಯಲ್ಲಿ ರಾಜಧಾನಿ ತನ್ನ ಪ್ರಾಬಲ್ಯ ಮುಂದುವರಿಸಿದೆ.

ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಒಟ್ಟು 76,508 ಹೊಸ ವಾಹನಗಳು ನೋಂದಣಿಯಾಗಿದ್ದು, ಅವುಗಳಲ್ಲಿ 13,389 ಎಲೆಕ್ಟ್ರಿಕ್ ವಾಹನಗಳು. ಅಂದರೆ, ಹೊಸ ವಾಹನಗಳ ಪೈಕಿ 17.5% ಇವಿಗಳಾಗಿವೆ. ಸರಾಸರಿಯಾಗಿ ಪ್ರತಿದಿನ ಸುಮಾರು 430 ಎಲೆಕ್ಟ್ರಿಕ್ ವಾಹನಗಳು ನಗರದಲ್ಲಿ ನೋಂದಣಿಯಾಗಿವೆ.

ನೋಂದಣಿಯಾದ ಇವಿಗಳಲ್ಲಿ 9,453 ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು ಮತ್ತು 1,258 ಎಲೆಕ್ಟ್ರಿಕ್ ಕಾರುಗಳು ಸೇರಿವೆ. ಒಟ್ಟು ಇವಿಗಳಲ್ಲಿ ದ್ವಿಚಕ್ರ ವಾಹನಗಳ ಪಾಲು ಸುಮಾರು 71%, ಕಾರುಗಳ ಪಾಲು 9%. ಹೀಗಾಗಿ ಪ್ರತಿದಿನ ಸರಾಸರಿ 300 ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು ಹಾಗೂ 40 ಎಲೆಕ್ಟ್ರಿಕ್ ಕಾರುಗಳು ಬೆಂಗಳೂರಿನ ರಸ್ತೆಗಿಳಿದಿವೆ. ಉಳಿದ ಸುಮಾರು 90 ವಾಹನಗಳು ಇತರ ವರ್ಗಗಳಿಗೆ ಸೇರಿವೆ.

ಆಗಸ್ಟ್ ವೇಳೆಗೆ ಬೆಂಗಳೂರಿನಲ್ಲಿ ಸುಮಾರು 3.8 ಲಕ್ಷ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು ಮತ್ತು 46,596 ಎಲೆಕ್ಟ್ರಿಕ್ ಕಾರುಗಳು ನೋಂದಣಿಯಾಗಿದ್ದವು. ವಾಣಿಜ್ಯ ಇವಿಗಳ ಪೈಕಿ 9,922 ಮೋಟಾರ್ ಕ್ಯಾಬ್‌ಗಳು, 6,855 ಪ್ರಯಾಣಿಕರ ತ್ರಿಚಕ್ರ ವಾಹನಗಳು ಮತ್ತು 9,876 ಸರಕು ಸಾಗಣೆ ತ್ರಿಚಕ್ರ ವಾಹನಗಳು ಸೇರಿವೆ. ನಗರದ ಆರ್‌ಟಿಓಗಳಲ್ಲಿ ಒಟ್ಟು 2,009 ಎಲೆಕ್ಟ್ರಿಕ್ ಬಸ್‌ಗಳು ನೋಂದಣಿಯಾಗಿವೆ.

ಇದೇ ವೇಳೆ, 2025–26ರಲ್ಲಿ ವಾರ್ಷಿಕ ಎಲೆಕ್ಟ್ರಿಕ್ ವಾಹನ ನೋಂದಣಿ 2019–20ರ ಮಟ್ಟಕ್ಕಿಂತ 32 ಪಟ್ಟು ಹೆಚ್ಚಾಗಿದೆ ಎಂದು ಅಂಕಿಅಂಶಗಳು ಸೂಚಿಸುತ್ತವೆ.

# ಪತ್ನಿ ಕತ್ತು ಹಿಸುಕಿ ಕೊಂದ ಪತಿ

ಕಲಬುರಗಿ.ಸೆ.29– ನಗರದ ಹೊರವಲಯದ ಶರಣಶಿರಸಗಿ ಬಳಿ ಪತಿಯೇ ಪತ್ನಿಯನ್ನು ಕತ್ತು ಹಿಸುಕಿ ಕೊಲೆ ಮಾಡಿರುವ ಘಟನೆ ನಡೆದಿದೆ.

ಮೃತ ಮಹಿಳೆಯನ್ನು ರೇಣುಕಾ ಶಿಂಧೆ(38) ಎಂದು ಗುರುತಿಸಲಾಗಿದೆ. ಆಕೆಯ ಪತಿ ಸಂಜಯ್ ಕುಮಾರ್ ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ಪತ್ನಿಯ ಮೇಲೆ ಅಕ್ರಮ ಸಂಬಂಧದ ಅನುಮಾನ ಹೊಂದಿದ್ದ ಸಂಜಯ್ ಕುಮಾರ್, ಇದೇ ವಿಚಾರವಾಗಿ ಮನೆಯಲ್ಲಿ ಪದೇಪದೇ ಜಗಳ ಮಾಡುತ್ತಿದ್ದ ಎನ್ನಲಾಗಿದೆ. ನಿನ್ನೆ ಸಂಜೆ ದಂಪತಿ ನಡುವೆ ಜಗಳ ನಡೆದಿದ್ದು, ಬಳಿಕ ಸಂಜಯ್ ಕುಮಾರ್ ರೇಣುಕಾ ಅವರನ್ನು ಕತ್ತು ಹಿಸುಕಿ ಕೊಲೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ತಿಳಿದುಬಂದಿದೆ.

ಘಟನೆ ಕುರಿತು ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಆರೋಪಿಯ ಪತ್ತೆಗೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.



ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಜಿಲ್ಲಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿರುವ ಜೆ. ಶರವಣನ್‌ರವರಿಗೆ ಕಾಟನ್‌ಪೇಟೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀನಿವಾಸಮೂರ್ತಿ, ಕಾಟನ್‌ಪೇಟೆ ಕುಮಾರ್, ಸತ್ಯಪ್ಪ, ಸುಬ್ರಹ್ಮಣ್ಯರಾಜು, ರಂಗರಾಜುರವರು ಪುಷ್ಪಮಾಲೆ ಹಾಕಿ ಅಭಿನಂದಿಸಿದರು.

# ಶಂಕರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಅತ್ಯುತ್ತಮ: ಖಾದರ್

ಬೆಂಗಳೂರು, ಸೆ. 29– ಅಪಾರ ಮಾನವೀಯತೆ, ಪ್ರೀತಿ ಹಾಗೂ ಸಾಮಾಜಿಕಬದ್ಧತೆಯಿಂದ ರೋಗಿಗಳಿಗೆ ಅತ್ಯುನ್ನತ ಚಿಕಿತ್ಸೆ ನೀಡುತ್ತಿರುವ ಕೆಲವು ಆಸ್ಪತ್ರೆಗಳಲ್ಲಿ ಶಂಕರ ಆಸ್ಪತ್ರೆ ಪ್ರಮುಖವಾದದ್ದು. ಕಳೆದ 15 ವರ್ಷಗಳಿಂದ ಎಷ್ಟೇ ಸವಾಲುಗಳು ಎದುರಾದರೂ, ಸಂಸ್ಥೆಯು ತೋರಿದ ಛಲ, ಬದ್ಧತೆ ಮತ್ತು ದೂರದೃಷ್ಟಿ ಇಂದಿನ ಯುವಜನತೆಗೆ ದೊಡ್ಡ ಮಾದರಿಯಾಗಿದೆ. ಈ ಸಂಸ್ಥೆಗೆ ದಾನಿಗಳು ನೀಡುವ ಪ್ರತಿಯೊಂದು ಪೈಸೆಯೂ ಪಾರದರ್ಶಕವಾಗಿ ಈ ನಾಡಿನ ಬಡ ಜನಸಾಮಾನ್ಯರ ಚಿಕಿತ್ಸೆಗೆ ತಲುಪುತ್ತಿರುವುದು ಅತ್ಯಂತ ಶ್ಲಾಘನೀಯ. ಒಂದು ಆಸ್ಪತ್ರೆಯನ್ನು ಕೇವಲ ಚಿಕಿತ್ಸಾ ಕೇಂದ್ರವಾಗಿ



ಮಾತ್ರವಲ್ಲದೆ, ಸಮಾಜಮುಖಿ ಮಾನವೀಯತೆಯ ನೆಲೆಯಲ್ಲಿ ಹೇಗೆ ಮುನ್ನಡೆಸಬೇಕು ಎಂಬುದಕ್ಕೆ ಶಂಕರ ಆಸ್ಪತ್ರೆ ಇಡೀ ದೇಶಕ್ಕೇ ಮಾದರಿಯಾಗಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ 15ನೇ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಯ ಮುಖ್ಯಸ್ಥರಾದ ಡಾ. ಬಿ. ಎಸ್. ಶ್ರೀನಾಥ್ ಮಾತನಾಡುತ್ತಾ ಕಳೆದ ಹದಿನೈದು ವರ್ಷಗಳಿಂದ ಸಂಸ್ಥೆ ಬೆಳೆದು ಬಂದ ಹಾದಿ ಮೆಲುಕು ಹಾಕಿದರು. ಜೊತೆಗೆ ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ಸೇವೆಯನ್ನು ತಮ್ಮ ಸಂಸ್ಥೆಯ ವತಿಯಿಂದ ನೀಡುವ ಉದ್ದೇಶ ಇದೆ ಎಂದು ಹೇಳಿದರು.

ಈ ಸಮಾರಂಭದಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಡಾ. ಬಿ. ಎಸ್. ಶ್ರೀನಾಥ್, ಟ್ರಸ್ಟಿಗಳಾದ ತೇಜಸ್ವಿನಿ ಅನಂತ್ ಕುಮಾರ್, ನಾಗರಾಜ್, ಆಸ್ಪತ್ರೆಯ ಇತರ ಗೌರವಾನ್ವಿತ ಟ್ರಸ್ಟಿಗಳು, ಹಿರಿಯ ವೈದ್ಯರು, ವಿದ್ಯಾರ್ಥಿ ಮಿತ್ರರು ಹಾಗೂ ಮಾಧ್ಯಮ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಮಾ. ಅಂತ್ಯಕ್ಕೆ 6 ಸಾವಿರ ಕೊಳವೆಬಾವಿಗೆ ಐಒಟಿ ಅಳವಡಿಕೆ

ಬೆಂಗಳೂರು, ಸೆ.29: ನಗರದ ಕೊಳವೆಬಾವಿಗಳ ನಿರ್ವಹಣೆಯನ್ನು ಮತ್ತಷ್ಟು ವೈಜ್ಞಾನಿಕ ಹಾಗೂ ದತ್ತಾಂಶ ಆಧಾರಿತವಾಗಿಸಲು ಬೆಂಗಳೂರು ಜಲಮಂಡಳಿ ಮಹತ್ವದ ಹೆಜ್ಜೆ ಇಟ್ಟಿದೆ. ಮುಂದಿನ ಮಾರ್ಚ್ ಅಂತ್ಯದೊಳಗೆ ಜಲಮಂಡಳಿ ವ್ಯಾಪ್ತಿಯ 6 ಸಾವಿರ ಕೊಳವೆಬಾವಿಗಳಿಗೆ ಐಒಟಿ (Internet of Thing) ಸಾಧನ ಅಳವಡಿಸಲು ನಿರ್ಧರಿಸಲಾಗಿದೆ.

ಜಲಮಂಡಳಿ ವ್ಯಾಪ್ತಿಯಲ್ಲಿ ಸುಮಾರು 16 ಸಾವಿರ ಕೊಳವೆಬಾವಿಗಳಿದ್ದು, ಈ ಪೈಕಿ ಈಗಾಗಲೇ 1,800 ಕೊಳವೆಬಾವಿಗಳಿಗೆ ಐಒಟಿ ಸಾಧನ ಅಳವಡಿಸಲಾಗಿದೆ. ಈ ಸಾಧನಗಳ ಮೂಲಕ ಕೊಳವೆಬಾವಿಯಲ್ಲಿನ ನೀರಿನ ಆಳ, ನೀರೆತ್ತುವಿಕೆಯ ಪ್ರಮಾಣ ಹಾಗೂ ಮೋಟಾರ್ ಮತ್ತು ಪಂಪ್ ಕಾರ್ಯನಿರ್ವಹಿಸುವ ಅವಧಿಯ ಮಾಹಿತಿಯನ್ನು ರಿಯಲ್‌ಟೈಮ್‌ನಲ್ಲಿ ಸಂಗ್ರಹಿಸಿ ಕೇಂದ್ರವ್ಯವಸ್ಥೆಗೆ ರವಾನಿಸಲಾಗುತ್ತಿದೆ.

**ಎರಡು ಡ್ಯಾಶ್‌ಬೋರ್ಡ್‌ಗಳಲ್ಲಿ ನಿಗಾ:**

ಐಒಟಿ ಮೂಲಕ ಸಂಗ್ರಹವಾಗುವ ಮಾಹಿತಿಯನ್ನು ಎರಡು ಪ್ರತ್ಯೇಕ ಡ್ಯಾಶ್‌ಬೋರ್ಡ್‌ಗಳ ಮೂಲಕ ಅಧಿಕಾರಿಗಳು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಮುಂದಿನ ಹಂತದಲ್ಲಿ ಈ ವ್ಯವಸ್ಥೆಯನ್ನು ಖಅಂಆಂ ವ್ಯವಸ್ಥೆಯೊಂದಿಗೆ ಸಂಯೋಜಿಸಲು ಜಲಮಂಡಳಿ ಮುಂದಾಗಿದೆ. ಇದರಿಂದ ಕೊಳವೆಬಾವಿಗಳ ಕಾರ್ಯನಿರ್ವಹಣೆ, ನೀರಿನ ಲಭ್ಯತೆ ಹಾಗೂ ಪಂಪ್‌ಗಳ ಸ್ಥಿತಿಗತಿ ಕುರಿತು ಮತ್ತಷ್ಟು ಸಮಗ್ರ ಮಾಹಿತಿ ಲಭ್ಯವಾಗಲಿದೆ.

ನೀರಿನ ಲಭ್ಯತೆ ಇಲ್ಲದ ಸಂದರ್ಭದಲ್ಲೂ ಮೋಟಾರ್‌ಗಳನ್ನು ನಿರಂತರವಾಗಿ ಚಾಲನೆ ಮಾಡುವುದು, ಅಗತ್ಯಕ್ಕಿಂತ ಹೆಚ್ಚು ಸಮಯ ಪಂಪ್‌ಗಳನ್ನು ಬಳಸುವುದು ಹಾಗೂ ತಾಂತ್ರಿಕ ದೋಷಗಳನ್ನು ತಡವಾಗಿ ಪತ್ತೆಹಚ್ಚುವುದರಿಂದ ಕೊಳವೆಬಾವಿಗಳ ಮೋಟಾರ್‌ಗಳು ಪದೇಪದೇ ಹಾನಿಗೊಳಗಾಗುತ್ತಿವೆ. ಇದರಿಂದ ಜಲಮಂಡಳಿಗೆ ನಿರ್ವಹಣಾ ವೆಚ್ಚವೂ ಹೆಚ್ಚುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷೆ ಡಾ. ಎನ್. ಮಂಜುಳ ತಿಳಿಸಿದ್ದಾರೆ.

**ಮೋಟಾರ್ ಹಾನಿ, ವಿದ್ಯುತ್ ಬಳಕೆ ನಿಯಂತ್ರಣ**

ಐಒಟಿ ವ್ಯವಸ್ಥೆಯಿಂದ ನೀರಿನ ಮಟ್ಟ ಕಡಿಮೆಯಾಗಿರುವ ಕೊಳವೆಬಾವಿಗಳನ್ನು ತಕ್ಷಣವೇ ಗುರುತಿಸಲು ಸಾಧ್ಯವಾಗಲಿದೆ. ಮೋಟಾರ್‌ಗಳ ಅನಗತ್ಯ ಕಾರ್ಯಾಚರಣೆಯನ್ನು ತಡೆಯುವುದರ ಜತೆಗೆ, ಮೋಟಾರ್ ಸುಡುವುದು ಸೇರಿದಂತೆ ಪದೇಪದೇ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಕಡಿಮೆ ಮಾಡಲು ಸಹಾಯವಾಗಲಿದೆ. ಇದರಿಂದ ವಿದ್ಯುತ್ ಬಳಕೆ ಹಾಗೂ ನಿರ್ವಹಣಾ ವೆಚ್ಚವನ್ನೂ ನಿಯಂತ್ರಿಸಲು ಸಾಧ್ಯವಾಗಲಿದೆ.

ಅಲ್ಲದೆ, ನಗರದ ವಿವಿಧ ಪ್ರದೇಶಗಳ ಕೊಳವೆಬಾವಿಗಳಲ್ಲಿನ ನೀರಿನ ಮಟ್ಟ ಮತ್ತು ಬಳಕೆಯ ಮಾದರಿಯ ಕುರಿತು ನಿರಂತರ ದತ್ತಾಂಶ ಲಭ್ಯವಾಗಲಿದೆ. ಈ ಮಾಹಿತಿಯ ಆಧಾರದಲ್ಲಿ ಅಂತರ್ಜಲದ ಸ್ಥಿತಿಗತಿಯನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡು, ಭವಿಷ್ಯದಲ್ಲಿ ಸುಸ್ಥಿರ ನೀರಿನ ಬಳಕೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗಲಿದೆ. ಉಳಿದ ಕೊಳವೆಬಾವಿಗಳಿಗೆ ಹಂತಹಂತವಾಗಿ ಐಒಟಿ ಸಾಧನ ಅಳವಡಿಸಲಾಗುವುದು. ಮಾರ್ಚ್ ಅಂತ್ಯದೊಳಗೆ 6 ಸಾವಿರ ಕೊಳವೆಬಾವಿಗಳನ್ನು ಈ ವ್ಯವಸ್ಥೆಯಡಿ ತರಲು ಗುರಿ ನಿಗದಿಪಡಿಸಲಾಗಿದೆ ಎಂದು ಡಾ. ಎನ್. ಮಂಜುಳ ತಿಳಿಸಿದ್ದಾರೆ.

# ಸಂಬಂಧಿಕರ ಮನೆಯಲ್ಲೇ ಚಿನ್ನ ಕದ್ದು ನಕಲಿ ಒಡವೆ ಇಟ್ಟಿದ್ದ ಆರೋಪಿ ಸೆರೆ

ಬೆಂಗಳೂರು,ಸೆ.29–ಸಂಬಂಧಿಕರ ಮನೆಯಲ್ಲೇ ಚಿನ್ನಾಭರಣ ಕಳವು ಮಾಡಿ, ಅದರ ಬದಲಿಗೆ ನಕಲಿ ಒಡವೆಗಳನ್ನಿಟ್ಟು ಪರಾರಿಯಾಗಿದ್ದ ಆರೋಪಿಯನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಹೊಸನಗರ ಮೂಲದ ಅಶ್ವಥ್ ಕೆ.ಹೆಚ್. ಬಂಧಿತ ಆರೋಪಿ. ಆತನಿಂದ 8.40 ಲಕ್ಷ ಮೌಲ್ಯದ 84.3 ಗ್ರಾಂ ಚಿನ್ನಾಭರಣ ಹಾಗೂ 8 ಸಾವಿರ ನಗದನ್ನು ವಶಕ್ಕೆ ಪಡೆಯಲಾಗಿದೆ.

ಕೆಂಗೇರಿಯ ಕೈಲಾಶ್ ಬಿಡಿಎ ಅಪಾರ್ಟ್‌ಮೆಂಟ್‌ನ ಪ್ಲಾಟ್‌ನಲ್ಲಿ ವಾಸವಿರುವ ಅಶ್ವಥ್ ಎಸ್. ಎಂಬುವರ ಮನೆಯಲ್ಲಿ ಕಳ್ಳತನ ನಡೆದಿತ್ತು. ದೂರುದಾರರ ಪತ್ನಿಗೆ ದೂರದ ಸಂಬಂಧಿಯಾಗಿದ್ದ ಅಶ್ವಥ್ ಕೆ.ಹೆಚ್. ಆಗಾಗ್ಗೆ ಅವರ ಮನೆಗೆ ಬಂದು ಹೋಗುತ್ತಿದ್ದ. ಹೀಗಾಗಿ ಮನೆಯವರೊಂದಿಗೆ ಆತ್ಮೀಯವಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಇತ್ತೀಚೆಗೆ ಲಕ್ಷ್ಮೀ ಪೂಜೆಗೆ ಮನೆಗೆ ಬಂದಿದ್ದ ವೇಳೆ ದೇವರಿಗೆ ಹಾಕಲಾಗಿದ್ದ ಚಿನ್ನಾಭರಣಗಳನ್ನು ಗಮನಿಸಿದ್ದ ಆರೋಪಿ, ಕಳ್ಳತನಕ್ಕೆ ಸಂಚು ರೂಪಿಸಿದ್ದ ಎನ್ನಲಾಗಿದೆ.

ಕೆಲ ದಿನಗಳ ಬಳಿಕ ಕೌಟುಂಬಿಕ ಕಾರ್ಯಕ್ರಮವೊಂದಕ್ಕೆ ಮನೆಯವರೆಲ್ಲರೂ ಊರಿಗೆ ತೆರಳಿದ್ದರು. ಇದೇ ಸಂದರ್ಭವನ್ನು ಬಳಸಿಕೊಂಡ ಆರೋಪಿ, ನಕಲಿ ಕೀ ತಯಾರಿಸುವ ವ್ಯಕ್ತಿಯನ್ನು ಕರೆತಂದು, 'ಇದು ನನ್ನದೇ ಮನೆ, ಕೀ ಕಳೆದುಹೋಗಿದೆ' ಎಂದು ನಂಬಿಸಿ ಬಾಗಿಲು ತೆರೆಸಿದ್ದಾನೆ. ಬಳಿಕ ತಾನು ತಂದಿದ್ದ ನಕಲಿ ಆಭರಣಗಳನ್ನು ಮನೆಯಲ್ಲಿಟ್ಟು, ಅಸಲಿ ಚಿನ್ನಾಭರಣಗಳನ್ನು ಕದ್ದು ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

**84.3 ಗ್ರಾಂ ಚಿನ್ನಾಭರಣ ಕಳವು:**

ಮನೆಯವರು ಊರಿನಿಂದ ವಾಪಸ್ ಬಂದ ಬಳಿಕ ಪೂಜೆ ತಟ್ಟೆಯಲ್ಲಿದ್ದ 8 ಸಾವಿರ ನಗದು ಕಾಣೆಯಾಗಿರುವುದು ಗಮನಕ್ಕೆ ಬಂದಿದೆ. ಅನುಮಾನಗೊಂಡು ಮನೆಯ ಬೀರುವಿನಲ್ಲಿದ್ದ ಆಭರಣಗಳನ್ನು ಪರಿಶೀಲಿಸಿದಾಗ, ಅಸಲಿ ಚಿನ್ನಾಭರಣಗಳ ಬದಲಿಗೆ ನಕಲಿ ಒಡವೆಗಳನ್ನು ಇಡಲಾಗಿರುವುದು ಪತ್ತೆಯಾಗಿದೆ.

ಕಳವಾಗಿದ್ದ ವಸ್ತುಗಳಲ್ಲಿ 17.3 ಗ್ರಾಂ ತೂಕದ ಚಿನ್ನದ ರೋಪ್ ಚೈನ್, 45 ಗ್ರಾಂ ತೂಕದ ಹವಳದ ಚಿನ್ನದ ಸರ ಹಾಗೂ 22 ಗ್ರಾಂ ತೂಕದ ಎರಡು ಚಿನ್ನದ ಬಳೆಗಳು ಸೇರಿವೆ. ಒಟ್ಟು 84.3 ಗ್ರಾಂ ಚಿನ್ನಾಭರಣದ ಮೌಲ್ಯ 8.40 ಲಕ್ಷ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಮನೆ ಮಾಲೀಕ ಅಶ್ವಥ್ ಎಸ್. ಅವರು ಕೆಂಗೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ತನಿಖೆ ನಡೆಸಿ ಆರೋಪಿ ಅಶ್ವಥ್ ಕೆ.ಹೆಚ್.ನನ್ನು ಬಂಧಿಸಿದ್ದಾರೆ. ಕಳವಾಗಿದ್ದ ಚಿನ್ನಾಭರಣ ಹಾಗೂ ನಗದನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.




ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಕುರಿತು ಕೇರಳದ ಮಾಜಿ ಮುಖ್ಯ ಕಾರ್ಯದರ್ಶಿ, ನಿವೃತ್ತ ಐಎಎಸ್ ಅಧಿಕಾರಿ ಜಿ.ಜಿ. ಥಾಮ್ಸನ್ ನೀಡಿರುವ ಹೇಳಿಕೆ ಬಗ್ಗೆ ಕ್ರಮ ಕೈಗೊಳ್ಳಲು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರು ಲೋಕಭವನದ ಬಳಿ ಅಧಿಕಾರಿ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಪುಟ್ಟರಾಜು, ಕುಶಾಲ್ ಸೆಲ್ವರಾಜ್, ಮಾಧವ ಹನೂರು ಮತ್ತಿತರರು ಇದ್ದರು.

**CHANGE OF NAME**

I, **KHAMAR PASHA,** R/a No. 17, 6th Cross, Amarjyothi Layout, Near Alpha Kids School Thanisandra, Dr SRK Post, Bengaluru-560077. have changed name to **ISMAIL SHARIFF,** vide Affidavit dated 26-09-2026. Sworn before Notary **SUMITHRA.N,** Bengaluru.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**AFFIDAVIT**

I, **J.SRINIVAS** ALIAS **VIJAYA NARASHIMULU** S/o **K.N.KONDAIAH,** aged 51 years, R/at No.99, Andhra Colony, Viveknagar Ward No:115, Bengaluru-560047. hereby state that **J.SRINIVAS** and **VIJAYA NARASHIMULU,** both the names belongs to one and the same person. vide affidavit dated:28-09-2026. Sworn before Advocate **S.BALU,** Bangalore.




ಕನ್ನಡ ಸಾಹಿತ್ಯ ಪರಿಷತ್ತು ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರ ಎರಡನೇ ಸಾಹಿತ್ಯ ಸಮ್ಮೇಳನ ಹಾಗೂ ಶಿಕ್ಷಣ ಕ್ಷೇತ್ರ ಸಾಧಕರುಗಳಿಗೆ ಗೌರವ ಪುರಸ್ಕಾರ ಹಾಗೂ ಕನ್ನಡ ಭಾಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಲಿಟ್ಲ್ ಏಂಜಲ್ಸ್ ಶಾಲೆಯ 2025–26 ನೇ ಸಾಲಿನ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ದುರ್ಗೈ ಅಶ್ವಿನ್, ಸೃಷ್ಟಿ ಕಂಚನ್, ಪ್ರೀತಿ, ಕೃತಿಕಾ, ಪ್ರೀತಂ ,ಮೊಹಮ್ಮದ್ ಅದ್ನಾನ್ ಬೆನಿಟ,ಈಷಿತ, ಮರ್ಲಿನ್ ,ಡ್ಯಾನಿಯಲ್ ಎಮಿಲ್ ಜೋಶ್ವಾ ಹಾಗೂ ಉತ್ತಮ ಶಿಕ್ಷಕಿ ಶ್ರೀಮತಿ ಮಂಗಳ ಹಾಗೂ ಶಾಲಾ ಪ್ರಾಂಶುಪಾಲರಾದ ಗ್ಲೋರಿ ವಿಕ್ಟರ್ ಅವರಿಗೆ ಸರ್ವಜ್ಞಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು

# ಎಫ್‌ಬಿಐ '10 ಮೋಸ್ಟ್ ವಾಂಟೆಡ್' ಪಟ್ಟಿಗೆ ಗೋಲ್ಡಿ ಬ್ರಾರ್

ವಾಷಿಂಗ್ಟನ್, ಸೆ. 29:ಹಲವು ಪ್ರಕರಣಗಳಲ್ಲಿ ಬೇಕಾಗಿರುವ ಗ್ಯಾಂಗ್‌ಸ್ಟರ್ ಸತೀಂದರ್‌ಜೀತ್ ಸಿಂಗ್ ಅಲಿಯಾಸ್ ಗೋಲ್ಡಿ ಬ್ರಾರ್‌ನನ್ನು ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ತನ್ನ '10 ಮೋಸ್ಟ್ ವಾಂಟೆಡ್ ಫ್ಯುಗಿಟಿವ್ಸ್' ಪಟ್ಟಿಗೆ ಸೇರಿಸಿದೆ. ಆತನ ಬಂಧನಕ್ಕೆ ಕಾರಣವಾಗುವ ವಿಶ್ವಾಸಾರ್ಹ ಮಾಹಿತಿ ನೀಡುವವರಿಗೆ 10 ಲಕ್ಷ ಅಮೆರಿಕನ್ ಡಾಲರ್‌ವರೆಗೆ ಬಹುಮಾನ ಘೋಷಿಸಲಾಗಿದೆ.

ಎಫ್‌ಬಿಐ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ಲಾರೆನ್ಸ್ ಬಿಷ್ಣೋಯಿ ಸಂಘಟಿತ ಅಪರಾಧ ಗುಂಪಿನ ಉತ್ತರ ಅಮೆರಿಕದ ನಾಯಕನಾಗಿ ಸತೀಂದರ್‌ಜೀತ್ ಸಿಂಗ್ ಕಾರ್ಯನಿರ್ವಹಿಸುತ್ತಿದ್ದಾನೆ ಎಂದು ಆರೋಪಿಸಲಾಗಿದೆ. ಈ ಸಂಘಟನೆ ಅಮೆರಿಕ ಮತ್ತು ಕೆನಡಾದಲ್ಲಿ ವಿವಿಧ ಹಿಂಸಾತ್ಮಕ ಅಪರಾಧಗಳಲ್ಲಿ ತೊಡಗಿದೆ ಎಂದು ಎಫ್‌ಬಿಐ ಆರೋಪಿಸಿದೆ.

ಎಫ್‌ಬಿಐ ಪ್ರಕಾರ, ಸಂಘಟಿತ ಅಪರಾಧ ಜಾಲವು ರಾಜಕೀಯ ಮತ್ತು ಧಾರ್ಮಿಕ ಮುಖಂಡರ ಹತ್ಯೆ, ಗುಂಡಿನ ದಾಳಿ, ಕೊಲೆ, ಅಪಹರಣ, ಸುಲಿಗೆ, ಹಲ್ಲೆ ಸೇರಿದಂತೆ ಮಾದಕ ವಸ್ತುಗಳು ಮತ್ತು ಶಸ್ತ್ರಾಸ್ತ್ರಗಳ ಅಕ್ರಮ ಸಾಗಣೆಯಂತಹ ಗಂಭೀರ ಅಪರಾಧಗಳಲ್ಲಿ ತೊಡಗಿದೆ ಎಂದು ಆರೋಪಿಸಲಾಗಿದೆ.

ಗೋಲ್ಡಿ ಬ್ರಾರ್ ಸದ್ಯ ಅಮೆರಿಕದಲ್ಲೇ ನೆಲೆಸಿದ್ದು, ಉತ್ತರ ಅಮೆರಿಕಾದಾದ್ಯಂತ ಸಂಘಟನೆಯ ಕಾರ್ಯಾಚರಣೆಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದಾನೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**
ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ ಕ್ಯಾಂಪಸ್, ಬೆಂಗಳೂರು–560065.

ಸಂಖ್ಯೆ: ಆಅ/ನವಿ/ಟೆಂಡರ್/ಸಕಾ–17/2026–27 ದಿನಾಂಕ: 28–09–2026

**ಟೆಂಡರ್ ಪ್ರಕಟಣೆ**

ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಸಿವಿಲ್, ವಿದ್ಯುತ್ ಮತ್ತು ಇಂಟರ್‌ನೆಟ್ ಸೌಲಭ್ಯ ಒದಗಿಸುವ ಕೆಲಸಗಳಿಗಾಗಿ ಅನುಭವಿ ಗುತ್ತಿಗೆದಾರರು/ಪ್ರತಿಷ್ಠಿತ ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಲಾಗಿದೆ.

ವಿವರ: ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ: 01–10–2026 ಸಮಯ ಮಧ್ಯಾಹ್ನ 12.30ಕ್ಕೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01–10–2026 ಸಮಯ ಮಧ್ಯಾಹ್ನ 2.30 ರವರೆಗೆ ಹಾಗೂ ಹಣಕಾಸಿನ ಬಿಡ್ಡನ್ನು ದಿನಾಂಕ: 01–10–2026 ರಂದು ಮಧ್ಯಾಹ್ನ 3.00 ಗಂಟೆಗೆ ತೆರೆಯಲಾಗುವುದು.

ಸೂಚನೆ: 1) ಯಾವುದೇ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. 2) ಹೆಚ್ಚಿನ ಮಾಹಿತಿಗಾಗಿ **www.uasbangalore.edu.in** ವೆಬ್‌ಸೈಟ್‌ನಲ್ಲಿ ಇದನ್ನು ಪ್ರಕಟಿಸಲಾಗಿದ್ದು ಹಾಗೂ ಆಸ್ತಿ ಅಧಿಕಾರಿಗಳ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಆಸ್ತಿ ಅಧಿಕಾರಿಗಳು

## ಅಂಚೆಪಾಳ್ಯದಲ್ಲಿ ಕಾಣಿಸಿಕೊಂಡಿದ್ದ ಒಂಟಿ ಸಲಗ ವಾಪಸ್ ಕಾಡಿಗೆ

ಬೆಂಗಳೂರು: ಸೆ.29–ಮೈಸೂರು ರಸ್ತೆಯ ಅಂಚೆಪಾಳ್ಯದಲ್ಲಿ ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕ ಮೂಡಿಸಿದ್ದ ಒಂಟಿ ಸಲಗವನ್ನು ಅರಣ್ಯ ಇಲಾಖೆ ಯಶಸ್ವಿಯಾಗಿ ಕಾಡಿನತ್ತ ಹಿಮ್ಮೆಟ್ಟಿಸಿದೆ. ಬಿಎಂ ಕಾವಲು ಮೀಸಲು ಅರಣ್ಯ ಪ್ರದೇಶದಲ್ಲಿ ಅಡಗಿದ್ದ ಆನೆಯನ್ನು ಪತ್ತೆಹಚ್ಚಿ, ಎಲಿಫೆಂಟ್ ಕಾರಿಡಾರ್ ಮೂಲಕ ಬನ್ನೇರುಘಟ್ಟ ಅರಣ್ಯದತ್ತ ಕಳುಹಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ನಿನ್ನೆ ಬೆಳಗ್ಗೆ ಅಂಚೆಪಾಳ್ಯದಲ್ಲಿ ವಾಕಿಂಗ್‌ಗೆ ತೆರಳಿದ್ದ ವ್ಯಕ್ತಿಯೊಬ್ಬರ ಮೇಲೆ ಆನೆ ದಾಳಿ ನಡೆಸಿದ್ದು, ಚಿಕಿತ್ಸೆ ಫಲಿಸದೆ ನಾಗರಾಜು (60) ಮೃತಪಟ್ಟಿದ್ದರು. ಈ ಘಟನೆ ಬಳಿಕ ಸ್ಥಳೀಯರಲ್ಲಿ ಆತಂಕ ಹೆಚ್ಚಾಗಿತ್ತು. ಆನೆಯನ್ನು ಕೂಡಲೇ ಸೆರೆಹಿಡಿಯಬೇಕು ಹಾಗೂ ಜನರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು.

**ಥರ್ಮಲ್ ಡ್ರೋನ್ ಮೂಲಕ ಕಾರ್ಯಾಚರಣೆ:**

ಘಟನೆ ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು ಆನೆಯ ಚಲನವಲನದ ಮೇಲೆ ನಿಗಾ ಇರಿಸಿದ್ದರು. ತಡರಾತ್ರಿ ಡಿಸಿಎಫ್ ಚಕ್ರಪಾಣಿ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದ್ದು, ಎರಡು ಥರ್ಮಲ್ ಡ್ರೋನ್‌ಗಳನ್ನು ಬಳಸಲಾಗಿದೆ. 100ಕ್ಕೂ ಅಧಿಕ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಬಿಎಂ ಕಾವಲು ಅರಣ್ಯ ಪ್ರದೇಶದಲ್ಲಿ ಅಡಗಿದ್ದ ಒಂಟಿ ಸಲಗದ ಜಾಡನ್ನು ಥರ್ಮಲ್ ಡ್ರೋನ್ ಮೂಲಕ ಪತ್ತೆಹಚ್ಚಿ, ಅದರ ಚಲನವಲನವನ್ನು ಅಧಿಕಾರಿಗಳು ಗಮನಿಸಿದರು. ಆನೆ ಓಡಾಡುತ್ತಿದ್ದ ದೃಶ್ಯಗಳನ್ನೂ ಡ್ರೋನ್ ಮೂಲಕ ಸೆರೆಹಿಡಿಯಲಾಗಿದೆ.

**ಎಲಿಫೆಂಟ್ ಕಾರಿಡಾರ್ ಮೂಲಕ ಬನ್ನೇರುಘಟ್ಟಕ್ಕೆ**

ಬಿಎಂ ಕಾವಲು ಅರಣ್ಯದಿಂದ ಟಿಕೆ ಫಾರೆಸ್ಟ್ ಭಾಗದ ಮೂಲಕ ಆನೆ ಸಂಚರಿಸುವ ಪಥವನ್ನು ಗುರುತಿಸಿದ ಅಧಿಕಾರಿಗಳು, ಆನೆಯನ್ನು ಅದೇ ಮಾರ್ಗದಲ್ಲಿ ಮುಂದಕ್ಕೆ ಸಾಗುವಂತೆ ಮಾಡಿ ಬನ್ನೇರುಘಟ್ಟ ಅರಣ್ಯದತ್ತ ಹಿಮ್ಮೆಟ್ಟಿಸಿದ್ದಾರೆ.

ಅರಣ್ಯ ಪ್ರದೇಶದೊಳಗೆ ಆನೆ ಸಾಗಿದ ಬಳಿಕ ಅಧಿಕಾರಿಗಳು ಅದರ ಚಲನವಲನದ ಮೇಲೆ ನಿಗಾ ಮುಂದುವರಿಸಿದ್ದಾರೆ. ಸದ್ಯ ಆನೆ ಜನವಸತಿ ಪ್ರದೇಶದಿಂದ ದೂರವಾಗಿ ಕಾಡಿನತ್ತ ತೆರಳಿರುವುದರಿಂದ ಅಂಚೆಪಾಳ್ಯ ಹಾಗೂ ಸುತ್ತಮುತ್ತಲಿನ ನಿವಾಸಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ಆನೆ ಮತ್ತೆ ಜನವಸತಿ ಪ್ರದೇಶದತ್ತ ಬಾರದಂತೆ ಅರಣ್ಯ ಇಲಾಖೆ ಸಿಬ್ಬಂದಿ ನಿಗಾ ಇರಿಸಿದ್ದು, ಸ್ಥಳೀಯರ ಸುರಕ್ಷತೆಗಾಗಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಮುಂದುವರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮೈಸೂರು ದಸರಾ: 22 ಸಚಿವರ ನೇಮಕಕ್ಕೆ ಛಲವಾದಿ ವ್ಯಂಗ್ಯ

ಮೈಸೂರು, ಸೆ.29 – ಮೈಸೂರು ದಸರಾ ಯಶಸ್ವಿಯಾಗಿ ನಡೆಸುವ ಉದ್ದೇಶದಿಂದ 22 ಸಚಿವರನ್ನು ನೇಮಿಸುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ಧಾರವನ್ನು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರಾಗಿ ಯತೀಂದ್ರ ಸಿದ್ದರಾಮಯ್ಯನವರೇ ಯಾವ ಅಧಿಕಾರವಿದೆ.ಯತೀಂದ್ರ ಸಿದ್ದರಾಮಯ್ಯ ವಯಸ್ಸು ಕಡಿಮೆ ಎಂಬ ಕಾರಣಕ್ಕೆ ಸಚಿವರನ್ನು ದಸರಾ ಉಸ್ತುವಾರಿ ಕಾರ್ಯಕ್ಕೆ ನಿಯೋಜಿಸಲಾಗಿದೆಯೇ ಎಂದು ವ್ಯಂಗ್ಯವಾಡಿದರು.

ಯತೀಂದ್ರ ಸಿದ್ದರಾಮಯ್ಯಗೆ ತಮ್ಮ ಹೊಸ ಮನೆಯಲ್ಲಿ ಸಾಮಾನುಗಳನ್ನು ಜೋಡಿಸಿಕೊಳ್ಳಲೂ ಸಮಯವಿಲ್ಲ. ಹೀಗಾಗಿ ಮಾವುತರ ಉಪಹಾರ ಕೂಟಕ್ಕೆ ತಡವಾಗಿ ಬಂದೆ ಎಂದು ಅವರೇ ಹೇಳಿದ್ದಾರೆ.

ಅವರು ಮೊದಲು ಮನೆಯ ಸಾಮಾನುಗಳನ್ನು ಜೋಡಿಸಿಕೊಳ್ಳಲಿ ಎಂದು ಛಲವಾದಿ ನಾರಾಯಣ ಸ್ವಾಮಿ ಟೀಕಿಸಿದರು.

ದೇಶದಲ್ಲಿ ನಡೆಯುತ್ತಿರುವ ಎಸ್ ಐಆರ್‌ಕುರಿತು ಕಾಂಗ್ರೆಸ್ ಮಾಡುತ್ತಿರುವ ವಿರೋಧವನ್ನು ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಎಸ್‌ಐಆರ್ ಯಾವುದೇ ಪಕ್ಷಕ್ಕೆ ಸಂಬಂಧಿಸಿದ ವಿಚಾರವಲ್ಲ.ದೇಶದ ಚುನಾವಣಾ ವ್ಯವಸ್ಥೆಗೆ ಸಂಬಂಧಿಸಿದ ವಿಷಯ ಎಂದು ಹೇಳಿದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾಗಿದ್ದರೂ ಸರ್ಕಾರ ಸಮರ್ಪಕವಾಗಿ ಸ್ಪಂದಿಸಿಲ್ಲ.ರೈತರಿಗೆ ಪ್ರತಿ ಎಕರೆಗೆ 25 ಸಾವಿರ ಪರಿಹಾರ ನೀಡಬೇಕು ಎಂದು ಬಿಜೆಪಿ ಒತ್ತಾಯಿಸಿತ್ತು. ಆದರೆ ಸರ್ಕಾರ 2,500 ಮಾತ್ರ ಪರಿಹಾರ ಘೋಷಿಸಿದೆ ಎಂದು ಹೇಳಿದರು.

ವೀರಶೈವ ಲಿಂಗಾಯತ ಸ್ವಾಮೀಜಿಗಳ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ್ದರೆನ್ನಲಾದ ಹೇಳಿಕೆಗೆ ಛಲವಾದಿ ನಾರಾಯಣಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯದಲ್ಲಿರುವ ಮಠಗಳ ಸಂಖ್ಯೆ ಎಷ್ಟೇ ಇರಲಿ, ಸ್ವಾಮೀಜಿಗಳು ಸರ್ಕಾರದ ಸೇವೆ ಮಾಡಬೇಕು ಎಂಬ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ.ಈ ಹೇಳಿಕೆಗಾಗಿ ಮುಖ್ಯಮಂತ್ರಿ ಎಲ್ಲ ಸ್ವಾಮೀಜಿಗಳ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ವಿರುದ್ಧವೂ ಛಲವಾದಿ ನಾರಾಯಣ ಸ್ವಾಮಿ ವಾಗ್ದಾಳಿ ನಡೆಸಿದರು.

ಗುಜರಾತ್‌ನಲ್ಲಿ ಕಾಂಗ್ರೆಸ್ ದುರ್ಬಲವಾಗಲು ಬಿ.ಕೆ. ಹರಿಪ್ರಸಾದ್ ಕೊಡುಗೆ ಇದೆ.ರಾಜ್ಯದಲ್ಲಿಯೂ ಕಾಂಗ್ರೆಸ್ ಶೀಘ್ರದಲ್ಲೇ ದುರ್ಬಲವಾಗಲಿದೆ ಎಂದು ಟೀಕಿಸಿದರು.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧವೂ ಛಲವಾದಿ ನಾರಾಯಣ ಸ್ವಾಮಿ ಹಲವು ಆರೋಪಗಳನ್ನು ಮಾಡಿದರು.

ಆರ್‌ಎಸ್‌ಎಸ್ ಕುರಿತು ಗೃಹ ಸಚಿವರು ಪದೇಪದೆ ಮಾತನಾಡುವುದನ್ನು ಟೀಕಿಸಿದ ಅವರು, ಬೇರೆಯವರ ಚಡ್ಡಿಯ ಬಗ್ಗೆ ಚಿಂತೆ ಮಾಡುವ ಬದಲು ತಮ್ಮ ಚಡ್ಡಿಯ ಬಗ್ಗೆ ನೋಡಿಕೊಳ್ಳಲಿ.

ಗೃಹ ಖಾತೆಯ ಬದಲು ಪ್ರಿಯಾಂಕ್ ಖರ್ಗೆಗೆ ಆರ್‌ಎಸ್‌ಎಸ್ ಖಾತೆ ನೀಡಬೇಕು ಎಂದು ಟೀಕಿಸಿದರು.



## ಏಕದಿನ ವಿಶ್ವಕಪ್ ಕ್ರಿಕೆಟ್ ಅ.1 ವೇಳಾಪಟ್ಟಿ ಬಿಡುಗಡೆ

ನವದೆಹಲಿ,ಸೆ.29–ಏಕದಿನ ವಿಶ್ವಕಪ್ ವೇಳಾಪಟ್ಟಿಯ ಕುರಿತು ಪ್ರಮುಖ ನವೀಕರಣವೊಂದು ಹೊರಬಿದ್ದಿದ್ದು, ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಅಕ್ಟೋಬರ್ 1 ರ ಗುರುವಾರ ಪಂದ್ಯಾವಳಿಯ ಅಧಿಕೃತ ವೇಳಾಪಟ್ಟಿಯನ್ನು ಪ್ರಕಟಿಸುವ ನಿರೀಕ್ಷೆಯಿದೆ.

ಈ ಬಾರಿಯ ವಿಶ್ವಕಪ್ ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ಮೂರು ಆಫ್ರಿಕನ್ ದೇಶಗಳು ಜಂಟಿಯಾಗಿ ಆಯೋಜಿಸುತ್ತಿವೆ.

ಪಂದ್ಯಾವಳಿಯು ಅಕ್ಟೋಬರ್ 2 ರಿಂದ ಪ್ರಾರಂಭವಾಗಿ ನವೆಂಬರ್ 21 ರಂದು ಫೈನಲ್ ಪಂದ್ಯದೊಂದಿಗೆ ಮುಕ್ತಾಯಗೊಳ್ಳುವ ಸಾಧ್ಯತೆಯಿದೆ, ಆದರೆ ಅಧಿಕೃತ ಪ್ರಕಟಣೆಯ ನಂತರವೇ ಅಂತಿಮ ದಿನಾಂಕಗಳು ಮತ್ತು ಸ್ಥಳಗಳ ಸ್ಪಷ್ಟ ಚಿತ್ರಣ ಸಿಗಲಿದೆ.

ಈ ಬಾರಿ ಪಂದ್ಯಾವಳಿಯ ಸ್ವರೂಪ ಬದಲಾಗಿದ್ದು, ಒಟ್ಟು 14 ತಂಡಗಳು ಭಾಗವಹಿಸಲಿವೆ. ಇದರಲ್ಲಿ 10 ತಂಡಗಳ ಸ್ಥಾನಗಳು ಸೆಪ್ಟೆಂಬರ್ 30 ರೊಳಗೆ ಅಂತಿಮಗೊಳ್ಳಲಿದ್ದು, ಆತಿಥೇಯ ರಾಷ್ಟ್ರಗಳಾದ ದಕ್ಷಿಣ ಆಫ್ರಿಕಾ ಮತ್ತು ಜಿಂಬಾಬ್ವೆ ನೇರ ಅರ್ಹತೆ ಪಡೆದುಕೊಂಡಿವೆ.

ಮೂರನೇ ಆತಿಥೇಯ ದೇಶವಾದ ನಮೀಬಿಯಾ ಇನ್ನೂ ತನ್ನ ಅರ್ಹತೆಯನ್ನು ದೃಢಪಡಿಸಿಕೊಂಡಿಲ್ಲ. ಐಸಿಸಿ ಏಕದಿನ ಶ್ರೇಯಾಂಕದ ಆಧಾರದ ಮೇಲೆ ಭಾರತ, ನ್ಯೂಜಿಲೆಂಡ್, ಪಾಕಿಸ್ತಾನ, ಆಸ್ಟ್ರೇಲಿಯಾ, ಇಂಗ್ಲೆಂಡ್, ಶ್ರೀಲಂಕಾ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶ ತಂಡಗಳು ನೇರ ಅರ್ಹತೆಯ ಪೈಪೋಟಿಯಲ್ಲಿವೆ.

ಶ್ರೇಯಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ಈಗಾಗಲೇ ಆತಿಥೇಯರಾಗಿ ಅರ್ಹತೆ ಪಡೆದಿರುವುದರಿಂದ 9ನೇ ಸ್ಥಾನದಲ್ಲಿರುವ ಬಾಂಗ್ಲಾದೇಶಕ್ಕೂ ನೇರ ಅರ್ಹತೆ ಸಿಗುವ ಸಾಧ್ಯತೆಯಿದೆ.

ಮತ್ತೊಂದೆಡೆ, ವೆಸ್ಟ್ ಇಂಡೀಸ್ ತಂಡವು ಅರ್ಹತಾ ಪಂದ್ಯಗಳ ಮೂಲಕವೇ ವಿಶ್ವಕಪ್ ಪ್ರವೇಶಿಸಬೇಕಾಗಿದೆ. ಉಳಿದ ನಾಲ್ಕು ತಂಡಗಳು ಅರ್ಹತಾ ಸುತ್ತಿನ ಪಂದ್ಯಗಳ ಮೂಲಕ ಮುಖ್ಯ ಪಂದ್ಯಾವಳಿಗೆ ಆಯ್ಕೆಯಾಗಲಿದ್ದು, ಕ್ರಿಕೆಟ್ ಪ್ರೇಮಿಗಳು ಈಗ ಐಸಿಸಿಯ ಅಧಿಕೃತ ವೇಳಾಪಟ್ಟಿಯ ಪ್ರಕಟಣೆಗಾಗಿ ಕಾತುರದಿಂದ ಕಾಯುತ್ತಿದ್ದಾರೆ.



## ಬಿಡಿಎ ಕಾರ್ಯಾಚರಣೆ: 13.5 ಕೋಟಿ ಸ್ವತ್ತು ವಶ

ಬೆಂಗಳೂರು, ಸೆ. 29– ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಜೆ.ಪಿ.ನಗರ 9ನೇ ಹಂತ, 5ನೇ 'ಬಿ' ಬ್ಯಾಕ್ ಬಡಾವಣೆಯ ಆಲಹಳ್ಳಿ ಗ್ರಾಮದ ಸರ್ವೆ ನಂ.91 ರಲ್ಲಿದ್ದ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿ.ಡಿ.ಎ) ಇಂದು ಮುಂದುವರಿಸಿದೆ.

ಈ ಕಾರ್ಯಾಚರಣೆಯಲ್ಲಿ ಒಟ್ಟು ಅಂದಾಜು 12,100.00 ಚ.ಅಡಿಗಳ ವಿಸ್ತೀರ್ಣದ ಅಂದಾಜು ಮೊತ್ತ ರೂ.13.50 ಕೋಟಿ ಮೌಲ್ಯದ ಸ್ವತ್ತನ್ನು ಪ್ರಾಧಿಕಾರದ ವಶಕ್ಕೆ ಪಡೆಯಲಾಯಿತು.

ಈ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರಕ್ಷಕ ಅಧೀಕ್ಷಕರು, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತ ದಳ, ವಲಯ ಆಯುಕ್ತರು (ದಕ್ಷಿಣ ವಲಯ) ಅಭಿಯಂತರ ಅಧಿಕಾರಿ–3, ಕಾರ್ಯಪಾಲಕ ಅಭಿಯಂತರರು (ದಕ್ಷಿಣ), ಸಹಾಯಕ ಕಾರ್ಯಪಾಲಕ ಅಭಿಯಂತರರು (ದಕ್ಷಿಣ), ಸಹಾಯಕ ಅಭಿಯಂತರರು ಮತ್ತು ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನಡೆಸಲಾಯಿತು ಎಂದು ಬಿ.ಡಿ.ಎ. ಅಧಿಕಾರಿಗಳು ತಿಳಿಸಿದ್ದಾರೆ.

## ಅವೈಜ್ಞಾನಿಕ ನಗರೀಕರಣಕ್ಕೆ ಕಡಿವಾಣ

### ರಸ್ತೆ ಜಾಗ ಬಿಡದೆ ಕಟ್ಟಡ ನಿರ್ಮಿಸಿದರೆ ಕಾನೂನು ಕ್ರಮ

ಬೆಂಗಳೂರು, ಸೆ. 29: ಬೆಂಗಳೂರಿನ ವಿಸ್ತರಣೆಗೆ ಅನುಗುಣವಾಗಿ ಮೂಲಸೌಕರ್ಯ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಾಗಿದ್ದು, ನಗರದ ಹೊರವಲಯದಲ್ಲಿ ಅವೈಜ್ಞಾನಿಕ ನಗರೀಕರಣಕ್ಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರ ಪ್ರಸ್ತುತ ಸುಮಾರು 750 ಚದರ ಕಿ.ಮೀ. ವ್ಯಾಪ್ತಿಯಲ್ಲಿದ್ದರೂ, ನಗರೀಕರಣ ಸುಮಾರು 1,200 ಚದರ ಕಿ.ಮೀ. ಪ್ರದೇಶದವರೆಗೆ ವಿಸ್ತರಿಸಿದೆ. ಈ ಪ್ರದೇಶಗಳಲ್ಲೂ ನಗರವೇ ರೂಪುಗೊಂಡಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಯೋಜನೆ ಇಲ್ಲದೆ ಕಟ್ಟಡಗಳು, ಲೇಔಟ್‌ಗಳು ನಿರ್ಮಾಣವಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ರಸ್ತೆ ನಿರ್ಮಾಣ ಹಾಗೂ ಮೂಲಸೌಕರ್ಯಕ್ಕೆ ಅಗತ್ಯ ಜಾಗವನ್ನು ಬಿಡದೆ ಮನೆ, ಅಪಾರ್ಟ್‌ಮೆಂಟ್ ಅಥವಾ ಯಾವುದೇ ಕಟ್ಟಡ ನಿರ್ಮಿಸಿದರೆ ಅದು ಕಾನೂನು ಉಲ್ಲಂಘನೆಯಾಗಲಿದೆ. ಅಧಿಸೂಚಿತ ಪ್ರದೇಶಗಳಿಗೆ ಯಾರೇ ಬಂದರೂ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಅಗತ್ಯ ಕಾನೂನು ರೂಪಿಸಲಾಗಿದ್ದು, ಅಧಿಕಾರಿಗಳು ಹಾಗೂ ಸಾರ್ವಜನಿಕರು ನಿಯಮ ಉಲ್ಲಂಘಿಸದಂತೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದರು.

**ಆನ್‌ಲೈನ್‌ನಲ್ಲಿ ದಾಖಲೆ**

ಅಧಿಸೂಚಿತ ಪ್ರದೇಶಗಳ ಗುರುತು ಹಾಗೂ ರಸ್ತೆ ಸೇರಿದಂತೆ ಮೂಲಸೌಕರ್ಯಕ್ಕೆ ಮೀಸಲಾದ ಜಾಗದ ಕುರಿತು ಫೋಟೋ, ವಿಡಿಯೋ ಸೇರಿದಂತೆ ಸಂಪೂರ್ಣ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸಲಾಗುವುದು. ಅಧಿಸೂಚಿತ ಪ್ರದೇಶಗಳ ಮಾರ್ಕಿಂಗ್ ಮಾಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಈ ಬಗ್ಗೆ ಸಾರ್ವಜನಿಕರಿಗೂ ಸಮರ್ಪಕ ಮಾಹಿತಿ ನೀಡಲಾಗುವುದು ಎಂದು ಕೃಷ್ಣ ಬೈರೇಗೌಡ ಹೇಳಿದರು.

ಬೆಂಗಳೂರು ಹೊರವಲಯದಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಹೆಚ್ಚಿನ ರಸ್ತೆಗಳು ಬರುತ್ತವೆ. ಹೀಗಾಗಿ ಜಿಬಿಎ, ಜಿಲ್ಲಾ ಪಂಚಾಯಿತಿ ಮತ್ತು ಲೋಕೋಪಯೋಗಿ ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಎಲ್ಲರೂ ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಅವೈಜ್ಞಾನಿಕ ನಗರೀಕರಣಕ್ಕೆ ಕಡಿವಾಣ ಹಾಕಲು ಸಾಧ್ಯ ಎಂದು ತಿಳಿಸಿದರು.

ಈ ಸಂಬಂಧ ಈಗಾಗಲೇ ಬಿಎಂಆರ್‌ಡಿಎಗೆ ಮಾಹಿತಿ ನೀಡಲಾಗಿದೆ. ಮುಖ್ಯಮಂತ್ರಿ ಅವರು ಕೂಡ ನಗರ ಮೂಲಸೌಕರ್ಯ ಹಾಗೂ ಯೋಜಿತ ಅಭಿವೃದ್ಧಿ ಕುರಿತು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದರು.

**ಹೊರವಲಯಕ್ಕೂ ಜಲಮಂಡಳಿ ವ್ಯಾಪ್ತಿ**

ಬೆಂಗಳೂರು ಹೊರವಲಯದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಜಲಮಂಡಳಿ ವ್ಯಾಪ್ತಿಯನ್ನೂ ವಿಸ್ತರಿಸಲಾಗಿದೆ. ನಗರೀಕರಣಕ್ಕೆ ಅಗತ್ಯವಾದ ಯೋಜನೆ ರೂಪಿಸಲಾಗಿದ್ದು, ನಗರದ ಸಮಗ್ರ ಅಭಿವೃದ್ಧಿಗೆ ಮಾಸ್ಟರ್‌ಪ್ಲ್ಯಾನ್ ಸಿದ್ಧಪಡಿಸಲಾಗಿದೆ ಎಂದು ಹೇಳಿದರು.

**ಸಂಚಾರಕ್ಕೆ ಮೊದಲ ಆದ್ಯತೆ**

ನಗರದ ಸಂಚಾರ ವ್ಯವಸ್ಥೆ ಸರ್ಕಾರದ ಮೊದಲ ಆದ್ಯತೆಯಾಗಿದೆ. ಬೆಂಗಳೂರಿನಲ್ಲಿ ಹೊಸದಾಗಿ ರೋಡ್ ಗ್ರಿಡ್ ರೂಪಿಸಲು ಯೋಜಿಸಲಾಗಿದೆ. ಜಿಬಿಎ ಹೊರಭಾಗದಲ್ಲೂ ಮೊಬಿಲಿಟಿ ವ್ಯವಸ್ಥೆ ಸುಧಾರಿಸಲು ರಸ್ತೆ ಗ್ರಿಡ್ ರಚಿಸಲಾಗುವುದು. ಹೊಸ ಸಿಡಿಪಿ ರಸ್ತೆಗಳ ನಿರ್ಮಾಣದ ಮೂಲಕ ನೂರಾರು ಹೊಸ ರಸ್ತೆಗಳು ನಿರ್ಮಾಣವಾಗಲಿವೆ ಎಂದು ಸಚಿವರು ತಿಳಿಸಿದರು.

ಇನ್ನು ಮುಂದೆ ನಗರದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಂಡರೂ ರಸ್ತೆ ಹಾಗೂ ಮೂಲಸೌಕರ್ಯಕ್ಕೆ ಅಗತ್ಯ ಜಾಗ ಕಡ್ಡಾಯವಾಗಿ ಬಿಡಬೇಕು. ಲೇಔಟ್, ಅಪಾರ್ಟ್‌ಮೆಂಟ್ ಸೇರಿದಂತೆ ಯಾವುದೇ ನಿರ್ಮಾಣವಾದರೂ ರಸ್ತೆಗಾಗಿ ಜಾಗ ಮೀಸಲಿಡುವಂತೆ ಪ್ರತ್ಯೇಕ ಕಾನೂನು ಜಾರಿಗೊಳಿಸಲಾಗಿದೆ. ಇದರಿಂದ ಬೆಂಗಳೂರನ್ನು ವೈಜ್ಞಾನಿಕವಾಗಿ ರೂಪಿಸಲು ಸಾಧ್ಯವಾಗಲಿದೆ ಎಂದು ಹೇಳಿದರು.

ನಗರದ ಒಳಭಾಗದಲ್ಲಿ ಈಗಾಗಲೇ ಎದುರಾಗಿರುವ ಸಮಸ್ಯೆಗಳು ಬೆಂಗಳೂರು ಹೊರವಲಯದಲ್ಲಿ ಮರುಕಳಿಸಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಭವಿಷ್ಯದ ಸಂಚಾರ ದಟ್ಟಣೆ ಹಾಗೂ ಮೂಲಸೌಕರ್ಯ ಸಮಸ್ಯೆಗಳನ್ನು ನಿಯಂತ್ರಿಸಲು ಸಹಕಾರಿಯಾಗಲಿದೆ ಎಂದರು.

**ಪ್ರಮುಖ ರಸ್ತೆಗಳ ಅಗಲೀಕರಣ**

ನಗರದ ಕೆಲವು ಪ್ರಮುಖ ರಸ್ತೆಗಳನ್ನು ಅಗಲೀಕರಣ ಮಾಡಲು ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ ಟಿಡಿಆರ್ ಹಾಗೂ ಅಗತ್ಯವಿರುವ ಕಡೆ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲಾಗುವುದು. ಆಸ್ತಿ ಮಾಲೀಕರು ಸರ್ಕಾರದ ಯೋಜನೆಗೆ ಸಹಕಾರ ನೀಡಬೇಕು. ರಸ್ತೆ ಅಗಲೀಕರಣದಿಂದ ಸಾರ್ವಜನಿಕರಿಗೆ ಮಾತ್ರವಲ್ಲದೆ ಸಂಬಂಧಪಟ್ಟ ಆಸ್ತಿ ಮಾಲೀಕರಿಗೂ ಭವಿಷ್ಯದಲ್ಲಿ ಅನುಕೂಲವಾಗಲಿದೆ ಎಂದು ಕೃಷ್ಣ ಬೈರೇಗೌಡ ಹೇಳಿದರು.




ಪಿಹೆಚ್‌ಸಿಓ ಹಾಗೂ ಹೆಚ್‌ಐಓ ಹುದ್ದೆಗಳಿಗೆ ಬಿಎಸ್‌ಸಿ ನರ್ಸಿಂಗ್ ಅರ್ಹತೆಯನ್ನು ಹಿಂಪಡೆಯುವಂತೆ ಹಾಗೂ ಸಿಹೆಚ್‌ಓಗಳ ಸೇವೆಯನ್ನು ಖಾಯಂ ಮಾಡುವಂತೆ ಒತ್ತಾಯಿಸಿ ರಾಜ್ಯ ಸಮುದಾಯ ಆರೋಗ್ಯ ಎನ್.ಹೆಚ್.ಎಂ. ಗುತ್ತಿಗೆ ನೌಕರರ ಸಂಘದ ಸದಸ್ಯರು, ನೌಕರರು ಇಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.

## 1.18 ಮೌಲ್ಯದ ಚಿನ್ನ ಬೆಳ್ಳಿ ಜಪ್ತಿ

### ವಿದ್ಯಾರ್ಥಿನಿ ಸೇರಿ 13 ಮಂದಿ ಕಳ್ಳರ ಸೆರೆ

ಬೆಂಗಳೂರು, ಸೆ.29– ಕನ್ನ ಕಳವು, ಮನೆ ಕಳವು ಹಾಗೂ ಸುಲಿಗೆ ನಡೆಸುತ್ತಿದ್ದ 13 ಮಂದಿ ಆರೋಪಿಗಳನ್ನು ಬಂಧಿಸಿ ಭರ್ಜರಿ ಬೇಟೆಯಾಡಿರುವ ಪುಟ್ಟೇನಹಳ್ಳಿ ಪೊಲೀಸರು 1.18 ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿದ್ದಾರೆ.

ಬಂಧಿತ ಆರೋಪಿಗಳಿಂದ 4.23 ಲಕ್ಷ ನಗದು ಸೇರಿ 1.18 ಮೌಲ್ಯದ 731 ಗ್ರಾಂ ಚಿನ್ನಾಭರಣ, 859 ಗ್ರಾಂ ಬೆಳ್ಳಿ ವಸ್ತುಗಳು, ಹಾಗೂ ಎರಡು ಆಟೋ ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ವಿವಿಧ ಪ್ರಕರಣಗಳ ತನಿಖೆ ಕೈಗೊಂಡ ಪೊಲೀಸರು, ಹಲವು ಆಯಾಮಗಳಲ್ಲಿ ಮಾಹಿತಿ ಕಲೆಹಾಕಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜೆ.ಪಿ.ನಗರ 6ನೇ ಹಂತದ ಜರಗನಹಳ್ಳಿಯ ರೋಹಿತ್ ದರ್ಜೀ (26) ಜೆ.ಪಿ.ನಗರ 6ನೇ ಹಂತದ ಅಬ್ಬಯ್ಯರೆಡ್ಡಿ ಲೇಔಟ್ ನಅಭಿಷೇಕ್ ಸಿ. (20) ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿದ್ದು, ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ,ಜೆ.ಪಿ.ನಗರ 6ನೇ ಹಂತದ ಅಬ್ಬಯ್ಯರೆಡ್ಡಿ ಲೇಔಟ್ ನ ಡಿಪ್ಲೊಮಾ ವಿದ್ಯಾರ್ಥಿನಿ ಪ್ರೇಕ್ಷಿತಾ ಜೆ. (20) ಕನಕಪುರ ರಸ್ತೆಯ ಗಣೇಶ ದೇವಸ್ಥಾನ ರಸ್ತೆಯ ಮಹೇಶ್ ಆರ್. (19) ಹೋಟೆಲ್ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದಾನೆ. .

ಜೆ.ಪಿ.ನಗರ 6ನೇ ಹಂತದ ಅನಿತಾ ಎನ್. (42) ಅಕ್ವಾಗಾರ್ಡ್ ಸರ್ವಿಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಳೆ.ಚುಂಚಘಟ್ಟದ ಪೇಂಟರ್ ಎಸ್. ವಂಶಿ (20),ಜರಗನಹಳ್ಳಿಯ ಕನಕನಗರದ ಆಟೋ ಚಾಲಕ ಮೊಹಮ್ಮದ್ ಅಬ್ಬರ್ ರೆಹಮಾನ್(35) ಜೆ.ಪಿ.ನಗರ 8ನೇ ಹಂತದ ಪದವೀಧರ ಡೆಲಿವರಿ ಬಾಯ್‌ಪಿಂಟುದಾಸ್ (34)ನೆಲಮಂಗಲ ತಾಲ್ಲೂಕಿನ ಅಪ್ಪೇಗೌಡನ ಪಾಳ್ಯದ ದೀಪಕ್ ಎ (25) ಸಿಗೆಹಳ್ಳಿಯ ಬೃಂದಾವನ ನಗರದ ನಾಗರಾಜು ಸಿ (26) ಕನಕನಗರ, ಕನಕಪುರ ಮುಖ್ಯರಸ್ತೆಯ ಕನಕನಗರ ಪ್ರತಾಪ್ ಪಿ. (35) ನೆಲಮಂಗಲ ತಾಲ್ಲೂಕಿನ ಸೋಂಪುರದ ಬಿ. ಶ್ರೀನಿವಾಸ (46) ಬಂಧಿತ ಆರೋಪಿಗಳಾಗಿದ್ದಾರೆ.

ಬಂಧಿತರ ಪೈಕಿ ಇಬ್ಬರು ಹೊರ ರಾಜ್ಯದವರು ಹಾಗೂ 11 ಮಂದಿ ಸ್ಥಳೀಯರಾಗಿದ್ದಾರೆ ಎಂದು ಹೇಳಿದರು.ವಿಚಾರಣೆ ವೇಳೆ ಆರೋಪಿಗಳು ಕಳವು ಮಾಡಿದ್ದ ಚಿನ್ನಾಭರಣ ಮತ್ತು ಬೆಳ್ಳಿ ವಸ್ತುಗಳನ್ನು ರಾಜಸ್ಥಾನ ಹಾಗೂ ನೆಲಮಂಗಲದ ಜ್ಯುವೆಲರಿ ಅಂಗಡಿಗಳಲ್ಲಿ ಅಡವಿಟ್ಟಿರುವುದು ಪತ್ತೆಯಾಗಿದೆ. ಆರೋಪಿಗಳಿಂದ 4.23 ಲಕ್ಷ ನಗದು ಹಾಗೂ ಎರಡು ಆಟೋರಿಕ್ಷಾಗಳನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಂಧಿರ ಹುಸೇನ್ (27) ರಾಜಸ್ಥಾನದ ಅಜ್ಮೇರ್ ಜಿಲ್ಲೆಯ ನಿವಾಸಿಯಾಗಿದ್ದು, 7ನೇ ತರಗತಿ ವ್ಯಾಸಂಗ ಮಾಡಿದ್ದಾನೆ. ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾನೆ.ಈತನ ವಿರುದ್ಧ ಆಂಧ್ರಪ್ರದೇಶದ ವಿವಿಧ ಪೊಲೀಸ್ ಠಾಣೆಗಳಲ್ಲಿ ಹಲವು ಹಳೆಯ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ಮಟವಾಡ, ಗುಡಿವಾಡ, ಒಂಗೋಲೆ ಹಾಗೂ ಕವಲಿ ಪೊಲೀಸ್ ಠಾಣೆಗಳ ಪ್ರಕರಣಗಳು ಸೇರಿವೆ.

ಆಟೋ ಚಾಲಕನಾಗಿದ್ದ ಆರೋಪಿ ಪ್ರತಾಪ್ ವಿರುದ್ಧ ವಿವಿಧ ಠಾಣೆಗಳಲ್ಲಿ ಹಲವು ಹಳೆಯ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ಕಮರ್ಷಿಯಲ್ ಸ್ಟ್ರೀಟ್, ಹನುಮಂತನಗರ, ಜೆ.ಪಿ.ನಗರ, ಕೋಣನಕುಂಟೆ, ಕುಮಾರಸ್ವಾಮಿ ಲೇಔಟ್, ಪುಟ್ಟೇನಹಳ್ಳಿ, ಸುಬ್ರಹ್ಮಣ್ಯಪುರ, ಚನ್ನಪಟ್ಟಣ ಗ್ರಾಮಾಂತರ, ಚನ್ನಪಟ್ಟಣ ಟೌನ್ ಹಾಗೂ ಕನಕಪುರ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಕಳವು ಮತ್ತು ಇತರ ಅಪರಾಧ ಪ್ರಕರಣಗಳು ಸೇರಿವೆ.

**10 ಪ್ರಕರಣಗಳು ಪತ್ತೆ:**

ಈ ಕಾರ್ಯಾಚರಣೆಯಿಂದ ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ನಾಲ್ಕು ಕನ್ನ ಕಳವು, ಎರಡು ಮನೆ ಕಳವು ಹಾಗೂ ಮೂರು ಸುಲಿಗೆ ಪ್ರಕರಣಗಳು ಸೇರಿದಂತೆ ಒಟ್ಟು ಒಂಬತ್ತು ಪ್ರಕರಣಗಳು ಪತ್ತೆಯಾಗಿವೆ. ಜೊತೆಗೆ ಮೈಕೋ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ಒಂದು ಸುಲಿಗೆ ಪ್ರಕರಣವೂ ಪತ್ತೆಯಾಗಿದ್ದು, ಒಟ್ಟು 10 ಪ್ರಕರಣಗಳು ಬೆಳಕಿಗೆ ಬಂದಿವೆ.

ಪತ್ತೆಯಾದ ಪ್ರಕರಣಗಳಲ್ಲಿ ನಾಲ್ಕು ಕನ್ನ ಕಳವು ಪ್ರಕರಣಗಳಿಗೆ ಸಂಬಂಧಿಸಿದಂತೆ 670 ಗ್ರಾಂ ಚಿನ್ನಾಭರಣ, 859 ಗ್ರಾಂ ಬೆಳ್ಳಿ ವಸ್ತುಗಳು ಹಾಗೂ 3.21 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ನಾಲ್ಕು ಸುಲಿಗೆ ಪ್ರಕರಣಗಳಲ್ಲಿ 57 ಗ್ರಾಂ ಚಿನ್ನಾಭರಣ ಹಾಗೂ ಎರಡು ಆಟೋರಿಕ್ಷಾಗಳು ಪತ್ತೆಯಾಗಿವೆ.

**ನ್ಯಾಯಾಲಯಕ್ಕೆ ಹಾಜರು**

ಇನ್ನು ಒಂದು ಮನೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಚಿನ್ನ ಹಾಗೂ ವಜ್ರದ ಆಭರಣಗಳು ಮತ್ತು1.02 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ 10 ಪ್ರಕರಣಗಳಿಂದ 731 ಗ್ರಾಂ ಚಿನ್ನಾಭರಣ, 859 ಗ್ರಾಂ ಬೆಳ್ಳಿ ವಸ್ತುಗಳು, 4.23 ಲಕ್ಷ ನಗದು ಹಾಗೂ ಎರಡು ಆಟೋರಿಕ್ಷಾಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಬಂಧಿತ 13 ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ.ದಕ್ಷಿಣ ವಿಭಾಗದ ಉಪ ಪೊಲೀಸ್ ಆಯುಕ್ತ ಡಾ. ವಂಶಿಕೃಷ್ಣ ಮಾರ್ಗದರ್ಶನದಲ್ಲಿ ಪುಟ್ಟೇನಹಳ್ಳಿ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಮುನಿರೆಡ್ಡಿ.ವಿ. ಮತ್ತವರ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

## ಕಚ್ಚಾ ತೈಲ ದುಬಾರಿ ಷೇರು ಮಾರುಕಟ್ಟೆ ತಲ್ಲಣ

ನವದೆಹಲಿ, ಸೆ.29: ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್‌ಗಿಂತ ಮೇಲೇರಿರುವುದು ಭಾರತೀಯ ಷೇರು ಮಾರುಕಟ್ಟೆಯ ಮೇಲೆ ಮತ್ತಷ್ಟು ಒತ್ತಡ ತಂದಿದೆ. ತೈಲ ಬೆಲೆ ಏರಿಕೆಯ ಪರಿಣಾಮ ಕೇವಲ ತೈಲ ಕಂಪನಿಗಳಿಗೆ ಸೀಮಿತವಾಗದೆ, ರೂಪಾಯಿ ಮೌಲ್ಯ, ಹಣದುಬ್ಬರ, ಕಂಪನಿಗಳ ಲಾಭಾಂಶ ಹಾಗೂ ದೇಶದ ಚಾಲ್ತಿ ಖಾತೆ ಮೇಲೂ ಪರಿಣಾಮ ಬೀರುವ ಆತಂಕ ಎದುರಾಗಿದೆ.

ಇಂದು ಬೆಳಗ್ಗೆ ಸೆನ್ಸೆಕ್ಸ್ ಸುಮಾರು 650 ಅಂಕ ಕುಸಿದು 72,100ರ ಆಸುಪಾಸಿನಲ್ಲಿದ್ದರೆ, ನಿಫ್ಟಿ 22,500ರ ಮಟ್ಟ ಕಾಯ್ದುಕೊಳ್ಳಲು ಪರದಾಡಿತು. ಸೋಮವಾರ ಸೆನ್ಸೆಕ್ಸ್ 1,124 ಅಂಕ ಹಾಗೂ ನಿಫ್ಟಿ ಶೇ.1.56ರಷ್ಟು ಕುಸಿದಿದ್ದವು.ಬ್ರೆಂಟ್ ಕಚ್ಚಾ ತೈಲದ ಬೆಲೆ ಮಂಗಳವಾರ ಸುಮಾರು 107 ಡಾಲರ್‌ಗೆ ಏರಿದೆ.

ಭಾರತ ತನ್ನ ಅಗತ್ಯದ ಸುಮಾರು 88.7% ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುವುದರಿಂದ, ಬೆಲೆ ಏರಿಕೆ ನೇರವಾಗಿ ಆಮದು ವೆಚ್ಚ ಮತ್ತು ಡಾಲರ್ ಬೇಡಿಕೆಯನ್ನು ಹೆಚ್ಚಿಸುತ್ತದೆ. ಪರಿಣಾಮವಾಗಿ ರೂಪಾಯಿ ಮೌಲ್ಯಕ್ಕೂ ಒತ್ತಡ ಬೀಳುತ್ತದೆ.ಪೆಟ್ರೋಲ್ ಮತ್ತು ಡೀಸೆಲ್ ದರಗಳು ಕಚ್ಚಾ ತೈಲದ ಏರಿಕೆಗೆ ಅನುಗುಣವಾಗಿ ಸಂಪೂರ್ಣವಾಗಿ ಹೆಚ್ಚಳವಾಗದಿರುವುದರಿಂದ ಸರ್ಕಾರಿ ತೈಲ ಮಾರುಕಟ್ಟೆ ಕಂಪನಿಗಳಾದ ಇಂಡಿಯನ್ ಆಯಿಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್‌ಗಳ ಮಾರ್ಜಿನ್ ಮೇಲೆ ಒತ್ತಡ ಹೆಚ್ಚಾಗಿದೆ. ಐಸಿಆರ್‌ಎ ಅಂದಾಜಿನ ಪ್ರಕಾರ, ಪ್ರಸ್ತುತ ಪೆಟ್ರೋಲ್‌ನಲ್ಲಿ ಲೀಟರ್‌ಗೆ ಸುಮಾರು 8 ಹಾಗೂ ಡೀಸೆಲ್‌ನಲ್ಲಿ 9ರಷ್ಟು ನಷ್ಟ ಎದುರಾಗುತ್ತಿದೆ.



ಬ್ರೆಂಟ್ ಬೆಲೆ FY27ರ ಉಳಿದ ಅವಧಿಯಲ್ಲಿ 105–115 ಡಾಲರ್ ನಡುವೆ ಮುಂದುವರಿದು, ದೇಶೀಯ ಇಂಧನ ದರಗಳಲ್ಲಿ ಬದಲಾವಣೆ ಆಗದಿದ್ದರೆ, ತೈಲ ಕಂಪನಿಗಳ ಪೆಟ್ರೋಲ್–ಡೀಸೆಲ್ ಅಂಡರ್–ರಿಕವರಿ ಸುಮಾರು 64,000 ಕೋಟಿ ತಲುಪಬಹುದು ಎಂದು ಐಸಿಆರ್‌ಎ ಅಂದಾಜಿಸಿದೆ.

ದುಬಾರಿ ತೈಲದಿಂದ ವಿಮಾನಯಾನ, ಬಣ್ಣ, ರಾಸಾಯನಿಕ, ಟೈರ್, ಪ್ಲಾಸ್ಟಿಕ್, ಪ್ಯಾಕೇಜಿಂಗ್ ಮತ್ತು ಸಾರಿಗೆ ಕ್ಷೇತ್ರಗಳ ವೆಚ್ಚವೂ ಹೆಚ್ಚಾಗಬಹುದು. ಕಂಪನಿಗಳು ಈ ಹೆಚ್ಚುವರಿ ವೆಚ್ಚವನ್ನು ಗ್ರಾಹಕರಿಗೆ ವರ್ಗಾಯಿಸಲು ಸಾಧ್ಯವಾಗದಿದ್ದರೆ, ನೇರವಾಗಿ ಲಾಭಾಂಶದ ಮೇಲೆ ಹೊಡೆತ ಬೀಳಲಿದೆ.

ಇದರ ಜೊತೆಗೆ, ಹೆಚ್ಚಿನ ತೈಲ ಬೆಲೆ ಆಮದು ಬಿಲ್ ಹೆಚ್ಚಿಸಿ ಚಾಲ್ತಿ ಖಾತೆ ಕೊರತೆ ಮತ್ತು ಹಣದುಬ್ಬರದ ಆತಂಕವನ್ನು ಹೆಚ್ಚಿಸಬಹುದು. ದೀರ್ಘಕಾಲ ತೈಲ ಬೆಲೆ 100 ಡಾಲರ್‌ಗಿಂತ ಮೇಲಿದ್ದರೆ ಆರ್ಥಿಕ ಬೆಳವಣಿಗೆ ಹಾಗೂ ಕಂಪನಿಗಳ ಗಳಿಕೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

ಮಾರುಕಟ್ಟೆ ಕುಸಿತಕ್ಕೆ ಕಚ್ಚಾ ತೈಲವೇ ಏಕೈಕ ಕಾರಣವಲ್ಲ. ಸೆಪ್ಟೆಂಬರ್‌ನಲ್ಲಿ ವಿದೇಶಿ ಪೋರ್ಟ್‌ಫೋಲಿಯೊ ಹೂಡಿಕೆದಾರರು ಇದುವರೆಗೆ 17,131 ಕೋಟಿ ಮೌಲ್ಯದ ಭಾರತೀಯ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಅಮೆರಿಕದ ಬಾಂಡ್‌ಗಳ ಹೆಚ್ಚಿನ ಇಳುವರಿ ಮತ್ತು ಜಾಗತಿಕ ಅನಿಶ್ಚಿತತೆಯೂ ಭಾರತೀಯ ಮಾರುಕಟ್ಟೆಯ ಮೇಲೆ ಒತ್ತಡ ತಂದಿವೆ.

ಹೀಗಾಗಿ, ಒಂದು ದಿನದ ತೈಲ ಬೆಲೆಗಿಂತ ಕಚ್ಚಾ ತೈಲದ ಬೆಲೆ ಎಷ್ಟು ಕಾಲ 100 ಡಾಲರ್‌ಗಿಂತ ಮೇಲಿರುತ್ತದೆ ಎಂಬುದೇ ಮಾರುಕಟ್ಟೆಗೆ ಪ್ರಮುಖ ಪ್ರಶ್ನೆಯಾಗಿದೆ.

ದೀರ್ಘಕಾಲದ ದುಬಾರಿ ತೈಲವು ರೂಪಾಯಿ, ಹಣದುಬ್ಬರ, ಸರ್ಕಾರಿ ಹಣಕಾಸು, ಕಂಪನಿಗಳ ಲಾಭ ಮತ್ತು ಷೇರು ಮೌಲ್ಯಗಳ ಮೇಲೆ ಸರಣಿ ಪರಿಣಾಮ ಬೀರುವ ಸಾಧ್ಯತೆಯಿದೆ.

## ಹಣಕಾಸು ಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಲು ಬಿವೈವಿ ಆಗ್ರಹ



ಬೆಂಗಳೂರು, ಸೆ. 29– ಬರದಿಂದ ಸಂಕಷ್ಟದಲ್ಲಿರುವ ರೈತರಿಗೆ ದೊಡ್ಡ ಮೊತ್ತದ ಪರಿಹಾರ ನೀಡದೆ ರಾಜ್ಯ ಸರ್ಕಾರ ರೈತರ ಬದುಕಿನ ಜತೆ ಚೆಲ್ಲಾಟವಾಡುತ್ತಿದೆ ಎಂದು ಆರೋಪಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ರಾಜ್ಯದ ಹಣಕಾಸು ಪರಿಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸಲಿ ಎಂದು ಆಗ್ರಹಿಸಿದರು.

ಬಿಜೆಪಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶೇಷ ಅಧಿವೇಶನದಲ್ಲಿ ರಾಜ್ಯ ಸರ್ಕಾರ ರೈತರಿಗೆ ಬರ ಪರಿಹಾರವಾಗಿ ಎಕರೆಗೆ ಕನಿಷ್ಠ 50 ಸಾವಿರ ರೂ. ಕೊಡಬೇಕು ಎಂದು ನಾವು ಆಗ್ರಹಿಸಿದ್ದೇವು. ಆದರೆ ಭಿಕ್ಷುಕರಿಗೆ ನೀಡುವ ಹಾಗೆ 2500 ರೂ. ಪರಿಹಾರ ನೀಡಿ ಕೈಚೆಲ್ಲಿ ಕುಳಿತಿದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಬರಗಾಲದಲ್ಲಿ ರೈತರಿಗ ಸ್ಪಂದನೆ ಮಾಡಿ ಅವರ ಸಂಕಷ್ಟಕ್ಕೆ ರಾಜ್ಯ ಸರ್ಕಾರ ನೆರವಾಗಬೇಕಿತ್ತು. ಆದರೆ ರಾಜ್ಯ ಸರ್ಕಾರದಿಂದ ರೈತರಿಗೆ ನೆರವು ಸಿಗುತ್ತಿಲ್ಲ. ಇದನ್ನು ಖಂಡಿಸುತ್ತೇವೆ ಎಂದರು.

ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್‌ಗೆ ಸರ್ಕಾರ ನಡೆಸುವುದು ಕಷ್ಟವಾಗಿದೆ. ಹಣಕಾಸು ಪರಿಸ್ಥಿತ ಹದಗೆಟ್ಟಿದೆ. ಕೂಡಲೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಣಕಾಸು ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಒತ್ತಾಯಿಸಿದರು.

ಗ್ಯಾರಟಿ ಅನುಷ್ಠಾನ ಸಮಿತಿ ಮಾಡಿ ಕಾರ್ಯಕರ್ತರ ಹೊಟ್ಟೆ ತುಂಬಿಸುವ ಕೆಲವನ್ನು ಈ ಸರ್ಕಾರ ಮಾಡುತ್ತಿದೆ. ಜನರ ತೆರಿಗೆ ಹಣದಲ್ಲಿ ಇವರಿಗೆ ಸಂಬಳ ಕೊಡುತ್ತಿದೆ. ಇದು ಸರಿಯಲ್ಲ ಎಂದರು

ಚುನಾವಣೆಯಲ್ಲಿ ಸೋತು ಜನರ ವಿಶ್ವಾಸ ಕಳೆದುಕೊಂಡಿರುವ ಕಾಂಗ್ರೆಸ್ ಪಕ್ಷ ಅರಾಜ–ಕತೆ ಸೃಷ್ಟಿಸಲು ಮುಂದಾಗಿದೆ. ಹಾಗಾಗಿಯೇ ಚುನಾವಣಾ ಮುಖ್ಯ ಆಯುಕ್ತರ ವಿರುದ್ಧ ಹೋರಾಟಕ್ಕೆ ಮುಂದಾಗಿ ಪ್ರಧಾನಿಗಳ ವಿರುದ್ಧವೂ ಸುಖಾಸುಮ್ಮನೆ ಆರೋಪ ಮಾಡುತ್ತಿದೆ ಎಂದು ದೂರಿದರು

ಪ್ರಧಾನಿ ಮೋದಿ ಅವರ ಅಧಿಕಾರ ಅವಧಿಯಲ್ಲೇ ಕಾಂಗ್ರೆಸ್ ಪಕ್ಷ ಹಲವು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಲ್ಲವೆ ಎಂದು ಪ್ರಶ್ನಿಸಿದ ಅವರು, ಇಷ್ಟಾದರೂ ಕಾಂಗ್ರೆಸ್ ಅಪಪ್ರಚಾರ ಮಾಡಿಕೊಂಡು ಚುನಾವಣಾ ಆಯೋಗದ ನೆಪದಲ್ಲಿ ಪ್ರಧಾನಿ ಮೋದಿ ಅವರನ್ನು ಗುರಿಯಾಗಿಸಿ ಆರೋಪ ಮಾಡುತ್ತಿದೆ. ಕಾಂಗ್ರೆಸ್‌ನವರು ಮುಠ್ಠಾಳರು ಎನ್ನುವುದು ಜನತೆಗೆ ಗೊತ್ತಿದೆ. ಮೋದಿ ಅವರ ಜನಪ್ರಿಯತೆ ಸಹಿಸದೆ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ ಎಂದರು.

ಪ್ರಧಾನಿ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆಯ ನೆನಪಿನಲ್ಲಿ ಅಕ್ಟೋಬರ್ 1 ರಿಂದ ಸೇವಾ ಸಂಕಲ್ಪ ಕಾರ್ಯಕ್ರಮಗಳನ್ನು ವಿವಿಧ ಜಿಲ್ಲೆಗಳಲ್ಲಿ ನಡೆಸುತ್ತಿರುವುದಾಗಿಯೂ ಹೇಳಿದರು.

ಶಿವಮೊಗ್ಗದ ಶಿಕಾರಿಪುರದಿಂದ ಕಾಂಗ್ರೆಸ್ ಪಕ್ಷ ಭಾರತ್ ಜೋಡೋ ಯಾತ್ರೆ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಮ್ಮ ಬಳ್ಳಾರಿ ಪಾದಯಾತ್ರೆಯಿಂದ ಪ್ರೇರಣೆ ಪಡೆದು ಕಾಂಗ್ರೆಸ್ ಈ ಪಾದಯಾತ್ರೆ ಮಾಡುತ್ತಿದೆ. ಶಿಕಾರಿಪುರದಿಂದ ಪಾದಯಾತ್ರೆ ಆರಂಭಿಸುವುದಕ್ಕೆ ನಮ್ಮ ವಿರೋಧವೇನಿಲ್ಲ. ಶಿಕಾರಿಪುರಕ್ಕೆ ಕಾಂಗ್ರೆಸ್ ನಾಯಕರು ಬಂದು ಅಲ್ಲಿನ ಅಭಿವೃದ್ಧಿಯನ್ನು ನೋಡಿ ಹೋಗಲಿ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಇದುವರೆಗೂ ಒಂದು ಚುನಾವಣೆ ಗೆದ್ದಿಲ್ಲ. ಅವರು ಶಿಕಾರಿಪುರಕ್ಕೆ ಬರಲಿ ನಮ್ಮ ಅಭಿವೃದ್ಧಿಯನ್ನು ನೋಡಲಿ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಂಸದ ಪಿ.ಸಿ. ಮೋಹನ್, ಶಾಸಕರಾದ ಬೈರತಿ ಬಸವರಾಜು, ಸಿ.ಟಿ. ರವಿ ಮತ್ತಿತರರು ಉಪಸ್ಥಿತರಿದ್ದರು.